॥ ಪ್ರಸೀದತು ಶ್ರೀ ವೀರಾಂಜನೇಯಃ ॥

# ಹೇಮಪುರ

ಶ್ರೀಕ್ಷೇತ್ರ ಬಂಗಾರಮಕ್ಕಿಯಿಂದ ಹೊರಬರುವ ಧಾರ್ಮಿಕ, ಪಾರಮಾರ್ಥಿಕ, ನೈತಿಕ ಹಾಗೂ ಲೋಕ ಹಿತಚಿಂತನೆಗಳ ಮಾಸಪತ್ರಿಕೆ

# HEMAPURA

**Shri Kshethra Bangaramakki**
**Post Gerasoppa - 581 384**
**Honnavara Taluk, Uttara Kannada Dist.**

ಗೌರವ ಸಂಪಾದಕರು:
**ಪ.ಪೂ. ಶ್ರೀ ಮಾರುತಿ ಗುರೂಜಿಯವರು**
ಧರ್ಮಾಧಿಕಾರಿಗಳು
ಶ್ರೀಕ್ಷೇತ್ರ ಬಂಗಾರಮಕ್ಕಿ

ಸಂಪಾದಕರು:
**ತೇಜಸ್ವಿ**

ಸಲಹೆಗಾರರು:
**ಶ್ರೀ ರಾಮಚಂದ್ರ ಭಟ್ಟರು, ಶ್ರೀಕ್ಷೇತ್ರ ಬಂಗಾರಮಕ್ಕಿ**
**ಶ್ರೀ ರವೀಶ, ವಕೀಲರು, ಸಾಗರ**
**ಶ್ರೀ ನಾಗರಾಜ್ ನಾಯಕ್, ವಕೀಲರು, ಕಾರವಾರ**
**ಶ್ರೀ ನಾಗರಾಜ್ ಶೇಟ್, ಶಿರಸಿ**
**ಶ್ರೀ ಭೋಗಾನಂದ, ಶಿವಮೊಗ್ಗ**
**ಶ್ರೀ ಪ್ರವೀಣ್, ಬೆಂಗಳೂರು**
**ಶ್ರೀ ಜಿ.ಎಚ್. ನಾಯ್ಕ್, ಹೊನ್ನಾವರ**
**ಶ್ರೀ ಕೆ. ಮನೋಹರ್, ಬೆಂಗಳೂರು**
**ಶ್ರೀ ಡಿ.ಎಂ. ಸತೀಶ್, ತುಮಕೂರು**

ವಿನ್ಯಾಸ, ಅಕ್ಷರ ಜೋಡಣೆ ಮತ್ತು ಸಲಹೆಗಾರರು:
**ಶ್ರೀ ವೀರಾಂಜನೇಯ ಪ್ರಕಾಶನ**
ಶ್ರೀಕ್ಷೇತ್ರ ಬಂಗಾರಮಕ್ಕಿ, ಪೋ: ಗೇರಸೊಪ್ಪಾ-581 384.
ತಾ: ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ.
ದೂ: 08387-268544, 268333, 268545

ಮುದ್ರಕರು:
**ಸಾಯಿನಾಥ ಗ್ರಾಫಿಕ್ಸ್, ಬೆಂಗಳೂರು**

## ಒಳಪುಟಗಳಲ್ಲಿ

ಸಚ್ಚಿಂತನ........ 2
ಸಂಪಾದಕೀಯ........ 3
ವಕಾಲತ್........ 4
ಮಧುರ ಪ್ರಕಾಶನದ ಸೌಜನ್ಯದೊಂದಿಗೆ ........ 5
ಶ್ರೀಧರ ಸ್ಮರಣೆ ........ 7
ಶ್ರೀರಾಮ ಕಥಾಸಾರ ........ 7
ಸಂಪ್ರದಾಯ ........ 9
ಪರಮೇಶ್ವರನ ಇಪ್ಪತ್ತೈದು ಲೀಲೆಗಳು ........ 10
ಮಹಾಕ್ಷತ್ರಿಯ ........ 11
ಬದುಕಲೊಂದಿಷ್ಟು ಆಪ್ತಮಾತುಗಳು ........ 13
ಧರೆಗಿಳಿದ ದಿವ್ಯತೇಜ ........ 14
ಕಗ್ಗದ ಬೆಳಕಿನಲ್ಲಿ ........ 16
ಹಸಿರ ಸಿರಿ - ಕವನ ........ 18
ಔಷಧೀಯ ಸಸ್ಯ ಸಂಪತ್ತು ........ 19
ಸುಂದರಕಾಂಡದ ಸೌಂದರ್ಯ ........ 20
ಯಕ್ಷಪೌರ್ಣಿಮೆ-2018ರ ವರದಿ ........ 20
ಆನೋ ಭದ್ರಾಃ ಕ್ರತವೋಯಂತು ವಿಶ್ವತಃ ........ 21
ನಮಸ್ಕಾರ ಒಂದು ಒಳ್ಳೇ ಸಂಸ್ಕೃತಿ ........ 22
ವಚನಭಾಗವತ ........ 22
ನೇಸರ - ಕವನ ........ 24
ಪದಬಂಧ-38 ........ 24

**ಹೇಮಪುರ ಘನ ಗಂಭೀರ**

ಘನವಂತ ಬಲವಂತ ಇಷ್ಟಾರ್ಥ ದಾತ
ಭಕ್ತವತ್ಸಲನೆಂಬ ಬಿರುದು ಹೊತ್ತಾತ
ವೀರಾಂಜನೇಯನಿವ ತನ್ನ ಸೇವಿಸುವ
ಭಕ್ತರನು ಉದ್ಧರಿಸಿ ಗುರಿಯ ಮುಟ್ಟಿಸುವ.

卐

ದರ್ಶನದ ಲಾಭವಿದೆ ತಾಪಕಿದೆ ಪರಿಹಾರ
ಹರ್ಷವೇ ಮೈವೆತ್ತಿ ನರ್ತಿಸುವುದಿಲ್ಲಿ
ಆಕರ್ಷಣೀಯವಹ ಲೋಕಹಿತ ಕಾರ್ಯಗಳ
ವರ್ಷದುದ್ದಕು ನಡೆಸುತಿಹನು ಮಾರುತಿಯು

**ಪ್ರಕಟಣೆ: ಪತ್ರಿಕೆಯು ಪ್ರಕಟವಾದ ಒಂದು ವಾರದಲ್ಲಿ ನಮ್ಮ ಅಂತರ್ಜಾಲದಲ್ಲೂ ಲಭ್ಯ www.bangaramakki.org**

# ಮಿಥ್ಯಾಗರ್ವಿತ ಜೀವನದಿಂದ ಸತ್ಯಜೀವನದೆಡೆಗೆ



ಈ ಭೌತಿಕ ದೇಹ, ಮನಸ್ಸುಗಳು ಆಧ್ಯಾತ್ಮಜೀವಿಗೆ ದೊರೆತ ಕನಿಷ್ಠ ಸೌಕರ್ಯಗಳಾಗಿವೆ. ಜೀವಿಗಳು ಆಧ್ಯಾತ್ಮಿಕ ಜಗತ್ತಿನಲ್ಲಿ ಮಾಡಬೇಕಾದ ಕರ್ತವ್ಯಗಳಿವೆ. ಈ ಭೌತಿಕ ಜಗತ್ತು ಜಡರೂಪವಾಗಿದ್ದು, ಆಧ್ಯಾತ್ಮಿಕ ಜೀವ ಕಣಗಳು ಸ್ಫುರಿಸುತ್ತಿರುವವರೆಗೆ ಈ ಜಡವಸ್ತುವು ಸಜೀವವಾಗಿ ಕಾಣುತ್ತದೆ. ನಿಜವಾಗಿ ನೋಡಿದರೆ ಭಗವಂತನ ವಿಭಿನ್ನಾಂಶಗಳಾಗಿರುವ ಜೀವಾತ್ಮರೇ ಜಗತ್ತಿನ ಚಾಲನೆಗೆ ಕಾರಣರಾಗಿದ್ದಾರೆ. ಶ್ರೇಷ್ಠ ಜ್ಞಾನಿಯಿಂದ ಅಥವಾ ದಿವ್ಯ ಗುರುವಿನಿಂದ ಜ್ಞಾನಾರ್ಜನೆ ಮಾಡಿದ ಜೀವಾತ್ಮರೇ ಧೀರರಾಗಿದ್ದಾರೆ. ಇಂತಹ ಧೀರರು ನಿಯಂತ್ರಣ ತತ್ತ್ವಗಳನ್ನು ಅನುಸರಿಸಿ ಜ್ಞಾನವನ್ನು ಸಂಪಾದಿಸುತ್ತಾರೆ. ಹಾಗಾಗಿ ಭಗವದ್ಗೀತೆಯಲ್ಲಿ ಹದಿಮೂರನೇ ಅಧ್ಯಾಯದಲ್ಲಿ ಹೇಳಿದ ಹಾಗೆ ಜೀವಾತ್ಮರು ಈ ಕೆಳಗಿನ ವಿಧಾನದಲ್ಲಿ ಜ್ಞಾನಾರ್ಜನೆ ಮಾಡಬೇಕು.

1) ಜೀವನು ಸ್ವತಃ ತಾನು ಅತ್ಯಂತ ಸಭ್ಯನಾಗಬೇಕು ಮತ್ತು ಇತರರನ್ನು ಸರಿಯಾಗಿ ಗೌರವಿಸಲು ಕಲಿಯಬೇಕು.
2) ಕೇವಲ ಕೀರ್ತಿಗಾಗಿ ಅಥವಾ ಹೆಸರಿಗಾಗಿ ತಾನು ಧರ್ಮಿಷ್ಠನೆಂದು ತೋರಿಸಿಕೊಳ್ಳಕೂಡದು.
3) ತನ್ನ ದೈಹಿಕ ಕೃತಿಗಳಿಂದಾಗಿ ಅಥವಾ ಮಾನಸಿಕ ವಿಚಾರಗಳಿಂದಾಗಿ ಅಥವಾ ಮಾತಿನಿಂದ ಮತ್ತೊಬ್ಬರಿಗೆ ವ್ಯಾಕುಲತೆಯನ್ನುಂಟುಮಾಡಬಾರದು.
4) ಇತರರು ಕೆಣಕಿದಾಗಲೂ ಕೂಡ ಶಾಂತನಾಗಿರಬೇಕು.
5) ಮತ್ತೊಬ್ಬರೊಂದಿಗೆ ವ್ಯವಹರಿಸುವಾಗ ಇಬ್ಬಗೆಯ ನೀತಿಯನ್ನು ಅನುಸರಿಸಕೂಡದು.
6) ಆತ್ಮಸಾಕ್ಷಾತ್ಕಾರದ ಕಡೆಗೆ ಕ್ರಮೇಣ ಕೊಂಡೊಯ್ಯುವಂತಹ ಒಬ್ಬ ಸದ್ಗುರುವನ್ನು ಹುಡುಕಿಕೊಳ್ಳಬೇಕು ಮತ್ತು ಅಂತಹ ಗುರುವಿಗೆ ಶರಣಾಗಬೇಕು. ಅವನ ಸೇವೆ ಮಾಡಬೇಕು ಮತ್ತು ಸುಸಂಬದ್ಧವಾದ, ತರ್ಕಬದ್ಧವಾದ ಪ್ರಶ್ನೆಗಳನ್ನು ಕೇಳಬೇಕು.
7) ಆತ್ಮ ಸಾಕ್ಷಾತ್ಕಾರದ ವೇದಿಕೆಯನ್ನು ತಲುಪಲು ದೃಷ್ಟ ಶಾಸ್ತ್ರಗಳಲ್ಲಿ ವಿಧಿಸಿದ ನಿಯಂತ್ರಣ ತತ್ತ್ವಗಳ ಕ್ರಮವನ್ನೇ ಅನುಸರಿಸಬೇಕು.
8) ದೃಷ್ಟಶಾಸ್ತ್ರಗಳ ತತ್ತ್ವಗಳಲ್ಲಿ ನಿಷ್ಠನಾಗಿರಬೇಕು.
9) ಆತ್ಮ ಸಾಕ್ಷಾತ್ಕಾರಕ್ಕೆ ಹಾನಿಕಾರಕವಾದಂತಹ ವಿಷಯಗಳಿಂದ ಸಂಪೂರ್ಣವಾಗಿ ದೂರವಿರಬೇಕು.
10) ತನ್ನ ದೇಹ ರಕ್ಷಣೆಗೆ ಬೇಕಾಗುವಷ್ಟಕ್ಕಿಂತ ಹೆಚ್ಚಿನದನ್ನು ಸ್ವೀಕರಿಸಕೂಡದು.
11) ತಾನು ಭೌತಿಕ ದೇಹವೆಂದು ಮತ್ತು ಅ ದೇಹ ಸಂಬಂಧಿಗಳನ್ನು ತನ್ನವರೆಂದು ತಪ್ಪಾಗಿ ಗುರುತಿಸಿಕೊಳ್ಳಕೂಡದು.
12) ಭೌತಿಕ ದೇಹವಿರುವವರೆಗೆ ಜನನ, ಮರಣ, ವೃದ್ಧಾಪ್ಯ, ರೋಗರುಜಿನ ಈ ದುಃಖಗಳನ್ನು ಅನುಭವಿಸಲೇಬೇಕಾಗಿರುವುದೆಂಬುದನ್ನು ಸದಾ ನೆನಪಿನಲ್ಲಿಡಬೇಕು. ಈ ಭೌತಿಕ ದೇಹದ ಕ್ಲೇಶಗಳಿಂದ ದೂರಾಗಲು ಯೋಚನೆ ಮಾಡಿ ಫಲವಿಲ್ಲ. ಯಾವ ಮಾರ್ಗದಿಂದ ತಾನು ತನ್ನ ಸ್ವರೂಪ ಜ್ಞಾನವನ್ನು ಹೊಂದಬಹುದೋ ಆ ವಿಧಾನವನ್ನು ಕಂಡುಕೊಳ್ಳುವುದೇ ಅತ್ಯುತ್ತಮ ಮಾರ್ಗವಾಗಿದೆ.
13) ಆಧ್ಯಾತ್ಮಿಕ ಮುನ್ನಡೆಗೆ ಅಗತ್ಯವಾದುದಕ್ಕಿಂತ ಹೆಚ್ಚಿನದರಲ್ಲಿ ಅನುರಕ್ತನಾಗಿರಕೂಡದು.
14) ದೃಷ್ಟ ಶಾಸ್ತ್ರಗಳು ವಿಧಿಸಿದ್ದಕ್ಕಿಂತ ಹೆಚ್ಚಾಗಿ ಹೆಂಡತಿ ಮಕ್ಕಳಲ್ಲಿ ವ್ಯಾಮೋಹ ಹೊಂದಿರಕೂಡದು.
15) ಮನೋಜನ್ಯವಾದ ಇಷ್ಟಾನಿಷ್ಟಗಳಿಂದ ಹರ್ಷಿತನೂ ಆಗಬಾರದು. ದುಃಖಿತನೂ ಆಗಬಾರದು.
16) ಪರಮ ದೇವೋತ್ತಮ ಪುರುಷನಾದ ಭಗವಂತನಲ್ಲಿ ಶುದ್ಧ ಭಕ್ತನಾಗಿರಬೇಕು ಮತ್ತು ಅತ್ಯಂತ ಲಕ್ಷವಿಟ್ಟು ಅವನ ಸೇವೆ ಮಾಡಬೇಕು.
17) ಆಧ್ಯಾತ್ಮಿಕ ಸಂಸ್ಕೃತಿಗೆ ಅನುಕೂಲವಾದಂತಹ ಶಾಂತವಾತಾವರಣದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಮತ್ತು ಭಕ್ತಿ ಹೀನರು ಹೆಚ್ಚಾಗಿರುವ ಸ್ಥಳಗಳಲ್ಲಿರಕೂಡದು.
18) ಭೌತಿಕ ಜ್ಞಾನವು ಮೃತ್ಯುವಿನೊಂದಿಗೆ ಕೊನೆಗೊಳ್ಳುವುದು ಎಂಬುದನ್ನು ಮತ್ತು ಆತ್ಮಜ್ಞಾನವೇ ಶಾಶ್ವತವಾದ ಜ್ಞಾನವೆಂಬುದನ್ನು ತಿಳಿದುಕೊಂಡು ವಿಜ್ಞಾನಿಯೂ, ತತ್ತ್ವಜ್ಞಾನಿಯೂ ಆಗಿ ದಿವ್ಯಜ್ಞಾನದ ಜಿಜ್ಞಾಸೆಯಲ್ಲಿ ತೊಡಗಿರಬೇಕು.

ಈ ಮೇಲಿನ ಹದಿನೆಂಟೂ ಅಂಶಗಳು ಸೇರಿ ನಿಜ ಜ್ಞಾನ ಸಂಪಾದನೆಯ ಒಂದು ಕ್ರಮಬದ್ಧ ವಿಧಾನವಾಗಿರುತ್ತದೆ. ಇವುಗಳನ್ನುಳಿದು ಉಳಿದೆಲ್ಲ ವಿಧಾನಗಳು ಅಜ್ಞಾನದ ವರ್ಗಕ್ಕೆ ಸೇರಿದೆ ಎಂಬುದು ಜ್ಞಾನಿಗಳ ಮಾತು, ಭೌತಿಕ ಜ್ಞಾನದ ಎಲ್ಲಾ ಪ್ರಕಾರಗಳೂ ಮಾಯ ಶಕ್ತಿಯ ಕೇವಲ ಪ್ರಕಟರೂಪಗಳಾಗಿವೆ ಮತ್ತು ಅವುಗಳ ಸಂಸ್ಕಾರದಿಂದ ಮನುಷ್ಯನು ಭೌತಿಕ ಜ್ಞಾನವೃದ್ಧಿಯ ಆಧುನಿಕ ಕರ್ತೆಯಾಗುತ್ತಿದ್ದಾನೆ ಅಷ್ಟೇ!.

ಈಗಿನ ಸ್ಥಿತಿಯಲ್ಲಿ ಯಾರೂ ಗುರುಹಿರಿಯರನ್ನು ಗೌರವಿಸುತ್ತಿಲ್ಲ. ಈಗಿನ ವಿಶ್ವವಿದ್ಯಾನಿಲಯಗಳು ತಪ್ಪು ರೀತಿಯ ಶಿಕ್ಷಣ ನೀಡುತ್ತಿದ್ದು, ನೈತಿಕ ಶಿಕ್ಷಣ ಮರೆಯಾಗಿದೆ. ಜ್ಞಾನಾರ್ಜನೆಗಿಂತ ಅಜ್ಞಾನಾರ್ಜನೆಯೇ ಮೇಲಾಗಿರುವುದರಿಂದ ವಿಶ್ವದ ಎಲ್ಲ ಕಡೆಗೂ

ಮಕ್ಕಳು, ಯುವಪೀಳಿಗೆಯ ಜನಗಳಿಂದ ಹಿರಿಯರಿಗೆ ತಲೆತಗ್ಗಿಸುವಂತಾಗಿದೆ. ವಿದ್ಯಾನಿಲಯ ಕೇವಲ ಅಜ್ಞಾನಗಳ ಕೇಂದ್ರವಾಗಿದೆ. ಅಲ್ಲಿ ಕಲಿತ ವಿಜ್ಞಾನಿಗಳು ದೇಶವನ್ನು ನಿರ್ನಾಮ ಮಾಡುವ ಮಾರಕಾಸ್ತ್ರ ಕಂಡುಹಿಡಿಯುವಂತವರೇ ಆಗಿದ್ದಾರೆ. ಇಂದಿನ ಮಕ್ಕಳಿಗೆ ಬ್ರಹ್ಮಚರ್ಯದ ನಿಷ್ಠಾ ಜೀವನದ ಉಪದೇಶವನ್ನು ನೀಡುತ್ತಿಲ್ಲ. ಜೀವನದ ಆಧ್ಯಾತ್ಮಿಕ ವಿಧಾನಗಳನ್ನು ತಿಳಿಸುತ್ತಿಲ್ಲ. ಮಕ್ಕಳಿಗೆ ವೇದವಿಧಿಗಳಲ್ಲಿ ನಂಬಿಕೆಯೇ ಇಲ್ಲ. ನೈತಿಕ ಹಾಗೂ ಮೌಲ್ಯಯುತ ಜೀವನವನ್ನು ಮರೆಮಾಚಿ ಕೇವಲ ಹೆಸರಿಗಾಗಿ, ಕೀರ್ತಿಗಾಗಿ, ಧರ್ಮತತ್ತ್ವಗಳನ್ನು ಭೋದಿಸಲಾಗುತ್ತಿದೆಯೇ ವಿನಃ ನಿಜವಾದ ಕ್ರಮವನ್ನು ತಿಳಿಸಿಕೊಡುತ್ತಿಲ್ಲ. ಹೀಗಾಗಿ ಯಾರೂ ಜ್ಞಾನ ಪ್ರಾಪ್ತಿಗೆ ಕಿವಿಗೊಡುತ್ತಿಲ್ಲ. ಹೇಗಿದ್ದರೂ ಜನ ತಾವು ಭೌತಿಕ ಮತ್ತು ಆಧ್ಯಾತ್ಮಿಕ ಜ್ಞಾನದಲ್ಲಿ ಮುಂದುವರಿದಿದ್ದೇವೆಂದು ಮಿಥ್ಯಾಗರ್ವಿತರಾಗಿದ್ದಾರೆ.

ಇನ್ನಾದರೂ ಮಿಥ್ಯಾಗರ್ವ ಬಿಟ್ಟು ಭಗವದ್ಗೀತೆಯ ಹದಿಮೂರನೇ ಅಧ್ಯಾಯದಲ್ಲಿ ಸೂಚಿಸಿದ ಹದಿನೆಂಟು ಅಂಶಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಜ್ಞಾನವನ್ನು ಸಂಪಾದಿಸುತ್ತಾ ಭಗವಂತನೆಡೆಗೆ ಮುನ್ನಡೆಯೋಣ.

ಶ್ರೀ ರಾಮಸ್ಮರಣಂ

**ಪ.ಪೂ. ಶ್ರೀ ಮಾರುತಿ ಗುರೂಜಿಯವರು, ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಬಂಗಾರಮಕ್ಕಿ.**

---

# ದೀಪವೆಂಬುದು ಜ್ಞಾನ, ದೀಪದ ಹಬ್ಬ ಕಳೆಯಲಿ ಅಜ್ಞಾನ.

**ಸಂಪಾದಕೀಯ**

ಅಜ್ಞೇಭ್ಯಃ ಗ್ರಂಥಿನಃ ಶ್ರೇಷ್ಠಾಃ
ಗ್ರಂಥಿಭ್ಯೋ ದಾರಿಣೋ ವರಾಃ
ದಾರಿಭ್ಯಃ ಜ್ಞಾನಿನಃ ಶ್ರೇಷ್ಠಾಃ
ಜ್ಞಾನಿಭ್ಯೋ ವ್ಯವಸಾಯಿನಃ ॥ ಮನುಸ್ಮೃತಿ ॥

ಮಾನವರಲ್ಲಿ ಸಾಮಾನ್ಯವಾಗಿ ನಾಲ್ಕು ವಿಧ. ಅಜ್ಞ – ಗ್ರಂಥಿ – ಜ್ಞಾನಿ – ವ್ಯವಸಾಯಿ ಎಂದು. ಅಂದರೆ ಅಜ್ಞನೆಂದರೆ ಅರಿಯದವನು. ವ್ಯವಹಾರಿಕವಾಗಿ ಜ್ಞಾನರಹಿತ ಅಂದರೆ ದಡ್ಡರು ಎನ್ನಬಹುದು. ಇನ್ನೂ ಕೆಲವರು ಗ್ರಂಥಿಗಳು ವಿಚಾರ ಸಾಮರ್ಥ್ಯ ಇರುವವರು. ಅಜ್ಞಾನಿಗಳಲ್ಲ. ಮತ್ತೆ ಕೆಲವರು ಜ್ಞಾನಿಗಳು ಅಂದರೆ ಅರಿತವರು. ವಿಮರ್ಷಾತ್ಮಕವಾದ ಜ್ಞಾನ ಇರುವವರು ಇನ್ನೂ ಮತ್ತೆ ಕೆಲವರು ವ್ಯವಸಾಯಿಗಳು. ವ್ಯವಸಾಯಿ ಎಂದರೆ ಕ್ರಿಯಾಶೀಲರು. ಅರಿತದ್ದನ್ನು ವ್ಯವಹಾರಲ್ಲಿ ಉಪಯೋಗಿಸಿ ಅದರಂತೆ ನಡೆದು ತೋರಿಸುವವರು. ಹೀಗೆ ಒಬ್ಬರಿಗಿಂತ ಮತ್ತೊಬ್ಬರು ಎತ್ತರೆತ್ತರಕ್ಕೆ ಏರುವರು. ಅಥವಾ ಶ್ರೇಷ್ಠರು, ಹೀಗೆ ಜ್ಞಾನವೆಂಬುದು ಕ್ರಿಯಾಶೀಲತೆಯನ್ನು ಪಡೆದು, ಕ್ರಿಯಾರೂಪಕ್ಕೆ ಬಂದಾಗ ಅದು ಸರ್ವರ ಹೃದಯ ಗೆಲ್ಲುತ್ತದೆ. ಅದೇ ರೀತಿ ಸಾರ್ಥಕತೆ ಇರುವದು ಕ್ರಿಯಾಶೀಲತೆಯಲ್ಲಿ. ಅಂದರೆ ಜ್ಞಾನದ ಪರಾಕಾಷ್ಠತೆಯಲ್ಲಿ. ಆನಂದವಿದೆ. ಅದು ದಿವ್ಯತೆಯ ಆನಂದದ ಕ್ರಿಯಾಶೀಲ ರೂಪ. ಈ ಆನಂದವೇ ಜೀವನದ ಬೆಳಕು. ಅಂತಹ ಬೆಳಕಿನ ಹಬ್ಬ ದೀಪಾವಳಿ.

ಅಜ್ಞಃಸುಖಮಾರಾಧ್ಯಃ ಸುಖತರಮಾರಾಧ್ಯತೆ ವಿಶೇಷಜ್ಞಃ
ಜ್ಞಾನಲವ ದುರ್ವಿದಗ್ಧಾಂ ಬ್ರಹ್ಮಾತಿ ನರಂ ನ ರಂಜಯತಿ

ಪೂರ್ಣತೆಯತ್ತ ಸಾಗುವದು ಸರಿಯಾದ ಧರ್ಮ ಆದರೆ ಅನೇಕರು ನಾನು ಅರಿತ ಅಲ್ಪ ಜ್ಞಾನವೇ ಮಹತ್ತೆಂದು ತಿಳಿದಂತಹ ಅಲ್ಪಜ್ಞರನ್ನು ಬ್ರಹ್ಮನೂ ಸಂತೃಪ್ತಿಗೊಳಿಸಲಾರ. ಅಂದರೆ ಅಲ್ಪಜ್ಞಾನವನ್ನು ಪಡೆದು ಗರ್ವಿಗಳಾದರೆ ಅದರಿಂದ ಜ್ಞಾನದ ಎತ್ತರಕ್ಕೆ ಏರುವ ಅವಕಾಶದಿಂದ ದೂರ ಇರುವದು ಅನಿವಾರ್ಯವಾಗುತ್ತದೆ ಎಂದು ಸಾರುತ್ತದೆ.

ವಿಷ್ಣುಶರ್ಮ ಪಂಚತಂತ್ರದಲ್ಲಿ ಜ್ಞಾನದ ಕುರಿತಾಗಿ ಈ ರೀತಿ ನುಡಿಯುತ್ತಾನೆ;

ಮಹಾಜನಸ್ಯ ಸಂಪರ್ಕಃ ಕಸ್ಯನೋನ್ನತಿ ಕಾರಕಃ
ಪದ್ಮ ಪತ್ರ ಸ್ಥಿತಂ ತೋಯಂ ದತ್ತೇ ಮುಕ್ತಾ ಫಲಶ್ರಿಯಂ

ಪದ್ಮಪತ್ರದಲ್ಲಿರುವ ನೀರು ಮುತ್ತಿನ ಕಾಂತಿಯ ಸ್ಥಾನವನ್ನು ಕರುಣಿಸುವಂತೆ ಜ್ಞಾನಿಗಳ ಸಂಪರ್ಕ ಹೇಗೆ ತಾನೆ ಔನ್ನತ್ಯವನ್ನು ನೀಡಲಿಕ್ಕಿಲ್ಲ. ಅಂದರೆ ಜ್ಞಾನವನ್ನು, ಔನ್ನತ್ಯವನ್ನು ಮಾನಸಿಕ ಚಿಂತನೆಗಳಿಂದ ಆತ್ಮಾನಂದವನ್ನು, ಆತ್ಮ ಔನ್ನತ್ಯವನ್ನು ಪಡೆಯಲು ಬಿನ್ನ ಬಿನ್ನ ಮಾರ್ಗವನ್ನು ಅರಸುತ್ತಾ ಜ್ಞಾನ ಅಥವಾ ಬೆಳಕು ಜೀವನದ ಅವಿಭಾಜ್ಯ–ಅನಿವಾರ್ಯ ಅಂಗ. ಆ ರೀತಿ ಸುಜ್ಞಾನಿಯಾಗಲು ವಿಶೇಷಜ್ಞಾನ, ವಿಜ್ಞಾನ ಬೇಕು. ಅದು ಕ್ರಿಯೆಯಿಂದ ಮಾತ್ರ ಸಾಧ್ಯ.

ಹೀಗೆ ಜೀವನದಲ್ಲಿ ಜ್ಞಾನಾರ್ಜನೆ, ಜ್ಞಾನವಿತರಣೆ ಅನಿವಾರ್ಯ. ಆಚಾರ್ಯಾತ್ ಪಾದಮಾದತ್ತೆ ಎನ್ನುವಂತೆ ಗುರುವಿನಿಂದ ಬಿಂದು ರೂಪದಲ್ಲಿ ಅರಿತು ಉಳಿದದ್ದನ್ನು ಅನ್ಯರೀತಿಯಲ್ಲಿ ಅನುಭವದಿಂದಲೋ, ಸಹಚಾರಿಗಳಿಂದಲೋ ಅರಿತು ಜೀವನ ಸಾರ್ಥಕತೆ ಕಾಣಬೇಕು. ಅಂತಹ ದೀಪದ ಹಬ್ಬ, ಬೆಳಕಿನ ಹಬ್ಬ ಬಂದಿದೆ. ಕೇವಲ ಪಟಾಕಿ ಸಿಡಿಸುವುದು ದೀಪದ ಹಬ್ಬವಲ್ಲ. ಜ್ಞಾನವನ್ನು ಸಂಪಾದಿಸಿ ಅದನ್ನು ಇನ್ನೊಬ್ಬರಿಗೆ ಹಂಚುವ ಮೂಲಕ ತಾನು ಒಳ್ಳೆಯವನಾಗುತ್ತಾ, ತನ್ನವರನ್ನೂ ಒಳ್ಳೆಯವರನ್ನಾಗಿಸುತ್ತಾ ಸುಜ್ಞಾನಿಯಾಗುವುದರಲ್ಲೇ ಜೀವನ ಸಾರ್ಥಕತೆ ಇದೆ.

ಕತ್ತಲೆಯು ದೂರಾಗಿ ಬರಲಿ ಬೆಳಕು
ನಿಸ್ಪೃಹತೆ, ಸಜ್ಜನಿಕೆ ನಿಜವಾದ ಬದುಕು
ದುಷ್ಟತನ ದೂರಾಗಿಸುತ ಹಚ್ಚೋಣ ಹಣತೆ
ಜಗವ ಬೆಳಗಿಸುತ ಮನದಲಿರಲಿ ಮಮತೆ

ಸಂಪಾದಕರು



ಕನ್ನಡದ ಶೇಕ್ಸಫಿಯರ್ – ಕೆಂಗಲ್ ಹನುಮಂತರಾಯ

ವಕಾಲತ್

# ಕಲಾಂನಂತಹ ಮಾನವತಾವಾದಿಗೂ ಧನಂಜಯ ಬೇಡವಾಗಿದ್ದ!

–ನ್ಯಾಯವಾದಿ ನಾಗರಾಜ ನಾಯಕ್

"ದಯೆಯೇ ಧರ್ಮದ ಮೂಲವಯ್ಯ" ಎಂದಿದ್ದರು ಬಸವೇಶ್ವರರು. ಪ್ರತಿಯೊಂದು ನಾಗರಿಕ ದೇಶ ತನ್ನ ಸಂವಿಧಾನದಲ್ಲಿ 'ಕ್ಷಮಾದಾನ'ದ ಕುರಿತು ಬರೆದಿದೆ. ನಮ್ಮ ದೇಶದ ಸಂವಿಧಾನದ ಕಲಂ 72 ಮತ್ತು 161 ರಲ್ಲಿ ಕ್ಷಮಾದಾನದ ಬಗ್ಗೆ ವಿವರಿಸಲಾಗಿದೆ.

ಖ್ಯಾತ ವಕೀಲರಾದ ಸೋಲಿ ಸೊರಾಬ್ಜಿ ಒಂದೆಡೆ "Mercy is a noble aim, but it must be kept in strict line with rule of law" ಎಂದು ಹೇಳಿದ್ದಾರೆ. ನ್ಯಾಯದಾನದ ವೇಳೆ ನ್ಯಾಯಾಲಯ ಎಲ್ಲಾ ಸಮಯದಲ್ಲಿ ಪ್ರೌಢಿಮೆಯನ್ನು ಮೆರೆದಿದೆ ಎಂದು ಹೇಳಲಾಗದು. ಅಂತಹ ಸಂದರ್ಭದಲ್ಲಿ ನ್ಯಾಯಾಂಗದ ಹೊರತಾಗಿ ಇಂತಹ ಅಧಿಕಾರವನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ. ಸೋಲಿ ಸೊರಾಬ್ಜಿಯವರು ಹೇಳಿದ ಹಾಗೆ ಕ್ಷಮಾದಾನ ಅಥವಾ ದಯೆಯನ್ನು ಎಲ್ಲಾ ಸಂದರ್ಭದಲ್ಲಿ ತೋರಿಸಲಾಗದು. ಸ್ವರ್ಣ ಸೀಲ್ ಮತ್ತು ದೂಧನಾತ್ ಎಂಬುವವರ ಪ್ರಕರಣದಲ್ಲಿ ಜೋಗಿಂಧರ ಸಿಂಗ್ ಎಂಬುವವನ್ನು ಕೊಲೆಗೈದ ಸಲುವಾಗಿ ಜೀವಾವಧಿ ಶಿಕ್ಷೆಯನ್ನು ನೀಡಲಾಗಿತ್ತು. ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳು ಎತ್ತಿ ಹಿಡಿದವು. ಆದರೆ ಉತ್ತರ ಪ್ರದೇಶದ ರಾಜ್ಯಪಾಲರು ಕ್ಷಮಾದಾನ ನೀಡಿ ಶಿಕ್ಷೆಯ ಪ್ರಮಾಣ ಕಡಿತಗೊಳಿಸಿಬಿಟ್ಟರು. ಆದರೆ ಪುನಃ ಸುಪ್ರೀಂಕೋರ್ಟ್ ರಾಜ್ಯಪಾಲರ ಆದೇಶವು ಅಸಮಂಜಸ ಎಂದು ತಳ್ಳಿಹಾಕಿತು ಅಂದ ಮೇಲೆ ಕ್ಷಮಾದಾನವನ್ನು ಮನಸ್ಸಿಗೆ ಬಂದಂತೆ ನೀಡುವಂತಿಲ್ಲವೆಂದಾಯಿತು.

ಜಗತ್ತಿನಲ್ಲಿ ಈಗಾಗಲೇ ಒಟ್ಟು 120 ದೇಶಗಳು ಮರಣ ದಂಡನೆಯನ್ನು ಕೈಬಿಟ್ಟಿವೆ. ಆಮ್ನೆಸ್ಟಿ ಇಂಟರ್ ನ್ಯಾಶನಲ್‌ನಂತಹ ಸಂಸ್ಥೆಗಳು ಮರಣದಂಡನೆಯನ್ನು ವಿರೋಧಿಸುತ್ತಿವೆ. ಮರಣ ದಂಡನೆಯು ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂಬುದು ಇವರ ವಾದ. 1983 ರಲ್ಲಿ ಬಚ್ಚನ್ ಸಿಂಗ್ ವರ್ಸಸ್ ಪಂಜಾಬ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪೊಂದನ್ನು ನೀಡಿ ಮರಣದಂಡನೆಯನ್ನು rarest of rare ಪ್ರಕರಣಗಳಲ್ಲಿ ನೀಡಬೇಕೆಂದು ತೀರ್ಪಿತ್ತಿತು. ಅಂದರೆ ಮರಣದಂಡನೆಯನ್ನು ಹೇಗೆ ಬೇಕಾದರೆ ಹಾಗೆ ನೀಡುವಂತಿಲ್ಲವೆಂದಾಯಿತು.

ಭಾರತದ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಒಬ್ಬ ದಯಾಳು ಮನುಷ್ಯ! ಅವರ ಬದುಕಿನ ಅಖಾಡದಲ್ಲಿ ವಿಜ್ಞಾನ, ಸಾಹಿತ್ಯ, ಕಾವ್ಯ, ತತ್ವಶಾಸ್ತ್ರ, ಮಕ್ಕಳ ಕುರಿತಾದ ಮಮತೆ ಮುಂತಾದವೂ ಮಾನವೀಯತೆ ಮೇಳೈಸಲು ಸಹಾಯಕಾರಿಯಾಗಿರಬಹುದು. ಮರಣದಂಡನೆಯ ನಿಷೇಧದ ಕುರಿತು ಅಬ್ದುಲ್ ಕಲಾಂ ಸೊಲ್ಲೆತ್ತಿ ಸ್ವಲ್ಪ ವಿವಾದಕ್ಕೂ ಕಾರಣವಾಗಿತ್ತು. ಇದಾದ ಸ್ವಲ್ಪ ದಿನಗಳಲ್ಲಿ ಕಾನೂನು ಮಂತ್ರಿ ಹೇಳಿಕೆಯೊಂದನ್ನು ನೀಡಿ ಮರಣದಂಡನೆಯನ್ನು ನಿಷೇಧಿಸುವದು ಸುಲಭದ ಮಾತಲ್ಲ ಎಂದರು. ಇನ್ನೆರಡು ದಿನ ಬಿಟ್ಟು ಚೀಫ್ ಜಸ್ಟಿಸ್ ಆರ್.ಸಿ. ಲಾಹೋಟಿಯವರು ಭಯೋತ್ಪಾದಕ ಚಟುವಟಿಕೆಗಳಿಂದ ಮುಗ್ಧ ಜನತೆ ಸಾವಿಗೀಡಾಗುತ್ತಿದ್ದು, ಅಂತಹ ಸಾವಿಗೆ ಕಾರಣರಾದವರಿಗೆ ಮರಣದಂಡನೆ ವಿಧಿಸುವ ಅವಶ್ಯಕತೆಯ ಕುರಿತು ಮಾತನಾಡಿದರು. ಅದೇ ದಿನ ಪುನಃ ದಿಲ್ಲಿ ಹೈಕೋರ್ಟು ಪಾಕಿಸ್ತಾನ ಭಯೋತ್ಪಾದಕನಿಗೆ ಬಾಂಬ್ ಸ್ಪೋಟ ಪ್ರಕರಣದಲ್ಲಿ ಮರಣ ದಂಡನೆ ವಿಧಿಸಿತು.

ಆ ಗಳಿಗೆಯಲ್ಲಿ ಇಡೀ ದೇಶದ ಗಮನ ಸೆಳೆದ ಧನಂಜಯ ಪ್ರಕರಣದ Mercy Petition ರಾಷ್ಟ್ರಪತಿ ಅಬ್ದುಲ್ ಕಲಾಂ ಮುಂದೆ ಬಂದಿತು. ಅಷ್ಟಕ್ಕೂ ಈ ಧನಂಜಯ ಯಾರು? ಈ ಧನಂಜಯ ಒಂದಾದ ಮೇಲೆ ಒಂದರಂತೆ ಮೂರು ಅಪರಾಧಗಳನ್ನು ಎಸಗಿದ್ದ. ಅಕ್ರಮವಾಗಿ ಅಪ್ರಾಪ್ತ ವಯಸ್ಸಿನ ಹುಡುಗಿಯ ಮನೆಯನ್ನು ಪ್ರವೇಶಿಸಿದ್ದ. ಅಷ್ಟೇ ಅಲ್ಲದೇ ಆ ಹುಡುಗಿಯ ಮೇಲೆ ಅತ್ಯಾಚಾರ ಎಸಗಿದ್ದ. ಮುಂದುವರಿದು ಆ ಹುಡುಗಿಯನ್ನು ಯಾವುದೇ ದಯೆ ತೋರಿಸದೇ ಕೊಲೆಗೈದಿದ್ದ. ಸುಪ್ರೀಂ ಕೋರ್ಟ್ ಧನಂಜಯನಿಗೆ ಮರಣದಂಡನೆ ವಿಧಿಸಿತ್ತು. ಧನಂಜಯ ಒಟ್ಟು 14 ವರ್ಷ ಜೈಲಿನಲ್ಲಿ ಕಳೆದಾಗಿತ್ತು. 14 ವರ್ಷದ ಹುಡುಗಿ ಮೇಲೆ ಅತ್ಯಾಚಾರ ಮಾಡಿ ಕೊಲೆಗೈದ ಧನಂಜಯನನ್ನು ಗಲ್ಲಿಗೇರಿಸಿ ಎಂಬ ಕೂಗು ಎಲ್ಲೆಡೆ ಕೇಳಿ ಬಂದಿತು. ಧನಂಜಯ Mercy Petition ನನ್ನು ತಿರಸ್ಕರಿಸುವುದಷ್ಟೇ ಅಲ್ಲ; ಆತನನ್ನು ಸಾರ್ವಜನಿಕ ಸ್ಥಳದಲ್ಲಿ ನೇಣಿಗೇರಿಸಬೇಕು ಎಂಬುದಾಗಿಯೂ ಕೂಗು ಕೇಳಿ ಬಂತು.

ಮಕ್ಕಳನ್ನು ತುಂಬಾ ಪ್ರೀತಿಸುವ ಮಗು ಹೃದಯದ ಕಲಾಂ ಜೀವ ಗಟ್ಟಿ ಹಿಡಿದು ಧನಂಜಯ ಚಟರ್ಜಿ ಎಂಬ ಅತ್ಯಾಚಾರಿ ಮತ್ತು ಕೊಲೆಗಡುಕನ ಅರ್ಜಿಯನ್ನು ತಿರಸ್ಕರಿಸಿ ಬಿಟ್ಟರು. ಸ್ವಾತಂತ್ರ್ಯ ಬಂದ ನಂತರ ಮರಣ ದಂಡನೆಗೆ ಒಳಗಾಗಿ ಹೆಣವಾಗಿ ಬಿದ್ದವರಲ್ಲಿ ಧನಂಜಯ ಚಟರ್ಜಿ 55 ನೇಯವನಾದ. ಒಂದೆಡೆ ಮರಣ ದಂಡನೆ ಎಂಬ ಶಿಕ್ಷೆ ವಿಮರ್ಶಿಸುತ್ತಾ ಅದರ ಕುರಿತು ಪುನರಾವಲೋಕನ ಮಾಡಬೇಕು ಎಂದು ಕರೆಕೊಡುತ್ತಲೇ, ಇನ್ನೊಂದೆಡೆ ಧನಂಜಯ ಚಟರ್ಜಿಯನ್ನು ನಮ್ಮ ರಾಷ್ಟ್ರಪತಿಯವರು ನೇಣು ಕಂಬದವರೆಗೆ ಅಟ್ಟಿದ್ದರು. ಶಿಕ್ಷೆ ಮನುಷ್ಯನ ಪರಿವರ್ತನೆ ರೂಪದಲ್ಲಿ ಇರಬೇಕು ಎನ್ನುವುದು ಸತ್ಯವಾದರೂ 14 ರ ಎಳೆಯ ಮುಗ್ಧ ಹಸುಳೆಯನ್ನು ಕೊಂದಂತಹ ಧನಂಜಯ ಚಟರ್ಜಿಯು ಅಬ್ದುಲ್ ಕಲಾಂ ಎಂಬ ಮಾನವತಾವಾದಿಗೂ ಸಹ ಬೇಡವಾಗಿದ್ದ.

ಮಧುರ ಪ್ರಕಾಶನ

# ಒಳ್ಳೆ ನಿದ್ರೆ

(ಮುಂದುವರೆದ ಭಾಗ)

ಲೇ.– ಎಂ. ಎಲ್. ರಾಘವೇಂದ್ರರಾವ್

**ನಿದ್ದೆ ಮಾಡದೇ ಹೋದರೇ ಆಗುವುದೇನು? ಮನುಷ್ಯ ನಿದ್ದೆ ಮಾಡದೇ ಹೋದರೆ ಏನಾಗುತ್ತದೆ?**

ಇದರ ಮೇಲೆ ಬಹಳ ಜನ ಪ್ರಯೋಗಗಳನ್ನು ಮಾಡಿದ್ದಾರೆ. ಸಾನ್‌ಡಿಯಾಗೋ ನಗರದಲ್ಲಿ ಹದಿನೇಳು ವರ್ಷದ ವಿದ್ಯಾರ್ಥಿ 264 ಗಂಟೆಗಳ ಕಾಲ ನಿದ್ದೆಯಿಲ್ಲದೆ ಕಳೆದಿದ್ದಾನೆ. ಅದೇ ಪ್ರಪಂಚದಲ್ಲಿ ಅತೀ ದೊಡ್ಡ ದಾಖಲೆ ಅಂದರೇ ಹನ್ನೊಂದು ಹಗಲು, ರಾತ್ರಿಗಳು ನಿದ್ದೆಯಿಲ್ಲದೆ ಕಳೆದ. ಆ ಸಮಯದಲ್ಲಿ ಆತ ಯಾವ ಕೆಲಸವನ್ನೂ ಮಾಡಲಿಲ್ಲ. ಹೆಚ್ಚು ಹೊತ್ತು ನಿದ್ದೆ ಮಾಡದೇ ಹೋದರೂ ಕೆಲವರಿಗೆ ಆರೋಗ್ಯ ಚೆನ್ನಾಗೇ ಇರುತ್ತದೆ. ಅನಾರೋಗ್ಯ ಅನ್ನೋದು ವ್ಯಕ್ತಿ ಆಲೋಚನೆಗಳ ಮೇಲೆ ಅವಲಂಭಿತವಾಗಿರುತ್ತದೆ.ನಾಳೆ ಯಾವುದೇ ಕೆಲಸ ಮಾಡಲಾರೆವೇನೋ ಎಂಬ ಸಂದೇಹವೇ ವ್ಯಕ್ತಿ ಅನಾರೋಗ್ಯಕ್ಕೆ ಸೈಕಲಾಜಿಕಲ್ಲಾಗಿ ಕಾರಣವಾಗುತ್ತದೆ. ನಿದ್ದೆ ಇಲ್ಲದೇ ಹೋದರೂ ದೇಹ ಮತ್ತೊಂದು ರೀತಿಯಲ್ಲಿ ರೂಪಿಸಿಕೊಳ್ಳಬಲ್ಲದು. ಆದರೆ ವ್ಯಕ್ತಿಗೆ ಮನೋದಾರ್ಢ್ಯತೆ ಇರಬೇಕು. ಎಳೆ ಮಕ್ಕಳು ಹೆಚ್ಚು ಹೊತ್ತು ನಿದ್ದೆ ಹೋಗುತ್ತಾರೆ. ಎಳೆ ಮಕ್ಕಳು ಹಸಿವೆಯಾದಾಗ ಏಳುತ್ತಾರೆ. ಉಚ್ಚೆ ಹೊಯ್ದುಕೊಂಡರೇ ಒದ್ದೆಯ ಸ್ಪರ್ಶದಿಂದಾಗಿ ನಿದ್ದೆಯಿಂದ ಎಚ್ಚರಗೊಳ್ಳುತ್ತಾರೆ. ಯಾವುದೇ ವಿಧವಾದ ಬೇರೆಯೇ ನಿದ್ರಾಭಂಗವಾದರೂ ಎಚ್ಚೆದ್ದುಕೊಳ್ಳುತ್ತಾರೆ. ಇಲ್ಲದಿದ್ದರೆ ನಿದ್ದೆ ಮಾಡುತ್ತಾರೆ. ವಯಸ್ಸು ಬೆಳೆದಂತೆಲ್ಲ ನಿದ್ದೆ ಮಾಡುವ ಸಮಯದಲ್ಲಿ ಬದಲಾವಣೆ ಆಗುತ್ತಾ ಇರುತ್ತದೆ. ರಾತ್ರಿ ಹೊತ್ತಷ್ಟೇ ನಿದ್ದೆ ಮಾಡುತ್ತಾರೆ.

ಸಾಮಾನ್ಯವಾಗಿ ರಾತ್ರಿ ಬೇಗನೇ ನಿದ್ದೆಹೋಗಿ, ಬೆಳಗಿನ ಜಾವದಲ್ಲಿ ಏಳುವುದು ಒಳ್ಳೆಯದು. ನಿದ್ರೆ ಮಾತ್ರೆಗಳನ್ನು ಉಪಯೋಗಿಸುವುದು ಒಳ್ಳೆಯದಲ್ಲ. ಮೆದುಳಿಗೆ ರಕ್ತಪ್ರಸಾರದಲ್ಲಿ ದೋಷ ಉಂಟಾಗುತ್ತದೆ. ರಾತ್ರಿ ನಿದ್ದೆಗೆ ಉಪಕ್ರಮಿಸುವುದಕ್ಕೆ ಮೊದಲು ಒಂದು ಲೋಟ ಕಾಫಿ ಕುಡಿಯುವುದು ಒಳ್ಳೆಯದು. ಅದು 'ಪಾರಡಾಕ್ಸ್ ಸ್ಲೀಪ್' ಗೆ ಔಷಧವಾಗಿ ಉಪಯೋಗಪಡುತ್ತದೆ. ನಿದ್ದೆ ಬರುವುದಕ್ಕೆ ಕೆಲವರು ಪುಸ್ತಕಗಳನ್ನು ಓದುವುದಕ್ಕೆ ಶುರುಮಾಡುತ್ತಾರೆ. ಮತ್ತೆ ಕೆಲರಿಗೆ ಟೀವಿ ನೋಡುತ್ತಿದ್ದರೆ ನಿದ್ದೆ ಬರುತ್ತದೆ. ಇನ್ನು ಕೆಲವರು ರೇಡಿಯೋ ಕೇಳುತ್ತಲೇ ನಿದ್ರೆ ಮಾಡುತ್ತಾರೆ.

**ಮಂಪರು ನಿದ್ರೆಗೆ ಕಾರಣವೇನು?**

ಕೆಲವರು ನಿದ್ದೆ ಮಾಡಿದರೂ ನಿದ್ದೆಯಲ್ಲೇ ಎಚ್ಚರವಾಗೇ ಇರುತ್ತಾರೆ? ಅದಕ್ಕೆ ಕಾರಣ ನಿದ್ದೆ ಸರಿಯಾಗಿ ಬಾರದೇ ಇರುವುದು. ಅಂದರೆ ಮಂಪರು ನಿದ್ರೆ.

ಮಂಪರು ನಿದ್ರೆಗೆ ಕಾರಣಗಳು ಅನೇಕ. ಮಲಗುವ ಹಾಸಿಗೆ ಸರಿಯಾಗಿ ಇಲ್ಲದೆ ಹೋದರೆ ನಿದ್ದೆ ಬರುವುದಿಲ್ಲ. ಕೆಲವರಿಗೆ ಹಾಸಿಗೆ ಮೇಲೆ ಮಲಗುವುದಕ್ಕಿಂತ ನೆಲದ ಮೇಲೆ ಮಲಗಿದರೆ ನಿದ್ರೆ ಬರುತ್ತದೆ. ಕೆಲವರಿಗೆ ತಲೆದಿಂಬು ಇರಬೇಕು. ಮತ್ತೆ ಕೆಲವರಿಗೆ ತಲೆದಿಂಬು ಅಗತ್ಯವಿರುವುದಿಲ್ಲ. ಹೊಸ ಜಾಗದಲ್ಲಿ ನಿದ್ದೆ ಬರುವುದಿಲ್ಲ. ವಾತಾವರಣದಲ್ಲಿ ಬದಲಾವಣೆ ಇದ್ದರೆ ನಿದ್ದೆ ಬರುವುದಿಲ್ಲ. ಗಾಳಿ ಇಲ್ಲದೇ ಹೋದರೆ ನಿದ್ದೆ ಮಾಡುವುದಿಲ್ಲ. ಹಾಗೇ ಸೊಳ್ಳೆಗಳು ಕಚ್ಚುತ್ತಿದ್ದರೆ ನಿದ್ದೆ ಬರುವುದಿಲ್ಲ. ಕೋಣೆಯಲ್ಲಿ ಕತ್ತಲಾಗಿದ್ದರೆ ಕೆಲವರಿಗೆ ನಿದ್ದೆ ಬರುವುದಿಲ್ಲ. ಬೆಡ್‌ಲೈಟ್ ಇರಬೇಕು. ಹೀಗೆ ಮಂಪರು ನಿದ್ರೆಗೆ ಕಾರಣಗಳು ಎಷ್ಟೋ! ಇವೆಲ್ಲ ಶಾರೀರಿಕ ಕಾರಣಗಳು. ಸೈಕಾಲಾಜಿಕಲ್ ಕಾರಣಗಳು ಸಹ ಇರುತ್ತವೆ. ನಾಯಿಗಳು ಬೊಗಳುತ್ತಾ ಇದ್ದರೆ ನಿದ್ರೆ ಬರುವುದಿಲ್ಲಾ. ಅದು ಶಬ್ದದಿಂದಾಗುವ ತೊಂದರೆ; ಅದರಿಂದಾಗಿ ಗುಂಡಿಗೆ ಹೊಡೆದುಕೊಳ್ಳುವುದು ಜಾಸ್ತಿಯಾಗುತ್ತದೆ. ಮೆದುಳಿಗೆ ರಕ್ತ ಪ್ರಸಾರ ಹೆಚ್ಚಾಗುತ್ತದೆ. ನಿದ್ದೆ ಬರುವುದಿಲ್ಲ. ಪಕ್ಕದಲ್ಲಿ ಯಾರಾದರೂ ಗೊರಕೆ ಹೊಡೆಯೋರು ಇದ್ದರೆ ನಿದ್ದೆ ಮಾಡೋರಿಗೆ ನಿದ್ದೆ ಬರುವುದಿಲ್ಲ. ಮಲಗುವ ರೀತಿಯಿಂದಲೂ ಕೂಡಾ ನಿದ್ದೆ ಬರುವುದಿಲ್ಲ. ಕೆಲವರು ಕಾಲುಗಳನ್ನು ಮುದುಡಿಕೊಂಡು ಮಲಗುತ್ತಾರೆ. ಮತ್ತೆ ಕೆಲವರು ಕೈಗಳನ್ನು ಮುದುಡಿಕೊಂಡು ನಿದ್ದೆ ಮಾಡಿದರೆ ಇನ್ನೂ ಕೆಲವರು ಕೈಗಳನ್ನು ಚಾಚಿಕೊಂಡು ನಿದ್ದೆ ಮಾಡುತ್ತಾರೆ. ಕೆಲವರು ಮಲಗಿಕೊಂಡು ಹಲ್ಲು ಕಡಿಯುತ್ತಿರುತ್ತಾರೆ. ಅವುಗಳನ್ನು ಕನವರಿಕೆ ಎನ್ನುತ್ತಾರೆ. ಇನ್ನೂ ಕೆಲವರು ಭಯದಿಂದ ಕೂಗಾಡುತ್ತಿರುತ್ತಾರೆ. ಕೆಲವರು ನಿದ್ದೆಯಲ್ಲಿ ನಡೆದುಹೋಗುತ್ತಿರುತ್ತಾರೆ. ಇವು ಮಾನಸಿಕವಾದ ದುರ್ಬಲದಿಂದ ಆಗುತ್ತಿರುತ್ತವೆ. ಕೆಲವರು ನಿದ್ರೆಯಲ್ಲಿ ಹಾಸಿಗೆ ಮೇಲೆ ಆ ಕಡೆ ಈ ಕಡೆ ಹೊರಳಾಡುತ್ತಲೆ ಇರುತ್ತಾರೆ. ಮತ್ತೆ ಕೆಲವರಿಗೆ ಹಾಸಿಗೆ ಮೇಲೇ ಅಲ್ಪಾಚಮಾನ ಆಗಿಹೋಗುತ್ತದೆ. ಇದನ್ನೇ ನೈಟ್ ವೆಟ್ಟಿಂಗ್ ಎನ್ನುತ್ತಾರೆ. ಇದು ಎಳೆ ಮಕ್ಕಳಿಗೇ ಅಲ್ಲ, ದೊಡ್ಡವರಲ್ಲಿ ಕೂಡಾ ಕೆಲವರಲ್ಲಿ ನೋಡುತ್ತೇವೆ.

**ನಿದ್ದೆ ಮಾಡುವುದಕ್ಕೆ ಸೈಕೋಥೆರಪಿ ಯಾವ ರೀತಿಯಾಗಿ ಉಪಕರಿಸುತ್ತದೆ?**

ಇಲ್ಲಿ ಸೈಕೋಥೆರಪಿಯನ್ನು ಒಂದು ವೈದ್ಯ ವಿಧಾನವಾಗಿ ಪರಿಗಣಿಸಿ ನಿದ್ದೆ ಹೋಗುವುದಕ್ಕೆ ಕಾರಣವಾಗಿ ಪರಿಗಣಿಸಬೇಕು. ಮನುಷ್ಯನಿಗೆ ನಿದ್ದೆ ಬಾರದೆ ಹೋಗುವುದಕ್ಕೆ ಅನೇಕ ಕಾರಣಗಳು ಇರುವುದಾಗಿ ಈಗಾಗಲೇ ಹೇಳಿಕೊಂಡಿದ್ದೇವೆ. ಅವುಗಳನ್ನು ಮಾನಸಿಕ ಚಿಕಿತ್ಸೆಗಳ ಮೂಲಕ ಯಾವ ರೀತಿಯಾಗಿ ನಿವಾರಿಸುವುದು ಅನ್ನೋ ವಿಷಯವನ್ನು ತಿಳಿಸುವುದೇ ಸೈಕೋಸ್ಲೀಪ್ ಥೆರಪಿ. ಇದರಿಂದ ಅಪರೂಪಕ್ಕೆ ಫಲಿತಾಂಶಗಳು ಕಂಡುಬರುತ್ತಿವೆ. ಈ ವಿಧಾನ ಹೆಚ್ಚಾಗಿ ಜಾರಿಗೆ ಬರಲಿಲ್ಲ. ಈ ಶಾಸ್ತ್ರ ವಿಧಾನಗಳಲ್ಲಿ ಅನೇಕ ದೃಷ್ಟಿಕೋನಗಳಿವೆ. ಇವುಗಳಿಗಿಂತ ಸದ್ಯಕ್ಕೆ ಮನುಷ್ಯನಲ್ಲಿನ ಭೌತಿಕವಾದ ಬದಲಾವಣೆಗಳಿಂದ ಚಿಕಿತ್ಸಾ ವಿಧಾನವನ್ನು

ನಿರ್ಧಾರ ಮಾಡುತ್ತಿದ್ದಾರೆ. ಇದನ್ನೇ ಬಯೋಲಾಜಿಕಲ್ ಡೆವಲಪ್‌ಮೆಂಟ್ ಎನ್ನುತ್ತಾರೆ. ಮಾನಸಿಕ ಪರಿಣಾಮಗಳಿಗೆ ಮುಖ್ಯ ಕಾರಣ ಬಯೋಲಾಜಿಕಲ್ ಬದಲಾವಣೆ.

ಸೈಕೋಥೆರಪಿಯಲ್ಲಿ ಟ್ರಾನ್ಸ್ ಮೂಲಕ ನಿದ್ರೆ ಕೊರತೆಯನ್ನು ವಿವರಿಸುತ್ತಾರೆ. ಇದಕ್ಕೆ ಮೂಲ ಹಿಪ್ನೋಸಿಸ್. ಹಿಪ್ನೋಟಿಕ್ ಥೆರಪಿ ಅಂತಾ ಕೂಡಾ ಕರೆಯುತ್ತಾರೆ. ಇದನ್ನು ಎರಡು ರೀತಿಯಾಗಿ ಸಾಧಿಸಬಹುದು. ಒಂದು ಸೆಲ್ಫ್ ಹಿಪ್ನೋಸಿಸ್ ಮೂಲಕ, ಎರಡನೆಯದು ಹಿಪ್ನೋಸಿಸ್ ಮೂಲಕ; ಎರಡನೇ ವಿಧಾನದಲ್ಲಿ ಹಿಪ್ನೋಟಿಸ್ಟ್ ಸಹಾಯ ಅಗತ್ಯ. ಸೆಲ್ಫ್ ಹಿಪ್ನೋಸಿಸ್ ವಿಧಾನದಲ್ಲಿ ನಿಮಗೆ ನೀವೇ ಯಾವುದೋ ಒಂದು ಭಾವನೆಯ ಮೂಲಕ ಒಂದು ವಸ್ತುವಿನ ಮೇಲೆ ಏಕಾಗ್ರತೆ ನೆಟ್ಟು ಆ ಮೂಲಕ ಟ್ರಾನ್ಸ್‌ಗೆ–ಸಮಾಧಿ ಸ್ಥಿತಿಗೆ ಹೋಗುತ್ತಾರೆ. ಸಮಾಧಿ ಸ್ಥಿತಿಯಿಂದ ನಿದ್ರೆಗೆ ಹೋಗುತ್ತಾರೆ. ಇದನ್ನೇ ಸೈಕೋಥೆರಪಿಕ್ ಎಕ್ಸರ್‌ಸೈಜ್–ವ್ಯಾಯಾಮ ಅಂತ ಕೂಡಾ ಕರೆಯುತ್ತಾರೆ. ಇದರ ಮೂಲಕ ನಿಮ್ಮ ದೇಹವೊಂದು ಭಾರ, ನಿಮ್ಮ ದೇಹದಲ್ಲಿನ ತಾಪ, ಉಷ್ಣತೆ, ಅಂದರೆ ನಿಮ್ಮ ದೇಹದಲ್ಲಿನ ಎಲ್ಲಾ ಭಾಗಗಳಿಗೂ ಸಮಾನವಾಗಿ ವಿತರಣೆಯಾಗುವ ಉಷ್ಣತೆ ಮೇಲೆ ನಿಮ್ಮ ಸೈಕೋಥೆರಪಿ ಪ್ರಧಾನವಾಗಿ ಅವಲಂಭಿತವಾಗಿರುತ್ತದೆ. ಅದೇ ರೀತಿ ನೀವು ಹೀರುವ ಶ್ವಾಸ ವಿಧಾನದ ಮೇಲೆ, ಮಾರ್ಚ್ ಎಕ್ಸರ್‌ಸೈಜ್ ಮೇಲೆ, ನಿಮ್ಮ ಉದರ ಭಾಗದಲ್ಲಿರುವ ಸ್ನಾಯುಗಳು, ರಕ್ತನಾಳಗಳ ಸ್ಪಂದನದ ಮೇಲೆ ಈ ಚಿಕಿತ್ಸಾ ವಿಧಾನ ಅವಲಂಭಿತವಾಗಿರುತ್ತದೆ.

ನಿದ್ರೆ ಬರುವುದಕ್ಕೆ ಆಟೋಜೆನಿಕ್ ಟ್ರೈನಿಂಗ್ ವಿಧಾನ ಒಳ್ಳೆಯದು ಇಲ್ಲವೇ ಸ್ಟೆಪ್ ಬೈ ಸ್ಟೆಪ್ ಹಂತ ಹಂತವಾಗಿ ಹೋಗುವ ಹಿಪ್ನೋಸಿಸ್ ವಿಧಾನ ಒಳ್ಳೆಯದಾ? ಇದಕ್ಕೆ ಇದೂ ಉತ್ತರ ಅಂತ ಯಾರೂ ಹೇಳಲಾರರು. ಎರಡು ವಿಧಾನಗಳು ಒಳ್ಳೆಯದೇ. ಎರಡು ವಿಧಾನಗಳನ್ನು ಉಪಯೋಗಿಸಬಹುದು. ಒಬ್ಬೊಬ್ಬ ವ್ಯಕ್ತಿ ಲಕ್ಷಣಗಳನ್ನು ಹಿಡಿದು ಒಂದೊಂದು ವಿಧಾನವನ್ನು ಉಪಯೋಗಿಸಬಹುದು. ಸಾಮಾನ್ಯವಾಗಿ ಹೆಚ್ಚು ಜನ ಆಟೋಜೆನಿಕ್ ಟ್ರೈನಿಂಗ್ ವಿಧಾನಕ್ಕಿಂತ ಹಿಪ್ನೋಟಿಕ್ ವಿಧಾನವನ್ನು ಅನುಸರಿಸುತ್ತಿರುತ್ತಾರೆ ಎರಡು ವಿಧಾನಗಳಲ್ಲಿ ಕೂಡಾ ಬೇಕಾದ್ದು ನಿಮಗೆ ವ್ಯಾಯಾಮದ ಮೂಲಕ ಆಗಲೀ ಟ್ರಾನ್ಸ್ ಮೂಲಕ ಆಗಲೀ ನಿಮ್ಮ ಹಣೆ ಭಾಗ ತಣ್ಣಗಾಗಬೇಕು. ಅಂದರೆ ನಿಮ್ಮಲ್ಲಿ ಟೆನ್ಸನ್ (ಒತ್ತಡ) ಕಡಿಮೆ ಆಗಿದೆ ಅಂತ ಅರ್ಥ. ಆಗ ನಿಮಗೆ ನಿದ್ರೆ ಬರುತ್ತದೆ. ಎರಡನೇ ವಿಧಾನ ನಿಮ್ಮ ವಿಧಾನ ಅಂದರೆ ನಿಮ್ಮ ಮಾನಸಿಕ ವಿಧಾನದಲ್ಲಿನ ಬದಲಾವಣೆ ತರುವುದು. ವಿಧಾನದಲ್ಲಿ ಬದಲಾವಣೆ ಬಂದರೇ ನಿಮಗೆ ಆಟೋಮೇಟಿಕ್ಕಾಗಿ ನಿದ್ರೆ ಬರುತ್ತದೆ. ವಿಧಾನದಲ್ಲಿ ಬದಲಾವಣೆ ಅಂದರೇನು? ನಿಮ್ಮ ಆಲೋಚನಾ ದೃಷ್ಟಿಯಲ್ಲೇ ಬದಲಾವಣೆ ತರಬೇಕು. ಯಾವುದೋ ಒಂದು ವಿಷಯದ ಮೇಲೆ ನಿಮಗೆ ಆಸಕ್ತಿ ಇಲ್ಲ. ಅದರಿಂದಾಗಿ ನಿಮಗೆ ನಿದ್ರೆ ಬರುವುದಿಲ್ಲ. ಮೊದಲನೇ ವಿಧಾನ ಆ ಆಲೋಚನೆಯನ್ನು ನಿಮ್ಮ ಮನೋಫಲಕದಿಂದ ತೊಲಗಿಸುವುದು, ಹಾಗೆ ತೊಲಗಿಸಲಾಗದ ಪಕ್ಷದಲ್ಲಿ, ಅದಕ್ಕೆ ಪರ್ಯಾಯವಾಗಿ ಮತ್ತೊಂದು ಆಲೋಚನೆಯನ್ನು ಪ್ರವೇಶಪಡಿಸುವುದು. ಅದರ ಮೂಲಕ ಮಾನಸಿಕವಾಗಿ ಪ್ರಶಾಂತತೆ ಉಂಟಾಗುತ್ತದೆ. ನಿದ್ದೆ ಬರುತ್ತದೆ. ನಿದ್ದೆ ಹೋಗುವುದಕ್ಕೆ ಮಾನಸಿಕ ಪ್ರಶಾಂತತೆ ಅತಿ ಮುಖ್ಯ. ಮತ್ತೊಂದು ವಿಧಾನ ಕೂಡಾ ಇದೆ. ನಮ್ಮ ದೃಷ್ಟಿಯನ್ನು ಏಕಾಗ್ರತೆಯಿಂದ ಯಾವುದೋ ಒಂದು ವಸ್ತುವಿನ ಮೇಲೆ ಕೇಂದ್ರೀಕರಿಸುವುದು. ಸ್ವಲ್ಪ ಹೊತ್ತಿಗೆ ಆಟೋಮೇಟಿಕ್ಕಾಗಿ ನಿದ್ದೆ ಬರುತ್ತದೆ.

**ಜವಾಬ್ದಾರಿಗಳು, ಹೊರೆಗಳು ನಿದ್ದೆ ಮಾಡಗೊಡುತ್ತವೆಯಾ?**

ಮಾಮೂಲಾಗಿ ಜವಾಬ್ದಾರಿಗಳು, ಹೊಣೆಗಾರಿಕೆ ವಹಿಸಿಕೊಂಡವರು ನಿದ್ರೆ ಮಾಡಲಾರರು. ಅವರ ಮನಸ್ಸಿನಲ್ಲಿ ಗೊಂದಲ ಎದ್ದಿರುತ್ತದೆ. ನೆಮ್ಮದಿಯಿರುವುದಿಲ್ಲ. ಆದ್ದರಿಂದ ನಿದ್ರೆ ಬರುವುದಿಲ್ಲ. ಆದರೆ ಈ ನಿಟ್ಟಿನಲ್ಲಿ ಇತ್ತೀಚಿನ ವಿಜ್ಞಾನಿಗಳ ಸಂಶೋಧನೆಗಳ ಫಲವಾಗಿ ಬದಲಾವಣೆ ಬಂದಿದೆ. ಮನುಷ್ಯನಿಗೆ ಒತ್ತಡ ಅಂದ ಕೂಡಲೇ ಮಾನಸಿಕವಾದ ಜವಾಬ್ದಾರಿ ಹೊರೆ ಎಂದು ಅರ್ಥ. ಮನುಷ್ಯನ ಒಂದು ಸ್ವಭಾವಕ್ಕೆ ತಕ್ಕಂತೆ ಒತ್ತಡವೊಂದರ ಅಳತೆ ಅಥವಾ ಸ್ವರೂಪ ಬದಲಾಗುತ್ತದೆ. ಪ್ರಭಾವ ಬದಲಾಗುತ್ತದೆ. ಎಲ್ಲರ ಮೇಲೆ 'ಒತ್ತಡ'ವೊಂದರ ಪ್ರಭಾವವೊಂದೇ ಮಾದರಿಯಲ್ಲಿ ಇರುವುದಿಲ್ಲ. ಕೆಲವರ ಸ್ವಭಾವ ತುಂಬಾ ವಿಚಿತ್ರವಾಗಿರುತ್ತದೆ. ಈಗಿರುವ ಅಲೋಚನೆ ಮತ್ತೊಂದು ಕ್ಷಣದಲ್ಲಿ ಇರುವುದಿಲ್ಲ. ಮಾತಿನಲ್ಲಿ, ಆಲೋಚನಾ ವಿಧಾನದಲ್ಲಿ ಬದಲಾವಣೆ ಬರುತ್ತದೆ. ಅವರ ಮೇಲೆ ಒತ್ತಡ ಪ್ರಭಾವ ಹೆಚ್ಚಾಗಿರುತ್ತದೆ.

ಕೆಲವರು ಎಷ್ಟೇ ಹೆಚ್ಚಾಗಿ ಒತ್ತಡಕ್ಕೆ ಒಳಗಾದರೂ ಕೂಡಾ ಅವರಲ್ಲಿ ಬದಲಾವಣೆ ಕಂಡುಬರುವುದಿಲ್ಲ. ಅವರು ದೃಢಚಿತ್ತರಾಗಿರುತ್ತಾರೆ. ಅಂಥವರಲ್ಲಿ ಬದಲಾವಣೆ ತರುವುದು ಅಸಂಭವ. ಮಂಪರು ನಿದ್ರೆ ಕೂಡಾ ಒಂದೊಂದು ಸಮಯದಲ್ಲಿ ಮನುಷ್ಯನಿಗೆ ಲಾಭದಾಯಕವಾಗೇ ಪರಿಣಮಿಸುತ್ತದೆ. ತನ್ನನ್ನು ಕುರಿತು ತಾನು ತಿಳಿದುಕೊಳ್ಳುವುದಕ್ಕೆ ಮಂಪರು ನಿದ್ರೆ ಬಹಳವಾಗಿ ನೆರವಾಗುತ್ತದೆ. ಅವರವರಿಗೆ ಇರುವ ಸಮಸ್ಯೆಗಳನ್ನು ಅವರು ಬಗೆಹರಿಸಿಕೊಳ್ಳುವುದಕ್ಕೆ ಮಂಪರು ನಿದ್ರೆ ಸಹಾಯ ಮಾಡುತ್ತದೆ.

ನಿದ್ದೆಯಿಂದಾಗಿ ಭೌತಿಕವಾಗಿ ಯಾವ ವಿಧವಾದ ಬದಲಾವಣೆಗಳು ದೈಹಿಕವಾಗಿ ಆಗುತ್ತದೆಯೋ ಮಂಪರು ನಿದ್ರೆ ಮೂಲಕ ತಿಳಿದುಕೊಳ್ಳಬಹುದು. ಎರಡು ದಿನ ಸರಿಯಾಗಿ ನಿದ್ರೆಯಿಲ್ಲದೆ ಹೋದರೇ ಮನುಷ್ಯ ನಿತ್ಯ ಜೀವನದಲ್ಲಿ ಯಾವ ಕೆಲಸವನ್ನು ಸರಿಯಾಗಿ ಮಾಡಲಾರ ಅನ್ನೋದು ಸರ್ವಸಾಮಾನ್ಯವಾಗಿ ಎಲ್ಲರೂ ಒಪ್ಪುವ ನಿಜ. ಆದರೆ ಕೆಲವರ ವಿಷಯದಲ್ಲಿ ಇದು ಸತ್ಯ ಅಲ್ಲ.ಎಷ್ಟೇ ದಿನಗಳಾದರೂ ನಿದ್ದೆಯಿಲ್ಲದೆ ಇರೋರೂ ಕೂಡಾ ಇದ್ದಾರೆ.ಅವರು ರಾತ್ರಿ ನಿದ್ದೆ ಮಾಡುವುದಿಲ್ಲ.ಆದರೂ ಹಗಲಿನಲ್ಲಿ ಅವರ ಕಾರ್ಯಕ್ರಮಗಳನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತಾರೆ.ಅದು ಅವರ ದೇಹಸ್ವಭಾವ.

ಶ್ರೀಧರ ಸ್ಮರಣೆ

# ಅನುಭವಿಸಿದ ಕಷ್ಟ ರಾಮ ರಾಮಾ, ಯಾರ್‍ಯಾರಿಗೂ ಬೇಡ

–ಲೇ: ಶ್ರೀ ಜಿ. ಟಿ. ಶ್ರೀಧರಶರ್ಮ

ಶ್ರೀಧರಸ್ವಾಮಿಗಳ ಸದ್ಭಕ್ತರಲ್ಲಿ ಅಸಂಖ್ಯಾತ ಮಾತೆಯರೂ ಇದ್ದರು, ಇದ್ದಾರೆ, ಅಂಥವರಲ್ಲಿ ಕೆಲವರು ಶ್ರೀಧರರನ್ನು ಭಗವಂತನೆಂದೇ ಸ್ವೀಕರಿಸಿದ್ದರೂ ಅವರ ಬಗ್ಗೆ ವಿಶೇಷವಾದ ಕಕ್ಕುಲಾತಿ ಅಥವಾ ಕಳಕಳಿಯನ್ನೂ ಹೊಂದಿದ್ದರು. ಹೀಗಿರುವ ಒಬ್ಬ ಭಕ್ತೆಯ ಸ್ಮರಣೆಗಳನ್ನು ಈಗ ಕೇಳೋಣ.

ಮೇಲಿನಮನೆ ನಾರಾಯಣಪ್ಪನವರು ಶ್ರೀಧರರ ಪರಮಭಕ್ತರಲ್ಲಿ ಒಬ್ಬರು. ಅವರ ಹೆಂಡತಿಯೂ ಕೂಡ ಪತಿಯಂತೆ ಶ್ರೀಧರರ ಪರಮಭಕ್ತೆ. ಸುಮಾರು 84 ವರ್ಷದಗೌರಮ್ಮ ಪ್ರಸ್ತುತ ಮೇಲಿನಮನೆಯಲ್ಲಿಯೇ ವಾಸವಾಗಿದ್ದಾರೆ. ಶ್ರೀಧರರ ಬಗ್ಗೆ ಇವರನ್ನು ಮಾತನಾಡಿಸಿದಾಗ ಇವರು ಹೇಳಿದ ಅನುಭವಗಳಿವು. “ಶ್ರೀಧರಸ್ವಾಮಿಗಳ ಬಗ್ಗೆ ನಾನು ಹೇಳುವುದೇನಿದೆ? ಅವರು ಸಾಕ್ಷಾತ್ ಪರಮಾತ್ಮ. ನನಗೆ ನೆನಪಿರುವಂತೆ ನಾನು ಮೊದಲು ಅವರನ್ನು ನೋಡಿದ್ದು ಸಾಗರದ ಅಗ್ರಹಾರದಲ್ಲಿ. ಅವರೊಂದಿಗೆ ನನ್ನ ಯಜಮಾನರು, ಗಣಪತಿ ಮಾಸ್ತರು, ಕುಗ್ವೆ ನಾರಾಯಣಪ್ಪ ಮೊದಲಾದ ಅನೇಕ ಶಿಷ್ಯರೂ, ಭಕ್ತರೂ ಇದ್ದರು. ಅಗ್ರಹಾರದಲ್ಲಿ ಅಂದು ದತ್ತ ಜಯಂತಿ ಎಂದು ನನ್ನ ಹಂಬಲು(ನೆನಪು). ಸಾವಿರಾರು ಜನ ಸೇರಿದ್ದರು. ಬಂದವರಿಗೆಲ್ಲ ಸ್ವಾಮಿಗಳು ತಮ್ಮ ಬಳಿ ಇರುವುದನ್ನೆಲ್ಲ ಕೊಟ್ಟುಬಿಟ್ಟರು. ಕಂಬಳಿ, ಬಟ್ಟೆ, ದುಡ್ಡು ಎಲ್ಲವನ್ನು ಕೊಟ್ಟರು! ಶ್ರೀಧರಸ್ವಾಮಿಗಳು ನಮ್ಮ ಮನೆಗೆ ಭಿಕ್ಷೆಗಾಗಿ ಮೂರು ಬಾರಿ ಬಂದರು. ಒಂದು ಬಾರಿ ಪಾದಪ್ರಜೆಯನ್ನೂ ಮಾಡಿದ ನೆನಪು. ಇದಕ್ಕಿಂತ ವಿಶೇಷ, ನಮ್ಮ ಅದೃಷ್ಟ ಗೊತ್ತ ನಿಮಗೆ? ಒಂದು ಸಲ ಅವರು ಕೊಲ್ಲೂರಿನಿಂದ ಬರುತ್ತಿದ್ದರು. ರಾತ್ರಿ ಸುಮಾರು ಒಂದು ಗಂಟೆಯಾಗಿತ್ತು. ಅವರೇ ಹೇಳಿದರಂತೆ, “ಮಗ! ನನಗೆ ನಿದ್ರೆ ಬರುತ್ತಿದೆ, ನಿನ್ನ ಮನೆಯಲ್ಲಿಯೇ ಮಲಗುತ್ತೇನೆ”. ಇಂಥ ಸೌಭಾಗ್ಯ ಎಷ್ಟು ಜನ ಭಕ್ತರಿಗೆ ಸಿಗುತ್ತೆ ಅಲ್ಲವಾ? ಮನೆಯಲ್ಲಿ ಸ್ವಲ್ಪ ಕಸ–ಪಸ ಇತ್ತು. ಸಂತೋಷದ ಭರದಲ್ಲಿ ನಮಗೆಲ್ಲ ಏನು ಮಾಡಬೇಕೆಂಬುದೇ ತಿಳಿಯದಾಯಿತು. ಅಚಿತೂ ಶ್ರೀಧರರು ‘ಹೇಗೋ’ ನಿದ್ರೆ ಮಾಡಿ ಬೆಳಿಗ್ಗೆ ಬೇಗ ಎದ್ದು ಸ್ನಾನ ಅಹ್ನೀಕ ಎಲ್ಲ ಮುಗಿಸಿ ಹೊರಟರು. ಒಂದು ಬಾರಿ ಕರತಲಭಿಕ್ಷೆಯೂ ನಮ್ಮ ಮನೆಯಲ್ಲಿಯೇ ಆಗಿತ್ತು. ಸ್ವಲ್ಪ ಹಾಲನ್ನು ಹೊರತಾಗಿ ಅವರು ಏನನ್ನೂ ಮುಟ್ಟುತ್ತಿರಲಿಲ್ಲ” ಹೀಗೆ ವಿವರಿಸುತ್ತಲೇ ಸಾಗುತ್ತಾರೆ. “ಸರಿಯಮ್ಮ, ನಿಮಗೆ ಶ್ರೀಧರಸ್ವಾಮಿಗಳ ಹೆಸರು ಕೇಳಿದಾಗ ಏನು ನೆನಪಾಗುತ್ತದೆ? ಈಗಲೂ ಅವರನ್ನು ಹೇಗೆ ಸ್ಮರಿಸುತ್ತೀರಿ?” ಎಂದು ಪ್ರಶ್ನಿಸಿದೆ. “ಮೊದಲು ನೆನಪಾಗುವುದು ಅವರ ಅತಿ ವೇಗದ ನಡಿಗೆ. ಈಗ ಇಲ್ಲಿದ್ದರೆ ಇನ್ನೊಂದು ಕ್ಷಣದಲ್ಲಿ ಮೂರು ಮಾರು ಮುಂದೆ ಮತ್ತೊಬ್ಬ ಭಕ್ತರ ಮನೆಯಲ್ಲಿರುತ್ತಿದ್ದರು. ನಮ್ಮ ಜನರೂ ಅವರಿಗೆ ತುಂಬ ಕಷ್ಟ ಕೊಡುತ್ತಿದ್ದರು. ಆಸ್ರಿಗೆ(ಬಾಯಾರಿಕೆ), ಊಟ, ವಿಶ್ರಾಂತಿ, ಅನುಷ್ಠಾನ ಯಾವುದಕ್ಕೂ ಅವಕಾಶವೇ ಇರಲಿಲ್ಲ. ಶ್ರೀಧರ ಸ್ವಾಮಿಗಳು ಅನುಭವಿಸಿದ ಕಷ್ಟಗಳು ರಾಮ ರಾಮಾ, ಯಾರ್‍ಯಾರಿಗೂ ಬೇಡ. ಈಗಲೂ ನಾನು ಸದಾ ಆ “ನಮಶ್ಶಾಂತಾಯ,,,,,,ನಮಃ” ಹೇಳುತ್ತಾ ಇರುತ್ತೇನೆ. ಅವರನ್ನು ನೋಡಿದ್ದೆ, ಆಶೀರ್ವಾದ ಪಡೆದಿದ್ದೆ. ಈಗ ಎಲ್ಲವನ್ನೂ ಹೇಳಿದೆ, ನನಗಿನ್ನೇನೂ ಬೇಡ, ಶ್ರೀಧರರ ಪಾದಕ್ಕೆ ಸೇರಿಸಿಕೊಂಡರೆ ಸಾಕೇ ಸಾಕು”. 84ರ ಗೌರಮ್ಮ 24 ರ ‘ಹುಡುಗಿ’ಯಂತೆ ಪಟಪಟ ನಡೆಯುತ್ತಾರೆ, ನುಡಿಯುತ್ತಾರೆ!

ಶ್ರೀ ರಾಮ ಕಥಾಸಾರ

# ಸುಗ್ರೀವನ ಪಟ್ಟಾಭಿಷೇಕ

–ಲೇ: ಶ್ರೀ ಬಸ್ತಿ ಸದಾನಂದ ಪೈ, ಸಾಗರ

ರಾಮನ ಬಾಣದಿಂದ ವಾಲಿಯು ಧರಾಶಾಯಿಯಾದೊಡನೆ ಕಪಿ ವೀರರೆಲ್ಲಾ ದಿಕ್ಕಾಪಾಲಾಗಿ ಓಡುತ್ತಾರೆ. ಅದನ್ನು ಕಂಡು ತಾರೆಯು ಅವರೊಡನೆ ಹೆದರಿ ಓಡುತ್ತಿರುವ ಕಾರಣವನ್ನು ಕೇಳುತ್ತಾಳೆ.

ವಾಲಿಯು ರಾಮನ ಬಾಣದಿಂದ ಹತನಾದನು. ನೀನು ಅಂಗದನನ್ನು ರಕ್ಷಿಸಿಕೊ. ನಗರ ದ್ವಾರಕ್ಕೆ ರಕ್ಷಣೆಯ ಏರ್ಪಾಡು ಮಾಡಿ ಅಂಗದನಿಗೆ ಪಟ್ಟಾಭಿಷೇಕ ಮಾಡು. ನಾವೆಲ್ಲರೂ ಅಂಗದನ ಆಜ್ಞಾನುವರ್ತಿಗಳಾಗಿ ಅವನನ್ನು ಹಿಂಬಾಲಿಸುತ್ತೇವೆ ಎನ್ನುತ್ತಾರೆ.

ಕಪಿವೀರರ ಮಾತುಗಳಿಂದ ವಿಚಲಿತಳಾಗದ ತಾರೆ, ಮಹಾಭಾಗ್ಯವಂತನಾದ ನನ್ನ ಪತಿಯು ಹೋದಮೇಲೆ ನನಗೆ ಮಗನಿಂದಾಗಲೀ ಈ ರಾಜ್ಯದಿಂದಾಗಲೀ ಏನಾಗಬೇಕಾಗಿದೆ. ರಾಮನು ಪ್ರಯೋಗಿಸಿದ ಬಾಣದಿಂದ ಯಾವ ನನ್ನ ಪತಿ ಕೆಡವಲ್ಪಟ್ಟನೋ ಅವನ ಪಾದಮೂಲವನ್ನೇ ಸೇರುವೆನು ಎನ್ನುತ್ತಾ ದುಃಖಪೀಡಿತಳಾಗಿ ರೋಧಿಸುತ್ತಾ ಓಡಿಬಂದು ನೆಲದಲ್ಲಿ ಬಿದ್ದಿರುವ ವಾಲಿಯನ್ನು ಕಾಣುತ್ತಾಳೆ. ಅಲ್ಲಿ ರಾಮ ಲಕ್ಷ್ಮಣರನ್ನು, ಸುಗ್ರೀವನ್ನೂ ಕಾಣುತ್ತಾಳೆ. ಅವರನ್ನು ಹಾದುಹೋಗಿ ‘ಆರ್ಯಪುತ್ರಾ’ ಎಂದು ಕೂಗುತ್ತಾ ಮೃತ್ಯುಪಾಶಗಳಿಂದ ಬಂಧಿಸಲ್ಪಟ್ಟಿರುವ ಪತಿಯನ್ನು ಕಂಡು ಅಳುತ್ತಾಳೆ.

ನೀನು ಸುಗ್ರೀವನ ಭಾರ್ಯೆಯನ್ನು ಅಪಹರಿಸಿ ಆತನನ್ನು ರಾಜ್ಯದಿಂದ ಓಡಿಸಿದ್ದರ ಫಲ ನಿನಗೆ ಪ್ರಾಪ್ತಿಯಾಯಿತು. ನಿನ್ನ ಶ್ರೇಯಸ್ಸನ್ನು ಕೋರಿ ಹಿತವಚನಗಳನ್ನಾಡಿದ ನನ್ನ ವಾಕ್ಯಗಳು ನಿನಗೆ ಪಥ್ಯವಾಗಲಿಲ್ಲ. ನನ್ನನ್ನು ಗದರಿಸಿ ಬಿಟ್ಟೆ. ಇನ್ನು ಕೋಪಿಷ್ಠನಾದ



ಕರ್ನಾಟಕ ಪ್ರಹಸನ ಪಿತಾಮಹ – ಟಿ.ಪಿ. ಕೈಲಾಸ

ಸುಗ್ರೀವನಿಂದ ಅಂಗದನಿಗೆ ಏನು ಕೇಡುಂಟಾಗುವುದೋ ಎಂದು ಹಲುಬಿದಳು. ಪತಿಯು ಬಿದ್ದ ಕಡೆಯೇ ಪ್ರಾಯೋಪವೇಶ ಮಾಡಲು ನಿರ್ಧರಿಸುವಳು.

ದುಃಖಿತಳಾದ ತಾರೆಯನ್ನು ಹನುಮಂತನು ಸಮಾಧಾನ ಪಡಿಸಲೆತ್ನಿಸುತ್ತಾನೆ. ಗುಣದೋಷಗಳಿಗೆ ಯುಕ್ತವಾದ ಕರ್ಮಫಲಗಳಂತೆ ಸಮಸ್ತ ಪ್ರಾಣಿಗಳೂ ಶುಭಾಶುಭ ಫಲಗಳನ್ನು ಹೊಂದುತ್ತವೆ. ನೀನು ಅಂಗದನ ಶ್ರೇಯಸ್ಸನ್ನು ಹಾರೈಸು. ನಾವೆಲ್ಲರೂ ನಿನ್ನನ್ನು ನಾಥಳನ್ನಾಗಿ ಭಾವಿಸಿದ್ದೇವೆ. ಈಗ ಮೊದಲು ಕಪಿರಾಜನ ಸಂಸ್ಕಾರದ ಏರ್ಪಾಡಾಗಬೇಕು. ಅಂಗದನಿಗೆ ಪಟ್ಟಾಭಿಷೇಕವಾಗಬೇಕು ಎನ್ನುತ್ತಾನೆ.

ಕುಟುಕು ಜೀವದಿಂದಿದ್ದ ವಾಲಿಯು ಎದುರಿಗಿರುವ ಸುಗ್ರೀವನನ್ನು ಕಂಡು ಹತ್ತಿರಕ್ಕೆ ಕರೆಯುತ್ತಾನೆ. ವಿಧಿಯ ಎಳೆತಕ್ಕೆ ಸಿಕ್ಕಿ ಬುದ್ಧಿ ಮೋಹದಿಂದ ಪಾಪಗೈದೆ. ಅದಕ್ಕಾಗಿ ನನ್ನಲ್ಲಿ ದೋಷವನ್ನು ಕಾಣಬೇಡ. ನಾವೀರ್ವರೂ ಸುಖವನ್ನೂ, ಸೌಹಾರ್ದವನ್ನೂ ಪಡೆದು ಬರಲಿಲ್ಲ. ನೀನು ಪಟ್ಟಾಭಿಷಿಕ್ತನಾಗಿ ಈ ರಾಜ್ಯವನ್ನು ಆಳು. ನಿನಗೆ ಇದು ಇಷ್ಟವಾಗದಿದ್ದರೂ ಅದನ್ನು ನೀನು ಮಾಡಲೇಬೇಕು. ಅಂಗದನು ಬಾಲಕನಾದರೂ ಯುದ್ಧದಲ್ಲಿ ತನ್ನ ಯೋಗ್ಯತೆಗೆ ತಕ್ಕಂತೆ ಕೆಲಸ ಮಾಡುತ್ತಾನೆ. ತಾರೆಯು ಸೂಕ್ಷ್ಮವಾದ ಅರ್ಥವಿಚಾರಗಳ ತೀರ್ಮಾನದಲ್ಲಿ ತಿಳುವಳಿಕೆಯುಳ್ಳವಳು. ರಾಮನ ಕಾರ್ಯವನ್ನು ಖಂಡಿತವಾಗಿಯೂ ಮಾಡು. ದಿವ್ಯವಾದ ಈ ಸುವರ್ಣ ಮಾಲಿಕೆಯನ್ನು ಧರಿಸು. ನಾನು ಸತ್ತಮೇಲೆ ಇದರಲ್ಲಿರುವ ಅಧಿಕವಾದ ಭಾಗ್ಯವೂ ಬಿಟ್ಟುಹೋದೀತು ಎಂದು ತನ್ನ ಕೊರಳಲ್ಲಿದ್ದ ಸುವರ್ಣ ಮಾಲಿಕೆಯನ್ನು ಕೊಡುತ್ತಾನೆ.

ನಂತರ ಅಂಗದನನ್ನು ಕುರಿತು ಇನ್ನು ಸುಗ್ರೀವನ ವಶವರ್ತಿಯಾಗಿರು. ನಿನ್ನನ್ನು ನಾನು ಪಾಲಿಸಿದಂತೆಯೇ ಸುಗ್ರೀವನು ಪಾಲಿಸುವನು ಎಂದು ಹೇಳಿ ಬಾಣದಿಂದಾದ ನೋವನ್ನು ಸಹಿಸಲಾರದೆ ಕಣ್ಣು ಹೊರಳಿಸಿ ಪ್ರಾಣ ತೊರೆಯುತ್ತಾನೆ.

ಪತಿಯ ಮರಣದಿಂದ ತಾರೆ ದುಃಖದಲ್ಲಿ ಮುಳುಗುತ್ತಾಳೆ. ತಾರೆಯ ದುಃಖವನ್ನು ಕಂಡು ಸುಗ್ರೀವನು ಸಹೋದರನಾದ ವಾಲಿಯ ವಧೆಗಾಗಿ ಸಂಕಟಪಡುತ್ತಾನೆ. ರಾಮನ ಬಳಿ ಬಂದು ತನ್ನ ದುಃಖವನ್ನು ತೋಡಿಕೊಳ್ಳುತ್ತಾನೆ. ಕ್ರೋಧದಿಂದಲೂ ಹುಟ್ಟಿದ ತಿರಸ್ಕಾರದಿಂದಲೂ ಅಣ್ಣನ ವಧೆಗೆ ಸಮ್ಮತಿಯಿತ್ತೆ. ಈಗ ರಾಜ್ಯದಲ್ಲಿ ಆಸಕ್ತನಾಗಿಲ್ಲ. ನಾನು ಋಷ್ಯಮೂಕದಲ್ಲಿಯೇ ವಾಸ ಮಾಡುತ್ತೇನೆ. ವಾಲಿಯು ಹಿಂದೆ ನಿನ್ನನ್ನು ಕೊಲ್ಲುವುದಿಲ್ಲ ಹೋಗು ಎಂದು ಹೇಳಿದ್ದ. ಅದನ್ನು ನಾನು ವಿಚಾರ ಮಾಡದೇ ದುಡುಕಿದೆ. ಆತನು ಹಿರಿಯತನದ ಪೂಜ್ಯತೆಯನ್ನು ಉಳಿಸಿಕೊಂಡನು. ನಾನು ಕುಲಘಾತಕನೂ, ಅಪರಾಧಿಯೂ ಆಗಿ ಬದುಕಲು ಇಚ್ಛಿಸುವುದಿಲ್ಲ. ನಾನು ಅಣ್ಣನೊಂದಿಗೆ ಅಗ್ನಿಯನ್ನು ಪ್ರವೇಶಿಸುವೆನು. ನನಗೆ ಅಪ್ಪಣೆ ಕೊಡು. ಸೀತೆಯನ್ನು ಹುಡುಕುವ ಕೆಲಸವನ್ನು ಕಪಿ ವೀರರು ಮಾಡುತ್ತಾರೆ ಎನ್ನುತ್ತಾನೆ.

ಸುಗ್ರೀವನ ಮಾತುಗಳನ್ನು ಕೇಳಿ ರಾಮನು ಸ್ವಲ್ಪಕಾಲ ಸ್ಥಬ್ಧನಾಗುತ್ತಾನೆ. ವಾಲಿಯನ್ನು ತಬ್ಬಿಕೊಂಡಿದ್ದ ತಾರೆಯನ್ನು ಮಂತ್ರಿ ಮುಖ್ಯರು ಮೇಲಕ್ಕೆಬ್ಬಿಸುತ್ತಾರೆ. ತಾರೆ ಬಿಟ್ಟ ಕಣ್ಣುಗಳಿಂದ ರಾಮನನ್ನೂ ಲಕ್ಷ್ಮಣನನ್ನೂ ನೋಡುತ್ತಾಳೆ. ಇವನೇ ಪುರುಷೋತ್ತಮನು ಎಂದು ತಿಳಿದು ಆತನ ಸಮೀಪಕ್ಕೆ ಹೋಗುತ್ತಾಳೆ. ರಾಮಾ ನೀನು ದಿವ್ಯ ಮಂಗಳ ವಿಗ್ರಹನು ವಾಲಿಯನ್ನು ಯಾವ ಬಾಣದಿಂದ ಕೊಂದೆಯೋ ಅದೇ ಬಾಣದಿಂದ ನನ್ನನ್ನು ಹೊಡೆದುಬಿಡು ಎಂದು ವಿಧ ವಿಧವಾಗಿ ರಾಮನನ್ನು ಕೇಳಿಕೊಳ್ಳುತ್ತಾಳೆ.

ತಾರೆಯ ದುಃಖವನ್ನು ಕಂಡು ರಾಮನು ಅವಳನ್ನು ಸಮಾಧಾನಿಸುತ್ತಾನೆ. ನೀನು ವೀರಪತ್ನಿ. ಕೆಟ್ಟ ಯೋಚನೆ ಮಾಡಬೇಡ. ಸುಖ ದುಃಖ ಸಂಪರ್ಕಗಳೆಲ್ಲಾ ಬ್ರಹ್ಮಲಿಖಿತ. ಅದನ್ನು ಮೂರು ಲೋಕಗಳು ಕೂಡಾ ಮೀರಲಾರವು. ಶೂರಪತ್ನಿಯರು ಪ್ರಲಾಪಿಸುವುದಿಲ್ಲ ಎನ್ನುತ್ತಾನೆ. ಲಕ್ಷ್ಮಣನು ಸುಗ್ರೀವನಿಗೆ ವಾಲಿಯ ದಹನದ ಕಾರ್ಯವನ್ನೂ ಮುಂದಿನ ಪ್ರೇತಕಾರ್ಯವನ್ನೂ ಮಾಡಲು ತಿಳಿಸುತ್ತಾನೆ.

ನಂತರು ಕಪಿವೀರನು ತ್ವರಿತವಾಗಿ ಗುಹೆಯನ್ನು ಪ್ರವೇಶಿಸಿ, ವಿಶ್ವಕರ್ಮನಿಂದ ರಚಿತವಾಗಿದ್ದ ಭದ್ರಾಸನದಿಂದ ಕೂಡಿ ರಥಕ್ಕೆ ಸಮಾನವಾದ ಸಿಂಹಾಸನವನ್ನು ಸಮರ್ಥರಾದ ವಾನರರಿಂದ ಹೊರಿಸಿತರುತ್ತಾನೆ.

ಕಪಿ ವೀರರು ದುಃಖಕ್ರಾಂತರಾಗಿ ಯೋಗ್ಯರೀತಿಯಿಂದ ವಾಲಿಯ ದಹನ ಕಾರ್ಯವನ್ನು ನೆರವೇರಿಸುತ್ತಾರೆ.

ಸುಗ್ರೀವನು ಮಂಗಳ ಸ್ನಾನ ಮಾಡಿ ಗುಹೆಯನ್ನು ಪ್ರವೇಶಿಸುತ್ತಾನೆ. ಇನ್ನು ನಾಲ್ಕು ತಿಂಗಳು ಮಳೆಗಾಲ. ನಾನು ಲಕ್ಷ್ಮಣನೊಡನೆ ಈ ಪರ್ವತದಲ್ಲಿ ವಾಸ ಮಾಡುತ್ತೇನೆ. ಕಾರ್ತಿಕ ಮಾಸ ಬಂದಮೇಲೆ ರಾವಣ ಸಂಹಾರಕ್ಕೆ ಯತ್ನ ಮಾಡುವ ಎಂದು ರಾಮನು ಸುಗ್ರೀವನನ್ನು ಬೀಳ್ಕೊಡುತ್ತಾನೆ.

**ವಿ.ಸೂ :–** ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ಬರೆಯುವ ಅಭಿರುಚಿ ಇರುವವರು ತಮ್ಮ ಸ್ವ–ರಚನೆಯ ಕತೆ ಕವನ ಲೇಖನ ಹಾಗೂ ಧಾರ್ಮಿಕ ಆಚಾರ ವಿಚಾರ ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಲೇಖನವನ್ನು ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಆಯ್ಕೆ ಮಾಡಿ ಪ್ರಕಟಿಸಲಾಗುವುದು. ಇವುಗಳನ್ನು ಪ್ರತಿ ತಿಂಗಳ 15ನೇ ದಿನಾಂಕದೊಳಗೆ ತಲುಪಿಸಿ. ಇಮೇಲ್ ಅಥವಾ ವಾಟ್ಸಪ್‌ಗೆ ಸಹ ಕಳುಹಿಸಬಹುದು. ಇಮೇಲ್ hemapura.bangarmakki@gmail.com ವಾಟ್ಸಪ್ +919449109299 [ಕಡ್ಡಾಯವಾಗಿ 'ಹೇಮಪುರ ಮಾಸ ಪತ್ರಿಕೆಗಾಗಿ' ಎಂದು ತಲೆಬರಹ ಇರಲಿ]

ಸುಗ್ರೀವನು ಕಿಷ್ಕಿಂಧಾ ಪಟ್ಟಣಕ್ಕೆ ಹೋಗಿ ಸೇರುತ್ತಾನೆ. ಕಪಿವೀರರೆಲ್ಲಾ ಅವನಿಗೆ ನಮಸ್ಕರಿಸುತ್ತಾರೆ. ಒಂದು ಬಾರಿ ಅಣ್ಣನ ಅಂತಃಪುರದೊಳಕ್ಕೆ ಹೋಗಿ ಬರುತ್ತಾನೆ. ಕಪಿ ವೀರರು ಸುಗ್ರೀವನಿಗೆ ಪಟ್ಟಾಭಿಷೇಕವನ್ನು ಮಾಡುತ್ತಾರೆ. ಸುಗ್ರೀವನು ಅಂಗದನಿಗೆ ಯುವರಾಜ್ಯಾಭಿಷೇಕವನ್ನು ಮಾಡುತ್ತಾನೆ. ಎಲ್ಲರೂ ಸುಪ್ರೀತರಾಗಿ ಮಳೆಗಾಲವನ್ನು ಹರ್ಷದಿಂದ ಕಳೆಯುತ್ತಾರೆ.

ರಾಮನು ವಾಲಿಯನ್ನು ಕೊಂದರೂ ಅವನಿಗೆ ಸಾಯುಜ್ಯವನ್ನು ಕರುಣಿಸುತ್ತಾನೆ. ಸುಗ್ರೀವನು ತನ್ನ ದುಡುಕಿಗೆ ಪಶ್ಚಾತ್ತಾಪ ಪಡುತ್ತಾನೆ. ವಾಲಿಯೂ ದೇವಾಂಶ ಸಂಭೂತನು. ತನ್ನ ಕರ್ತವ್ಯ ಮುಗಿಸಿ ದೇವಲೋಕಕ್ಕೆ ತೆರಳುತ್ತಾನೆ. ವಾಲಿಯ ವಧೆಯಿಂದ ಸುಗ್ರೀವನಿಗೆ ರಾಮನ ಸೇವೆ ಮಾಡುವ ಅವಕಾಶ ಸಿಗುತ್ತದೆ. ಇದು ಪೂರ್ವಯೋಜಿತ. ತಾರೆಗೆ ಹೇಳಿದಂತೆ ಎಲ್ಲವೂ ಬ್ರಹ್ಮಲಿಖಿತ. ಅದನ್ನು ಯಾರಿಂದಲು ತಪ್ಪಿಸಲಾಗುವುದಿಲ್ಲ.

"ನಮ್ಮಲ್ಲಿ ಬಡವರ ಸಿಟ್ಟು ದವಡೆಗೆ ಮೂಲ" ಎಂಬ ಗಾದೆಯಿದೆ. ಸಿಟ್ಟು ಬಂದಾಗ ಮನುಷ್ಯ ವಿವೇಕ ಕಳೆದುಕೊಳ್ಳುತ್ತಾನೆ. ಅದರಿಂದ ಉಂಟಾದ ಹಾನಿಯನ್ನು ಕಂಡು ಕೊನೆಗೆ ಪಶ್ಚಾತ್ತಾಪ ಪಡುತ್ತಾನೆ.

ಸಂಪ್ರದಾಯ

# ಕಷ್ಟಗಳನ್ನು ದೇವರು ಕಲ್ಪಿಸುತ್ತಾನೆಯೇ?

–ಲೇ: ಶ್ರೀ ಜಿ. ವಿ. ಶರ್ಮಾಪಂಡಿತ್.

**ಇಲ್ಲ!**

ದೇವರು ಎಂದೂ ಯಾರಿಗೂ ಕಷ್ಟಗಳನ್ನು ಕೊಡುವುದಿಲ್ಲ. ಎಂಥಾ ನೀಚನಿರಲೀ, ನಿಕೃಷ್ಟನಿರಲೀ, ಪಾಪಾತ್ಮನಿರಲೀ, ದೇವರು ಪ್ರೀತಿಯಿಂದಲೇ ನೋಡುತ್ತಾನೆ.

**ಮಗನು ಎಂಥವನೇ ಇರಲೀ ತಂದೆ ದ್ವೇಷಿಸುವುದಿಲ್ಲ.**

ನಮ್ಮಗೆ ಕಷ್ಟಗಳು ಬಂದೊದಗಿದಾಗ ಸಂಯಮದಿಂದ ಎದುರಿಸಬೇಕೇ ವಿನಹ ದೇವರನ್ನು ನಿಂದಿಸಬಾರದು. ಇದು ಮೂರ್ಖರು ಮಾಡುವ ಕೆಲಸ. ಬುದ್ಧಿವಂಥರು ಎಂದೂ ದೇವರನ್ನು ನಿಂದಿಸುವುದಿಲ್ಲ. ಯಾವ ಪ್ರಾಣಿಗಳಿಗೂ ಇಲ್ಲದ ಬುದ್ಧಿಶಕ್ತಿಯನ್ನು ದೇವರು ನಮಗೆ ಮಾತ್ರ ನೀಡಿದ್ದಾನೆ. ಆದರೇ ನಾವು ನಮ್ಮ ಬುದ್ಧಿಯನ್ನು ದುರುಪಯೋಗ ಮಾಡುತ್ತಿದ್ದೇವೆ.

ನಮಗೆ ಬರುವ ಎಲ್ಲಾ ಕಷ್ಟಗಳನ್ನು ನಮ್ಮ ಬುದ್ಧಿಹೀನತೆಯಿಂದ ನಾವೇ ತಂದುಕೊಳ್ಳುತ್ತೇವೆ. ನಮ್ಮಲ್ಲಿ ದುರಾಶೆ, ಅವಸರ, ಸಿಟ್ಟು ಅಸೂಯೆ, ಹಗೆತನ, ಸ್ವಾರ್ಥಬುದ್ಧಿ, ಚಂಚಲತನ, ಅಹಂಕಾರ, ದ್ವೇಷ, ಆಸೆ, ಸೋಮಾರಿತನ, ಅಪ್ರಮಾಣಿಕತೆ ಮುಂತಾದ **ವಿಷ ಸರ್ಪಗಳು** ಹುತ್ತ ಮಾಡಿಕೊಂಡು ಇರುವಾಗ ದೇವರನ್ನು ನಿಂದಿಸಿದರೇ ಪ್ರಯೋಜನವೇನು?

**" ನವಭಾಗಂ ಮನುಷ್ಯಾಣಾಂ**
**ದಶಮಂ ದೈವ ಚಿಂತನಂ "**
**ಹಿಂದೂಧರ್ಮ ಆಚಾರ ವಿಚಾರ**

ನಮ್ಮ ಪ್ರಯತ್ನ ಲೋಪದಿಂದಲೇ ನಮಗೆ ಕಷ್ಟಗಳು ಬರುತ್ತವೆ. ಕುರುಡಿಯಾದ ಹೆಂಡತಿಯನ್ನು ಕಟ್ಟಿ ಕೊಂಡು ಮಡಕೆ ಹೊಡೆದಿದೆ ಎಂದು ವಿಧಿಯನ್ನು ನಿಂದಿಸುವುದು ತಪ್ಪಲ್ಲವೇ? ನಿನ್ನ ಗಾಡಿಯಲ್ಲಿ ಪೆಟ್ರೋಲ್ ಮುಗಿದು ಹೋದರೇ ದೇವರು ಹೊಣೆಗಾರನೇನು? ಜೂಜಾಟವಾಡಿ ಆಡಿ ಹಣವನ್ನು ಹಾಳು ಮಾಡುತ್ತಿದ್ದರೇ ನಿನ್ನ ಪರವಾಗಿ ದೇವರು ಬಂದು ಇಸ್ಪೀಟು ಆಡಲಿಕ್ಕೆ ಆಗುತ್ತದೆಯೇನು? ಒಂದು ಘಂಟೆಗೆ ಬರುವ ರೈಲು ಅನ್ನು ಹತ್ತಲಿಕ್ಕೆ ಆರುಘಂಟೆಗೆ ಬಂದರೇ ರೈಲು ನಿಲ್ಲಿಸಲ್ಲಿಕ್ಕೆ ಆಗುತ್ತದೆಯೇನು?.

ದೇವರು ಅನ್ನ ನೀಡುತ್ತಾನೆ. ತಿನ್ನಬೇಕಾದ ಕೆಲಸ ನಮ್ಮದಲ್ಲವೇ? ದೇವರು ಮಾಡಲಿಕ್ಕೆ ಎರಡು ಕೈಗಳನ್ನು, ಯೋಚಿಸಲಿಕ್ಕೆ ಅನಂತವಾದ ಬುದ್ಧಿಯನ್ನು ನೀಡಿದ್ದಾನೆ. ಯೋಚಿಸಿ ಮಾಡುವುದು ನಮ್ಮ ಕೆಲಸ. ಹಗ್ಗಸಿಕ್ಕಿದೆ ಎಂದು ಹಸುವನ್ನು ಖರೀದಿಸಬಾರದು. ಕತ್ತಿ ಇದೆ ಎಂದು ಗಾಯಮಾಡಿಕೊಳ್ಳಬಾರದು. ಉಪ್ಪು ಬಿದ್ದ ಭೂಮಿಯಲ್ಲಿ ಬೇಸಾಯ ಮಾಡಬಾರದು. ಯುಕ್ತಾಯುಕ್ತ ವಿಚಾರಗಳನ್ನು ನಾವೇ ಮಾಡಿಕೊಳ್ಳಬೇಕೆಂದೇ ನಮಗೆ ದೇವರು ಬುದ್ಧಿ ಶಕ್ತಿಯನ್ನು ಅನುಗ್ರಹಿಸಿದ್ದಾನೆ.

**ದೇವರು ಯಾರಿಗೂ ಕಷ್ಟಗಳನ್ನು ಕಲ್ಪಿಸುವುದಿಲ್ಲ.**

ನಮ್ಮ ತಪ್ಪುಗಳನ್ನು ದೇವರ ಮೇಲೆ ಹಾಕಿ ಕುಳಿತುಕೊಳ್ಳಬಾರದು. ಪ್ರಯತ್ನ ವಾದಿಗಳಿಗೆ ದೇವರು ಸದಾ ಸಹಾಯ ಮಾಡುತ್ತಾನೆ. ಇದು ಸತ್ಯ.

# ಪರಮೇಶ್ವರನ ಇಪ್ಪತ್ತೈದು ಲೀಲೆಗಳು

**ಹತ್ತನೇ ಲೀಲೆ – ಚಂದ್ರಶೇಖರ ಲೀಲೆಯು**

ದಕ್ಷ ಪ್ರಜಾಪತಿಯು ಅಶ್ವಿನಿಯಾದಿಯಾಗಿ ರೇವತಿ ಕಡೆಯಾಗಿ ಇಪ್ಪತ್ತೇಳು ಮಂದಿ ಹೆಣ್ಣು ಮಕ್ಕಳನ್ನು ಚಂದ್ರನಿಗೆ ಧಾರೆಯೆರೆದು ಕೊಟ್ಟು ಇವರೆಲ್ಲರನ್ನೂ ನೋಡಿಕೊಂಡು ಹೋಗೆಂದು ಆಜ್ಞಾಪಿಸಿದನು. ಆದರೆ ಚಂದ್ರನು ನಾಲ್ಕನೆಯವಳಾದ ರೋಹಿಣಿಯೊಬ್ಬಳಲ್ಲಿಯೇ ಅನುರಾಗಿಯಾಗಿ ಇರಹತ್ತಿದನು.

ಉಳಿದ ಇಪ್ಪತ್ತಾರು ಜನರೆಲ್ಲರೂ ಇದನ್ನು ಸಹಿಸಿ ಬೇಸತ್ತು ಕೊನೆಗೆ ತಂದೆ ದಕ್ಷ ಪ್ರಜಾಪತಿಗೆ ದೂರು ಕೊಟ್ಟರು. ದಕ್ಷ ಪ್ರಜಾಪತಿಯು ಕೋಪಾವಿಷ್ಠನಾಗಿ ಚಂದ್ರನಿಗೆ ಮತ್ತೊಮ್ಮೆ ಎಲ್ಲರನ್ನೂ ಸರಿಯಾಗಿ ನೋಡಿಕೊಂಡು ಹೋಗೆಂದು ಬುದ್ಧಿವಾದ ಹೇಳಿ ಹೋದನು. ಆದರೆ ಚಂದ್ರನು ರೋಹಿಣಿಯ ಹೊರತುಪಡಿಸಿ ಉಳಿದ ಹೆಂಡರನ್ನು ಮತ್ತೆ ಅಲಕ್ಷಿಸಿದನು.

ಇದರಿಂದ ದಕ್ಷ ಪ್ರಜಾಪತಿಯು ಕೋಪದಿಂದ– ಎಲೈ ಚಂದ್ರನೇ ನನ್ನ ಮಾತು ನಡೆಸದ ಮತ್ತು ಎಲ್ಲ ಪತ್ನಿಯರನ್ನು ಒಂದೇ ತೆರನಾಗಿ ನೋಡದ ನೀನು ಕಳೆಹೀನನಾಗೆಂದು ಶಾಪಕೊಟ್ಟನು. ಶಾಪಗ್ರಸ್ತನಾದ ಚಂದ್ರನ ಒಂದೊಂದೇ ಕಲೆಗಳು 1) ಆವೃತೆ 2) ಮಾನಸಿ 3) ಗ್ರಾಹಿಣಿ 4) ತುಷ್ಟಿ 5) ಪುಷ್ಟಿ 6) ಪ್ರಿತಿ 7) ರೇವತಿ 8) ಹೀ 9) ಶ್ರೀ 10) ಕಾಂತಿ 11) ಜ್ಯೋತ್ಸ್ನೆ 12) ಹೈಮವತಿ 13) ಛಾಯೆ 14) ಪೂರಣಿ 15) ವಾಮೆ ಎಂಬ ಹದಿನೈದು ಕಲೆಗಳು ಸವೆದು ಹೋದವು. ಆಮಾ ಎಂಬ ಒಂದು ಕಲೆಯು ಮಾತ್ರ ಉಳಿಯಿತು.

ಆಗ ಚಂದ್ರನು ಪರಮೇಶ್ವರನನ್ನು ಭಜಿಸಿದನು. ನನ್ನ ಕಲೆಗಳು ವೃದ್ಧಿಹೋದವಂತೆ ಅನುಗ್ರಹಿಸಬೇಕೆಂದು ಅನನ್ಯ ಭಾವನೆಯಿಂದ ಬೇಡಿಕೊಂಡನು. ಆಗ ಪರಮೇಶ್ವರನಿಗೆ ಕರುಣೆ ಹುಟ್ಟಿ–ಎಲೈ ಚಂದ್ರನೇ ದಕ್ಷ ಪ್ರಜಾಪತಿಯ ಶಾಪವು ಸುಳ್ಳಾಗದು. ಅವನ ಶಾಪದಿಂದ ದಿನಕ್ಕೊಂದು ಕಲೆಯನ್ನು ಕಳೆದುಕೊಳ್ಳುವವನಾಗು. ಆದರೆ ಈಗ ನಿನ್ನ ಸವೆದ ಕಲೆಗಳು ವೃದ್ಧಿಯಾಗುವಂತೆ ವರವನ್ನು ಕೊಡುವೆನು. ಇದರಿಂದ ಸವೆದ ಹದಿನೈದು ಕಲೆಗಳು ಪುನ: ದಿನಕ್ಕೊಂದರಂತೆ ವೃದ್ಧಿಹೊಂದುತ್ತ ಹೋಗುವವು ಹೋಗೆಂದು ಹೇಳಿ ಚಂದ್ರನ "ಆಮಾ" ಎಂಬ ಕಳೆಯನ್ನೇ ತಾನು ಧರಿಸಿ ಚಂದ್ರಶೇಖರನಾದನು. ಅದೇ ಅಮಾಕಳೆಯೇ ಅಮವಾಸ್ಯೆಯಾಯಿತು. ಪರಮೇಶ್ವರನ ವರದಿಂದ ಚಂದ್ರನು ಹದಿನೈದು ದಿನಗಳಲ್ಲಿ ಮತ್ತೆ ಪೂರ್ಣ ಕಳೆಗಳಿಂದ ಶೋಭಿಸುವನು. ಹದಿನೈದನೆಯ ಕಳೆಯು ಕೂಡಿದಾಗಲೇ ಪೌರ್ಣಿಮೆಯಾಗುವುದು. ನಾವೀಗ ಇಪ್ಪತ್ತೇಳು ನಕ್ಷತ್ರಗಳನ್ನು ಕರೆಯುತ್ತಿರುವುದು. ಚಂದ್ರನ ಇಪ್ಪತ್ತೇಳು ಜನ ಹೆಂಡಿರ ಹೆಸರದೆ ಮತ್ತೇನಲ್ಲ. ಚಂದ್ರನಿಗೆ ನಕ್ಷತ್ರಗಳ ಪತಿಯೆಂದು ಉಡುರಾಜನೆಂದೂ ಕರೆಯುವರು. ಅಮವಾಸ್ಯೆ ಪೌರ್ಣಿಮೆಗಳು ಚಂದ್ರನಿಂದಲೇ ಬರುವಂತಾದವು. ಅವನ್ನು ಮಾನವರು ಆಚರಿಸುತ್ತಿರುವುದನ್ನು ಈಗಲೂ ಕಾಣಬಹುದು. ಈಗ ಮಾನವರು ವಿಜ್ಞಾನದಲ್ಲಿ ಮುಂದುವರಿದು ಚಂದ್ರಗ್ರಹದ ಮೇಲೆ ಹಾರಿ ಹೋಗಿ ಅಲ್ಲಿಯ ಕಲ್ಲು–ಮಣ್ಣುಗಳನ್ನು ತಂದು ಸಂಶೋಧಿಸುತ್ತಿರುವುದನ್ನು ನಾವಿಂದು ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಹೀಗೆ ಪರಮೇಶ್ವರನ ಹತ್ತನೆಯದಾದ ಚಂದ್ರಶೇಖರ ಲೀಲೆಯು ಮುಗಿದುದು.

**ಹನ್ನೊಂದನೇ ಲೀಲೆ – ಉಮಾ ಮಹೇಶ್ವರ ಲೀಲೆಯು**

ಪರಮೇಶ್ವರನು ಸೃಷ್ಟಿ, ಸ್ಥಿತಿ, ಲಯ, ಕಾರಣ ಕರ್ತನಾಗಿ ಸೋಮೇಶ್ವರನೆಂಬ ಹೆಸರಿನಿಂದ ಉಮಾ ಸಹಿತನಾದನು. ಹೇಗೆಂದರೆ 'ಅ'ಕಾರ 'ಉ'ಕಾರ 'ಮ'ಕಾರ ಕೂಡಿ 'ಓಂ' ಕಾರ ಪ್ರಣವವಾಯಿತು.

ಆ ಮಹಾ ಪ್ರಣವದಲ್ಲಿಯ ಮೂರು ಅಕ್ಷರಗಳು ಸ್ಥಾನಾಂತರವಾದವು. ಹೇಗೆಂದರೆ ಮೊದಲಿನ 'ಅ'ಕಾರವು ಕೊನೆಗೆ ನಿಂತಿತು. ನಡುವಿನ 'ಉ'ಕಾರವು ಮೊದಲು ಬಂದು ನಿಂತಿತು. ಕೊನೆಯ 'ಮ'ಕಾರವು ಮಧ್ಯದಲ್ಲಿ ಸೇರಿತು. 'ಮ'ಕಾರಕ್ಕೆ 'ಅ' ಕಾರವು ಸೇರಿತು ಹೀಗೆ ಉಮಾ ಶಕ್ತಿಯಾಯಿತು.

ಶಿವ ಮತ್ತು ಶಕ್ತಿ ಎರಡೂ ಸೇರಿ ಒಂದಾಗಿ ಪ್ರಕಾಶಿಸುತ್ತಿರುವಂತೆ ಉಮಾ ಮಹೇಶ್ವರರ ಮಿಲನವಾಗಿ ಉಮಾ ಮಹೇಶ್ವರ ಲೀಲೆಯಾಯಿತು. ಹೀಗೆ ಹನ್ನೊಂದನೆಯದಾದ ಉಮಾ ಮಹೇಶ್ವರ ಲೀಲೆಯು ಮುಗಿದುದು.

**ವಿ.ಸೂ :–** ಶ್ರೀ ವೀರಾಂಜನೇಯ ಭಕ್ತ ಮಹಾಜನಗಳೇ ಹಾಗೂ ಪ್ರಿಯ ಹೇಮಪುರ ಓದುಗರೇ ನಿಮ್ಮಲ್ಲಿ ವಿನಂತಿಸುವುದೇನೆಂದರೇ ಪತ್ರಿಕೆಯ ಚಂದಾದಾರರಾಗಿರುವ ತಾವುಗಳು ತಮ್ಮ ಚಂದಾ ಅವಧಿಯು ಮುಗಿದು ನಿಮ್ಮ ಮನೆಗೆ ಪತ್ರಿಕೆ ಬರುತ್ತಿದ್ದರೆ ತಕ್ಷಣ ಶ್ರೀ ಕ್ಷೇತ್ರ ಬಂಗಾರಮಕ್ಕಿ ಗೇರಸೊಪ್ಪಾ ಈ ವಿಳಾಸಕ್ಕೆ ನಿಮ್ಮ ಚಂದಾ ಹಣವನ್ನು ಡಿ.ಡಿ. ಅಥವಾ ಎಂ.ಓ. ಮಾಡಿ ದೂರವಾಣಿ: 08387–268545 ಅಥವಾ ಮೊಬೈಲ್ +919449109299 ಗೆ ತಿಳಿಸಿ ನಿಮ್ಮ ಚಂದಾ ಅವಧಿಯನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ.

ಮಹಾಕ್ಷತ್ರಿಯ

# ಗೆಲುವೇ ಸೋಲು

–ಲೇ : ಶ್ರೀ ದೇವುಡು.

ಇನ್ನು ಅಷ್ಟು ಹೊತ್ತಿನೊಳಗೆ ವೃತ್ರನು ಗಾಬರಿಗೊಂಡು ಎದ್ದನು. ಮುಖ, ಕಣ್ಣು ಎಲ್ಲವೂ ಗಾಬರಿಯನ್ನು ಸೂಚಿಸುತ್ತಿತ್ತು. ಕಣ್ಣು ಬಿಟ್ಟು ನೋಡುತ್ತಾನೆ. ಇಂದ್ರನು ಅತಿ ವಿನಯದಿಂದ ಕುಳಿತಿದ್ದಾನೆ. ತನ್ನ ಪರಿವಾರದ ದಾನವೇಂದ್ರರೆಲ್ಲರೂ ಎಲ್ಲೆಲ್ಲಿದ್ದವರು ಅಲ್ಲಲ್ಲಿಯೇ ಒರಗಿದ್ದಾರೆ. ಒಂದೇ ಗಳಿಗೆಯೊಳಗಾಗಿ ಸುತ್ತಲೂ ನೋಡಿ, ಎಲ್ಲವೂ ಸಹಜವಾಗಿರುವುದನ್ನು ಕಂಡು ವೃತ್ರನು ನಗುತ್ತ "ಇಂದ್ರ ನನಗೊಂದು ಕನಸಾಯಿತು. ಕನಸು ನಿಜವಾಗಿಯೇ ಇದ್ದಂತೆ ತೋರಿತಲ್ಲ! ನೋಡಿದೆಯೋ?" ಎಂದನು.

ಇಂದ್ರನು ತನ್ನನ್ನು ವೃತ್ರನು ಇಂದ್ರನೆಂದು ಸಂಬೋಧಿಸಿದುದನ್ನು ಗಮನಿಸದಂತೆ ಇದ್ದು "ಹೌದು ಪ್ರಭು. ಕನಸಿನ ವೈಭವವೇ ಅದು. ನಿಜದ ತಲೆಯನ್ನು ಮೆಟ್ಟಿಹಾಕಿದಂತೆ ಇರುತ್ತದೆ. ಅದೇನೆಂದು ಕೇಳಬಹುದೇ?" ಎಂದನು.

ವೃತ್ರನು ಗಟ್ಟಿಯಾಗಿ ನಗುತ್ತ "ಕನಸಿನಲ್ಲಿ ನಾವಿಬ್ಬರೂ ಯುದ್ಧಮಾಡುತ್ತೇವೆ. ನೀನು ನನ್ನನ್ನು ಎದುರಿಸಿ ಹೊಡೆಯಲು ಬರುತ್ತೀಯೆ. ನನಗೇಕೋ ದಿಗಿಲಾಗುತ್ತಿದೆ. ನಾನು ಕಿರುಚಿಕೊಂಡು ಓಡುತ್ತೇನೆ. ನೀನು ಬಂದು ನನ್ನ ಕತ್ತು ಕಡಿಯುತ್ತೀಯೆ. ನಾನು ಯತ್ನವಿಲ್ಲದೆ ಕತ್ತು ಹೋದ ಮೇಲೂ 'ಮರೆತೆಯಾ? ವೃತ್ರನು ಸದೇಹನಾಗಿರುವುದಕ್ಕಿಂತ ವಿದೇಹನಾಗಿ ಹೆಚ್ಚು ಬಲಿಷ್ಠನು' ಎಂದು ನಿನ್ನನ್ನು ಹಿಡಿದುಕೊಳ್ಳುತ್ತೇನೆ. ಆದರೂ ದಿಗಿಲಾಗಿ ಎಚ್ಚರವಾಯಿತು" ಎಂದು ನಗುತ್ತಾ "ನಿನಗೆ ನನ್ನನ್ನು ಕೊಲ್ಲುವ ಬುದ್ಧಿಯಿಲ್ಲವಲ್ಲಾ?" ಎಂದು ಹೇಳುತ್ತಾನೆ. ಇಂದ್ರನು, "ನನಗಂತಹ ಬುದ್ಧಿಯೇ? ಚೆನ್ನಾಯಿತು"ಎಂದು ನಗುತ್ತಾ ಒಳಗೊಳಗೆ "ದೇವ, ಈ ಕನಸು ನಿಜವಾಗಲಿ, ಈ ಭೂತವಿಂದು ಸಾಯಲಿ" ಎಂದು ನಾರಾಯಣನಿಗೆ ಕೈಮುಗಿಯುತ್ತಾನೆ.

ವೃತ್ರ ಹಾಗೆಯೇ ಅರೆಗಣ್ಣು ಮುಚ್ಚಿ ನಿದ್ದೆಯ ಜೋಂಪನ್ನು ಅನುಭವಿಸುತ್ತಾ ಒಂದಷ್ಟು ಹೊತ್ತು ಇದ್ದು, ಮೈಮುರಿದು ಎಚ್ಚರ ಮಾಡಿಕೊಂಡು, ಸುತ್ತಲೂ ಬಿದ್ದಿದ್ದ ದಾನವೇಂದ್ರರನ್ನು ತಿರಸ್ಕಾರವಾಗಿ ನೋಡುತ್ತಾ "ನೋಡು, ನಾವು ನಾಳೆಯ ಬೆಳಿಗ್ಗೆಯವರೆಗೆ ಹೀಗೇ ಬಿದ್ದಿರುವೆವೋ ಏನೋ? ಹುಂ" ಎಂದು ಮೇಲಕ್ಕೆದ್ದು "ಇದು ಅಪ್ಪಣೆಯಲ್ಲ ವಿಶ್ವಾಸದ ಪ್ರಾರ್ಥನೆ. ಹಾಗೆಯೇ ಸಮುದ್ರ ತೀರಕ್ಕೆ ಹೋಗಿ ಬರೋಣ, ರಥವನ್ನು ತರಿಸುವೆಯಾ?" ಎಂದನು.

ಇಂದ್ರನು "ಪ್ರಾರ್ಥನೆಯೆನ್ನುವಷ್ಟು ಗೌರವವೇಕೆ? ತರಿಸುವೆನು" ಎಂದು ಹೇಳಿ ಹೋಗಿ ಪ್ರಹರಿಗೆ ಹೇಳಿದನು. ಇನ್ನೊಂದು ಗಳಿಗೆಯೊಳಗಾಗಿ ರಥವು ಬಂತು. ಇಂದ್ರ ವೃತ್ರರಿಬ್ಬರೇ ರಥದಲ್ಲಿ ಕುಳಿತು ಸಮುದ್ರತೀರಕ್ಕೆ ಹೋದರು. ಇಂದ್ರನಿಗೆ ಆಶ್ಚರ್ಯ! ವೃತ್ರನು ಯಾವ ಕವಚವನ್ನೂ ಧರಿಸಿಲ್ಲ. ತಾನೂ ಯಾವ ಕವಚವನ್ನೂ ಧರಿಸಿಲ್ಲ. ಮೈಮೇಲೆ ಅಷ್ಟು ಆಭರಣಗಳಿವೆ. ಅಂದು ವೃತ್ರ ತನ್ನ ಗುರುಕಿರೀಟವನ್ನೂ ಧರಿಸಿಲ್ಲ!

ಸಮುದ್ರ ತೀರದಲ್ಲಿ ಯಾವುದ್ಯಾವುದೋ ಮಾತುಗಳನ್ನು ಆಡುತ್ತ ಇಬ್ಬರೂ ಸಂತೋಷವಾಗಿ ಹೊತ್ತು ಕಳೆಯುತ್ತಿದ್ದಾರೆ. ಇಂದ್ರನ ಮನಸ್ಸು ಮಾತ್ರ ಯಾವುದೋ ಮಹತ್ತರವಾದ ಕಾರ್ಯವನ್ನು ಸಾಧಿಸಬೇಕಾದ ಕಾಲದಲ್ಲಿ ಇರುವಂತೆ ಪೂರ್ಣವಾಗಿ ಜಾಗ್ರತವಾಗಿದೆ. ವೃತ್ರನು ತನ್ನ ದು:ಖವನ್ನು ಹೇಳಿಕೊಳ್ಳುತ್ತಾನೆ. "ನೋಡು ಇಂದ್ರ, ಬೇಕೆಂದರೂ ನಾನು ಯಾರೊಡನೆಯೂ ಯುದ್ಧಮಾಡುವಂತಿಲ್ಲ, ನನಗೆ ಮಲ್ಲಯುದ್ಧ ಮಾಡಬೇಕೆಂಬ ಆಸೆ. ನೀನು ಬೇಕೆಂದರೆ ಪರ್ವತದಷ್ಟು ಆಗಬಲ್ಲೆಯಂತೆ ! ಏಕೆ ನೀನು ನನ್ನ ಪ್ರಮಾಣಕ್ಕೆ ಸರಿಯಾದ ಪ್ರಮಾಣವುಳ್ಳವನಾಗಿ ನನ್ನೊಡನೆ ಒಮ್ಮೆ ಮಲ್ಲಯುದ್ಧ ಮಾಡಬಾರದು?" ಎನ್ನುತ್ತಾನೆ.

ಇಂದ್ರನು "ಅದೇನೂ ಅಂತಹ ಅಸಾಧ್ಯವಲ್ಲ. ಆದರೂ ನಿಜ ಹೇಳಬೇಕೆಂದರೆ ನಿನ್ನೆದುರಿನಲ್ಲಿ ನನ್ನ ಯಾವ ಪ್ರಭಾವವೂ ನಡೆಯುವುದಿಲ್ಲ. ನಿನ್ನನ್ನು ಕಂಡು ನನ್ನ ಸಿದ್ಧಿಗಳೆಲ್ಲ ಹೆದರಿ, ಎಲ್ಲಿಯೋ ಅವಿತುಕೊಂಡಂತಿವೆ" ಎಂದು ನಗುತ್ತಾನೆ.

"ಇಲ್ಲ ಇಂದ್ರ, ನಿನ್ನ ಸಿದ್ಧಿಗಳು ನಿನಗೆ ಹಿಂತಿರುಗಲಿ. ಜೊತೆಗೆ ನಾನೇ ಕೊನೆಗೆ ಸೋಲುತ್ತೇನೆ. ಇನ್ನಾದರೂ ಮನಸ್ಸು ಮಾಡು."

"ನನ್ನ ಸಿದ್ಧಿಗಳೆಲ್ಲ ನನಗೆ ಹಿಂತಿರುಗಿ ಬಂದರೂ ನಾನೂ ನೀನೂ ಸ್ನೇಹಿತರಾಗಿರುವುದಾಗಿ ಪ್ರಮಾಣ ಮಾಡಿಕೊಂಡಿದ್ದೇವೆ. ಮಲ್ಲಯುದ್ಧವು ಏನಿದ್ದರೂ ಪ್ರಾಣವನ್ನು ಪಣವಾಗಿಟ್ಟು ಮಾಡಿದರೆ ಚೆನ್ನ. ನಾನು ನಿನ್ನ ದ್ವೇಷಿಯಲ್ಲ, ಅದರಿಂದ ಸಾಧ್ಯವಿಲ್ಲ."

"ಹಾಗಲ್ಲ ಇಂದ್ರ, ನಾನೇ ಅಪ್ಪಣೆ ಕೊಡುತ್ತೇನೆ. ನಿನಗೆ ವಿಶ್ವಾಸಘಾತುಕತ್ವವು ಬರದಿರಲಿ. ನಾನು ವರವನ್ನು ಕೊಡುತ್ತೇನೆ. ಬಾ, ಒಮ್ಮೆ ಮಲ್ಲಯುದ್ಧ ಮಾಡೋಣ. ಈ ತೋಳುಗಳ ತೀಟೆ ತೀರಲಿ."

"ಆಗಲಿ, ನೋಡೋಣ"

"ನನಗೆ ಬೇಕಾದುದು ಈಗ. ನೀನು ಏನೋ ಸಾವಧಾನವಾಗಿ 'ಆಗಲಿ ನೋಡೋಣ' ಎನ್ನುತ್ತೀಯೆ."

ಈ ವೇಳೆಗೆ ಸಂಜೆಯಾಯಿತು. ವೃತ್ರನು ಹೇಳಿದನು ; "ಇಂದ್ರ, ನೋಡು ಸೂರ್ಯನು ಪಶ್ಚಿಮದಲ್ಲಿ ಮುಳುಗುತ್ತಿದ್ದಾನೆ. ಸಂಜೆಯಾಗುತ್ತಿದೆ. ಈಗ ನನಗೆಷ್ಟು ಬಲ ಬಲ್ಲೆಯಾ? ಬೇಕಾದರೆ, ಸಮುದ್ರವನ್ನೆಲ್ಲ ಅಂಗೈಯಲ್ಲಿ ಹಿಂದಕ್ಕೆ ತಳ್ಳಿಬಿಡುತ್ತೇನೆ. ನೋಡುವೆಯಾ ನನ್ನ ಪೌರುಷವನ್ನು ?"

"ಹೌದು, ನೀನಂತಹ ಬಲಶಾಲಿಯೆಂದೇ ನಾನು ನಿನ್ನ ಮೇಲೆ ಯುದ್ಧ ಮಾಡಲು ಹಿಂತೆಗೆದುದು."

"ನೀನು ಯುದ್ಧ ಮಾಡುವುದಾದರೆ, ಅದನ್ನೆಲ್ಲ ಅತ್ತಿಡುವೆನು, ಆಯಿತು. ನಾನು ಎಷ್ಟು ಹೇಳಿದರೂ ನೀನೊಪ್ಪುವುದಿಲ್ಲ. ಹೋಗಲಿ, ಇಲ್ಲಿ ಬಂಡೆಗಳಂತೆ ತೇಲಿಬರುತ್ತಿರುವ ಈ ನೊರೆಯನ್ನು ನೋಡು. ಇದರಿಂದ ಹೊಡೆದು ಯಾರನ್ನಾದರೂ ಕೊಲ್ಲಲಾದೀತೇ?"

"ನಿನ್ನಂತಹ ಪರಾಕ್ರಮಿಗೆ ಯಾವುದು ತಾನೇ ಸಾಧ್ಯವಿಲ್ಲ? ಹೊಡೆಯಲು ಸಾಧನವಲ್ಲ ಮುಖ್ಯ. ಹೊಡೆಯುವ ಕೈ ಎಷ್ಟು ಬಲವನ್ನು ಆ ಸಾಧನಕ್ಕೆ ಕೊಡಬಲ್ಲದು ಎಂಬುದು ಮುಖ್ಯ."

"ನೀನು ಯಾರನ್ನಾದರೂ ಹಿಂದೆ ನೊರೆಯಿಂದ ಹೊಡೆದು ಕೊಂದಿದ್ದೀಯಾ?"

"ನನಗೆ ಇದನ್ನು ಆಯುಧವಾಗಿ ಉಪಯೋಗಿಸಬಹುದು ಎಂದು ಹೊಳೆದೇ ಇಲ್ಲ. ನನಗೆ ಬೇಕಾದಷ್ಟು ಆಯುಧಗಳಿರುವಾಗ ಈ ನೊರೆಯನ್ನೇಕೆ ಆಯುಧವಾಗಿ ಉಪಯೋಗಿಸಲಿ?"

"ಈಗ ನಾನು ಹೇಳುವೆನು. ಎಲ್ಲಿ ಇದನ್ನು ಎತ್ತಿ ಹೊಡೆ, ನೋಡೋಣ."

"ಯಾರನ್ನು ಹೊಡೆಯಲಿ?"

"ನನ್ನನ್ನೇ ಹೊಡೆ."

ಇಂದ್ರನು ಎಚ್ಚರವಾದನು. ಇನ್ನೂ ಮಹಾವಿಷ್ಣುವಿನ ಅಪ್ಪಣೆಯಿಲ್ಲ. ಅದರಿಂದ ನಕ್ಕನು. " ನೀನು ಮಾಡುವ ಕೆಲಸವನ್ನು ನೋಡು ವೃತ್ರೇಂದ್ರ. ನಾನು ಇದನ್ನು ಎತ್ತಿ ಹೊಡೆದೆನೆಂದಿಟ್ಟುಕೋ. ನೀನು ಯಾವ ಆಯುಧಕ್ಕೂ ಜಗ್ಗದವನು. ಇನ್ನು ಈ ನೊರೆಗೆ ಜಗ್ಗುವೆಯಾ? ನಿನಗೆ ನಾನು ಹೊಡೆದರೂ ನೀನು ಸಾಯುವುದಿಲ್ಲ. ನನಗೆ ಅದರಿಂದ ಅಪಪ್ರಥೆ. ನೀನು ಸತ್ತರೆ, ಏಕಾಂತದಲ್ಲಿ ಮಿತ್ರನನ್ನು ಹೊಡೆದು ಕೊಂದೆಯೆಂದು ನನಗೆ ಕೆಟ್ಟ ಹೆಸರು. ಅದರಿಂದ ಈ ಕಾರ್ಯ ನನಗೆ ಬೇಡ."

"ನಿನ್ನ ಪೌರುಷವನ್ನಾದರೂ ನೋಡೋಣ, ಹೊಡೆ ನಿನಗೆ ಕೆಟ್ಟ ಹೆಸರು ಬರದಿರಲಿ."

ಮತ್ತೆ ಇಂದ್ರನು ಒಳಗೆ ಮಹಾವಿಷ್ಣುವಿನ ಪ್ರಾರ್ಥನೆಯನ್ನು ಮಾಡಿದನು. ನಾರಾಯಣನು ಅಂತರ್ಹೃದಯಲ್ಲಿ ಗೋಚರನಾಗಿ, ಹೊಡೆ, ಸಾಯಲೆಂದೇ ಹೊಡೆ, ಅದರಲ್ಲಿ ನಿನ್ನ ವಜ್ರಾಯುಧವನ್ನು ಅಭಿಮಂತ್ರಿಸಿ ಹೊಡೆ, ಶತ್ರುನಾಶವಾಗಲಿ" ಎಂದನು. ವೃತ್ರನೂ ಮತ್ತೆಯೂ ಬಲವಂತ ಮಾಡಿದನು.

ಇಂದ್ರನು ಯೋಚಿಸುವವನಂತೆ ಹೊರಗೆ ವಿಮುಖನಾಗಿದ್ದು ಒಳಗೆ ಚಿಂತಿಸಿದನು. "ಹೌದು, ಕಾಲವು ಹಗಲಲ್ಲ, ರಾತ್ರಿಯಲ್ಲ, ಸಂಜೆ. ನೊರೆಯು ಒಣಗಿದುದಲ್ಲ, ಹಸಿಯದಲ್ಲ. ಯಾವ ಆಯುಧವೂ ಇಲ್ಲ. ಭೂತವು ಸಾಯಲು ಸಿದ್ಧವಾಗಿದೆ. ಸರಿ" ಎಂದು ವಜ್ರವನ್ನು ಆ ನೊರೆಯಲ್ಲಿ ಆರೋಪಿಸಿ, "ಇದೋ ವೃತ್ರ, ನನ್ನ ಸರ್ವಶಕ್ತಿಯನ್ನೂ ಪ್ರಯೋಗಿಸಿ,ಈ ನೊರೆಯಿಂದ ನಿನ್ನನ್ನು ಹೊಡೆಯುವೆನು. ನನಗೆ ಮಿತ್ರದ್ರೋಹವು ಬರದಿರಲಿ. ಇದರಿಂದ ನೀನು ಸಾಯಬೇಕು" ಎಂದು ಅವನನ್ನು ಹೊಡೆದನು.

ನೊರೆಯು ಅವನ ಮೈಗೆ ತಾಕಿತೋ ಇಲ್ಲವೋ, ವಜ್ರಾಯುಧವು ತನ್ನ ಕೆಲಸವನ್ನು ಮಾಡಿತು. ಆ ಪರ್ವತಾಕಾರದ ದೇಹದಲ್ಲಿ, ಒಂದು ಪರ್ವತಶೃಂಗದ ಮೇಲೆ ನಿಂತಿದ್ದ ಮತ್ತೊಂದು ಗಿರಿಯಂತಿದ್ದ ತಲೆಯು ಥಟ್ಟನೆ ಕತ್ತರಿಸಿಬಿತ್ತು. ಪರ್ವತಾಕಾರದ ಆ ದೇಹವು ಉರುಳಿ ಬಿತ್ತು.

ಇಂದ್ರನು ತಟ್ಟನೆ ತನ್ನ ಶಚೀಪತಿತ್ವವನ್ನೂ ದೇವರಾಜತ್ವವನ್ನು ಧಾರಣ ಮಾಡಿಕೊಂಡು, "ಇದೋ ! ದೇವರಾಜನಾಗಿ, ಶಚೀಪತಿಯಾಗಿ ಅಪ್ಪಣೆಮಾಡುತ್ತಿರುವೆನು. ಈ ಪರ್ವತಾಕಾರದ ಶರೀರವನ್ನು ಹೊತ್ತು ನಿಂತಿದ್ದ ಪ್ರಾಣವು ಈಚೆಗೆ ಬರಲಿ ! ಶರೀರವನ್ನು ರಚಿಸಿರುವ ಪಂಚಭೂತಗಳೆಲ್ಲವೂ ಈ ಕ್ಷಣದಲ್ಲಿ ವಿಘಟಿತವಾಗಿ ಭೂತಗಳೊಡನೆ ಸೇರಿಹೋಗಲಿ...."ಎಂದನು.

ಇನ್ನೂ ಏನು ಹೇಳಬೇಕೆಂದಿದ್ದನೋ, ಅಷ್ಟರಲ್ಲಿ ನೀರಿನಲ್ಲಿ ತೋಯ್ದು ಹೋಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಬಟ್ಟೆಯು ಮುದ್ದೆಯಾಗಿ ಬೀಳುವಂತೆ, ಶುದ್ಧವಾಗಿ ನಿಶ್ಶಕ್ತನಾಗಿ 'ಅಯ್ಯೋ !' ಎಂದು ಬಿದ್ದುಬಿಟ್ಟನು.

ಅಗ್ನಿ, ವಾಯು, ಶಚೀ, ಬೃಹಸ್ಪತಿಗಳು ಕೂಡಲೇ ಅಲ್ಲಿಗೆ ಬಂದು ಇಂದ್ರನನ್ನು ಬೀಳದಂತೆ ಹಿಡಿದುಕೊಂಡರು. ಆತನ ಆಯುಧಗಳೆಲ್ಲವೂ ಸಾಂಗೋಪಾಂಗವಾಗಿ ಬಂದು ಆತನ ಸುತ್ತಲೂ ರಕ್ಷಣೆಗೆ ನಿಂತವು.

ಇತ್ತ, ವೃತ್ರನ ದೇಹದಲ್ಲಿದ್ದ ಪ್ರಾಣವಾಯುವು ಹಾರಿಹೋಯಿತು. ಸ್ಥೂಲ ಭೂತಗಳೆಲ್ಲವೂ ಒಂದೇ ರೆಪ್ಪೆಮುಚ್ಚಿನೊಳಗೆ ಆ ದೇಹವನ್ನು ಬಿಟ್ಟು ತಮ್ಮ ತಮ್ಮ ಮೂಲಸ್ಥಾನದಲ್ಲಿ ಐಕ್ಯವಾದುವು. ವೃತ್ರನ ಅಂತ:ಕರಣವು ಮಾತ್ರ ಅಲ್ಲಿಯೇ ಏನು ಮಾಡಬೇಕೋ ತಿಳಿಯದೇ ಒದ್ದಾಡುತ್ತಿತ್ತು.


## ಹೇಮಪುರ ಪತ್ರಿಕೆಯ ಚಂದಾವಿವರ

* ಬಿಡಿ ಪತ್ರಿಕೆ – ರೂ.20/– * ವಾರ್ಷಿಕ ಚಂದಾ – ರೂ.200/– * ಪಂಚವಾರ್ಷಿಕ ಚಂದಾ – ರೂ.1000/–

* ಆಜೀವ ಸದಸ್ಯತ್ವ – ರೂ.5000/–

**ವಿವರಗಳಿಗೆ ಸಂಪರ್ಕಿಸಿ :** ಸಂಪಾದಕರು, ಹೇಮಪುರ ಮಾಸಪತ್ರಿಕೆ.

ಫೋನ್ ನಂ: 08387–268545, ಮೊ.: 9449109299

ಬದುಕಲೊಂದಿಷ್ಟು ಆಪ್ತ ಮಾತುಗಳು

# ತನ್ನನ್ನು ತಾನರಿಯುವುದೇ ಲೇಸು

–ಲೇ. : ಬಿ. ಎನ್. ರಮೇಶ ಬೊಂಗಾಳೆ.

ಮನುಷ್ಯನಿಗೆ ಎಷ್ಟು ವಯಸ್ಸಾಗಿದ್ದರೇನು ಬಂತು, ತನ್ನನ್ನು ತಾನು ಗುರುತಿಸಿಕೊಂಡ ಅಥವಾ ಅರ್ಥಮಾಡಿಕೊಂಡ ದಿನದಿಂದಲೇ ಆತನ ಜೀವನ ಪ್ರಾರಂಭವಾಗುತ್ತದೆ. ಅಂತಹ ದೊಡ್ಡ ಘಟನೆ ಘಟಿಸಿದಾಗಲೇ ಸಂಪೂರ್ಣವಾದ ಮತ್ತು ಅರ್ಥಪೂರ್ಣವಾದ ಬದುಕಿನ ಅಂಕುರವಾಗುತ್ತದೆ. ಆಗ ಮಾತ್ರವೇ ಆತ ನಿಜವಾದ ಬದುಕನ್ನು ಬದುಕುತ್ತಿದ್ದಾನೆಂದು ಹೇಳಬಹುದು.

ಕೋಟ್ಯಾಂತರ ಜನ ಹುಟ್ಟುತ್ತಾರೆ ಹಾಗೂ ನಿಜವಾದ ಅರ್ಥದಲ್ಲಿ ತಮ್ಮನ್ನು ತಾವು ಅರ್ಥೈಸಿಕೊಳ್ಳದೆಯೇ ತಮ್ಮ ದಿನಗಳನ್ನು ವ್ಯರ್ಥ ಕಳೆದು ಪಯಣ ಬೆಳೆಸುತ್ತಾರೆ ಎನ್ನುವುದು ಅತ್ಯಂತ ವಿಚಿತ್ರವಾದ, ನೋವಿನ ಸಂಗತಿಯೆನ್ನಬಹುದು. ತಮ್ಮ ತನದ ಪರಿಚಯ ಸ್ವತಃ ತಮಗೆ ಇರದಿರುವುದೇ ಎಲ್ಲರ ಸಮಸ್ಯೆಯಾಗಿದೆ. ನಮ್ಮ ವ್ಯಕ್ತಿತ್ವದ ಪೂರ್ಣ ವಿಕಸನವಾಗಬೇಕಾದರೆ ನಮ್ಮ ಪರಿಚಯ ನಮಗಿರಬೇಕಾದುದು ಅತ್ಯಂತ ಅಗತ್ಯವಾಗಿದೆ.

ಶತಮಾನಗಳ ಹಿಂದೆ ಸಾಕ್ರೆಟಿಸನು ಪುರಾತನವಾದ ಯುನಾನಿ ಮಂದಿರವೊಂದರ ಭಿತ್ತಿಯ ಮೇಲೆ ಬರೆದಿದ್ದನಂತೆ– "ಸ್ವಯಂ ಪರಿಚಿತರಾಗಿರಿ" ಯಾವುದೇ ಕ್ಷೇತ್ರದಲ್ಲಿ ಮತ್ತು ಸ್ವ–ಬದುಕಿನ ಹಾದಿಯಲ್ಲಿ ಯಾವುದೇ ಗಳಿಕೆಯು ಸ್ವಂತ ಜ್ಞಾನದ ಮೇಲೆ ಅವಲಂಭಿತವಾಗಿರುತ್ತದೆಯೆಂಬುದು ಸಾಕ್ರೆಟಿಸನಿಗೆ ತಿಳಿದಿತ್ತು. ಸಾಮಾನ್ಯ ಮಂದಿಗೂ ದರ್ಶನದ ಪಿತಾಮಹನಾದ ಸಾಕ್ರೆಟಿಸನ ಈ ಮಾರ್ಗದರ್ಶನದ ಅಗತ್ಯವಿದೆ. ಏಕೆಂದರೆ ನಮ್ಮಲ್ಲಿ ಹೆಚ್ಚಿನ ಮಂದಿಗೆ ತಮ್ಮಲ್ಲಿರುವ ಶಕ್ತಿ–ಸಾಮರ್ಥ್ಯದ ಬಗ್ಗೆಯೇ ಸಾಕಷ್ಟು ತಿಳಿದಿರುವುದಿಲ್ಲ. ನಮ್ಮ ಮನಸ್ಸಿನಲ್ಲಿ ನಮಗೆ ನಾವು ಕಡಿಮೆಯೆಂಬಂತೆ ಚಿತ್ರಿಸಿಕೊಳ್ಳುತ್ತೇವೆ. ವಾಸ್ತವದಲ್ಲಿ ನಮ್ಮ ಮೇಲೆ ನಾವೇ ವಿಶ್ವಾಸವಿರಿಸಿರುವುದಿಲ್ಲ. ಆ ಕಾರಣದಿಂದ ನಾವು ಏನೊಂದು ಶಕ್ತಿಶಾಲಿಗಳೂ, ಪ್ರಭಾವಶಾಲಿಗಳೂ ಹಾಗೂ ಜಯಶಾಲಿಗಳಾಗಬಹುದಿತ್ತೋ ಹಾಗಾದರೆ ದುರ್ಬಲರೂ ಪ್ರಭಾವಹೀನರೂ ಮತ್ತು ಹೇಡಿಗಳಾಗಿ ಬಿಡುತ್ತೇವೆ. ತನ್ನನ್ನು ತಾನು ಅರಿಯುವಂತಹ ದಿನವೇ ಪ್ರತಿ ವ್ಯಕ್ತಿಯ ಪಾಲಿಗೆ ಸುದಿನವಾಗಿರುತ್ತದೆ. ಕೆಲವರ ಬದುಕಿನಲ್ಲಿ ಅದು ಬಹುಬೇಗನೆ ಸಂಭವಿಸುತ್ತದೆ. ಅಂತಹವರು ನಿಜಕ್ಕೂ ಅದೃಷ್ಟಶಾಲಿಗಳು. ಇನ್ನು ಕೆಲವರ ಬದುಕಿನಲ್ಲಿ ಅದು ವಿಳಂಬವಾಗಿ ಸಂಭವಿಸುತ್ತದೆ. ಯಾವಾಗ ಸಂಭವಿಸುವುದೋ ಆಗ ಹಿಂದಿನ ನಿಷ್ಕ್ರಿಯ ವರ್ಷಗಳ ನೀರಸತೆಯ ನಂತರ ಅದು ಸೂರ್ಯಕಿರಣಗಳಂತೆ ಹೊಳೆಯಲಾರಂಭಿಸುತ್ತದೆ.

# ಗಾಂಧಿ ಜಯಂತಿ : 02–10–2018

ಶ್ರೀ ಮಾರುತಿ ರೆಸಿಡೆನ್ಸಿಯಲ್ ಸ್ಕೂಲ್ ಬಂಗಾರಮಕ್ಕಿಯಲ್ಲಿ ದಿನಾಂಕ 02/10/2018 ರಂದು ಗಾಂಧಿ ಜಯಂತಿಯ ಅಂಗವಾಗಿ **"ಶ್ರಮದಾನ"** ಕಾರ್ಯಕ್ರಮವನ್ನು ನಡೆಸಲಾಯಿತು. 1 ನೇ ತರಗತಿಯಿಂದ 10 ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ತಮ್ಮ ತಮ್ಮ ವರ್ಗ ಶಿಕ್ಷಕರ ನೇತೃತ್ವದಲ್ಲಿ **"ಶ್ರಮದಾನ"** ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಇದರ ಮುಂದಾಳತ್ವವನ್ನು ನಮ್ಮ ಶಾಲೆಯ ಆಡಳಿತ ನಿರ್ದೇಶಕರಾದ ಶ್ರೀ ಜಿ.ಟಿ.ಹೆಗಡೆಯವರು, ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ ಬಿ.ಕೆ ರವರು ಹಾಗೂ ದೈಹಿಕ ಶಿಕ್ಷಕರಾದ ಶ್ರೀ ಜಯಂತ ಗೌಡ ರವರು ವಹಿಸಿದ್ದು, ಇವರೆಲ್ಲರ ಮಾರ್ಗದರ್ಶನದಲ್ಲಿ ಸುಮಾರು ಒಂದು ತಾಸು ಸ್ವಚ್ಛತಾ ಕಾರ್ಯಕ್ರಮ ನಡೆಸಿದರು.

ಶಿಕ್ಷಕರು ಹಾಗೂ ವಿದ್ಯಾರ್ಥಿಗಳೆಲ್ಲರೂ ಸೇರಿ ಶಾಲಾ ಆವರಣ, ದೇವಸ್ಥಾನದ ಎದರು ಭಾಗ, ರಥ ಬೀದಿ ಹಾಗೂ ರಸ್ತೆಯ ಅಕ್ಕ–ಪಕ್ಕವನ್ನು ಸ್ವಚ್ಛಗೊಳಿಸಿದರು.

**ಸಭಾಕಾರ್ಯಕ್ರಮ:–** ಸಭಾಕಾರ್ಯಕ್ರಮದಲ್ಲಿ ಗಣ್ಯರು, ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪ್ರತಿನಿಧಿಗಳು ಮಹಾತ್ಮಾ ಗಾಂದಿಜೀ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀಯವರ ಭಾವಚಿತ್ರಕ್ಕೆ ಪುಷ್ಪವನ್ನು ಸಮರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ತದನಂತರ ವಿದ್ಯಾರ್ಥಿಗಳು ಗಾಂಧಿ ಹಾಗೂ ಲಾಲ್ ಬಹದ್ದೂರ ಬಗ್ಗೆ ಕನ್ನಡ, ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳಲ್ಲಿ ಭಾಷಣ ಮಾಡಿದರು. ದೇಶಭಕ್ತಿಗೀತೆಗಳನ್ನು ಹಾಡಿದರು. ಅಲ್ಲದೇ ವಿದ್ಯಾರ್ಥಿಗಳು ಗಾಂಧಿಜೀಯವರ ಅಚ್ಚು–ಮೆಚ್ಚಿನ ಭಜನೆಯಾದ **"ರಘುಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ. . . . . ."** ಈ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು.

ಆಡಳಿತ ನಿರ್ದೇಶಕರಾದ ಶ್ರೀಯುತ ಜಿ. ಟಿ. ಹೆಗಡೆ ರವರು ವಿದ್ಯಾರ್ಥಿಗಳಿಗೆ ಗಾಂಧಿಜೀಯವರ ಆದರ್ಶ, ಮೌಲ್ಯ ಹಾಗೂ ತತ್ವಗಳನ್ನು ತಿಳಿಸಿದರು. ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ ಬಿ.ಕೆ ರವರು ಗಾಂಧಿಜಯಂತಿಯು ಕೇವಲ ಆಚರಣೆಯಾಗದೆ, ಅವರ ತತ್ವಗಳನ್ನು ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಾಗಬೇಕು ಎಂದು ಹೇಳಿದರು. ವಿದ್ಯಾರ್ಥಿನಿಯಾದ ಕುಮಾರಿ ಮೈಮುನಾ ಕಾಜಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದಳು. ವಿದ್ಯಾರ್ಥಿಯಾದ ಕುಮಾರ ಸಂದೇಶ ನಾಯ್ಕ ಸರ್ವರನ್ನು ಹೃದಯಪೂರ್ವಕವಾಗಿ ವಂದಿಸಿದನು. ಹೀಗೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ಧರೆಗಿಳಿದ ದಿವ್ಯತೇಜ

# ಸಹ್ಯಾದ್ರಿಯ ತಪ್ಪಲಲ್ಲಿ

–ಲೇ. : ಲ. ನ. ಶಾಸ್ತ್ರೀ.

ಶ್ರೀ ಶಂಕರರು ಶ್ರೀಶೈಲದಿಂದ ಹೊರಟು ಪಶ್ಚಿಮ ಘಟ್ಟಗಳ ಸಾಲಿನಲ್ಲಿಯೇ ಬಿಜಮಾಡುತ್ತ ಗೋಕರ್ಣ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ಶ್ರೀ ಗಣಪತಿಯನ್ನೂ ಶ್ರೀ ಮಹಾಬಲೇಶ್ವರನನ್ನೂ ಪೂಜಿಸಿದರು, ಅಲ್ಲಿದ್ದ ಶೈವ ವಿದ್ವಾಂಸರು ಪಾಶುಪತಮತವೇ ಶ್ರೇಷ್ಠವೆಂದೂ ಉಳಿದ ಮತಗಳೆಲ್ಲವೂ ವರ್ಜ್ಯವೆಂದೂ ವಾದಿಸಲು ಆಚಾರ್ಯರು ಪಾಶುಪತ ಮತವನ್ನು ಕೂಲಂಕುಷವಾಗಿ ವಿಮರ್ಶಿಸಿದರು. "ಪತ್ಯುರಸಮಂಜಸ್ಯಾತ್" ಎಂಬ ಶಾರೀರಿಕ ಸೂತ್ರಗಳ ತರ್ಕಪಾದದ ಸೂತ್ರವನ್ನು ಆಧರಿಸಿಕೊಂಡು ಪಾಶುಪತ ಮತವನ್ನು ವಿಶ್ಲೇಷಿಸಿದರು. ಅದನ್ನು ವೇದಬಾಹ್ಯವಾದುದೆಂದು ಹೇಳಿ ಈಶ್ವರನು ಪ್ರಾಣಿಗಳಲ್ಲಿ ಹೀನ, ಮಧ್ಯಮ ಮತ್ತು ಉತ್ತಮ ಎಂಬ ಭೇದಗಳನ್ನು ವಿಧಿಸಿದರೆ, ಆತನಿಗೆ ರಾಗದ್ವೇಷಾದಿಗಳು ಪ್ರಾಪ್ತವಾಗಿ, ಆತನು ಅನೀಶ್ವರನಾಗುತ್ತಾನೆ ಎಂದರು.

ಕಾರ್ಯ, ಕಾರಣ, ಯೋಗ, ವಿಧಿ ಮತ್ತು ದುಃಖಾಂತ ಎಂಬ ಪಂಚ ತತ್ತ್ವಗಳನ್ನು ವಿಚಾರಕ್ಕೆ ತೆಗೆದುಕೊಂಡರು. ಕಾರ್ಯವೆಂದರೆ ಸ್ವಾತಂತ್ರ್ಯ ಶಕ್ತಿಯಿಲ್ಲದ ಜೀವ ಮತ್ತು ಜಡವಸ್ತುಗಳು. ಕಾರಣವೆಂದರೆ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರಗಳನ್ನು ಮಾಡತಕ್ಕ ಪರಮೇಶ್ವರ. ಈ ಪರಮೇಶ್ವರನು ಜ್ಞಾನ ಮತ್ತು ಪ್ರಭುಶಕ್ತಿಯುಕ್ತನಾದ್ದರಿಂದ ಪತಿ ಎನಿಸಿಕೊಳ್ಳುತ್ತಾನೆ. ಈಶ್ವರನು ಈ ಸೃಷ್ಟಿಗೆ ನಿಮಿತ್ತ ಕಾರಣನೇ ವಿನಾ ಉಪಾದಾನ ಕಾರಣನಲ್ಲ. ಚಿತ್ತದ ಮೂಲಕ ಉಂಟಾಗುವ ಈಶ್ವರ ಮತ್ತು ಜೀವಾತ್ಮರ ಸಂಬಂಧವೇ ಯೋಗ. ಪರಮೇಶ್ವರನನ್ನು ಪಡೆಯುವುದೇ ವಿಧಿ. ಪ್ರತಿಯೊಬ್ಬ ಜೀವಿಯೂ ಮಿಥ್ಯಾಜ್ಞಾನ, ಅಧರ್ಮ, ಶಕ್ತಿ ಹೇಯಚ್ಯುತಿ ಮತ್ತು ಪಶುತ್ವಗಳೆಂಬ ಮಲಗಳಿಂದ ಕೂಡಿರುತ್ತಾನೆ. ಈ 'ಮಲತ್ವ' ನಿವಾರಣೆಯೇ ದುಃಖಾಂತ. ಇವುಗಳನ್ನೆಲ್ಲಾ ಆಚಾರ್ಯರು ವಿಮರ್ಶಿಸಿದರು. ಇವು ವೇದಾಂತ ಧರ್ಮಕ್ಕೆ ಅನುಗುಣವಾಗಿಲ್ಲವೆಂದು ಸ್ಪಷ್ಟಪಡಿಸಿದರು. ವೈದಿಕ ಧರ್ಮದಲ್ಲಿ ಅಂತರ್ಗತವಾದ ವೈದಿಕ ಪೂಜಾ ವಿಧಾನವನ್ನು ವಿವರಿಸಿದರು. ಶುದ್ಧಬುದ್ಧ ಮುಕ್ತವಾದ ಪರಬ್ರಹ್ಮವೇ ಮಾಯೆಯ ಸಂಪರ್ಕದಿಂದ ಶಿವ, ವಿಷ್ಣು, ಗಣಪತಿ, ಸೂರ್ಯ, ದೇವೀ ಇತ್ಯಾದಿ ರೂಪಗಳಾಗಿ ಗೋಚರಿಸುವುದೆಂದೂ ಈ ದೇವಮೂರ್ತಿಗಳಲ್ಲಿ ಭೇದ ಮಾಡಬಾರದೆಂದೂ ವಿವರಿಸಿದರು. ತ್ರಿಶೂಲ, ಡಮರು ಇತ್ಯಾದಿ ಚಿಹ್ನೆಗಳನ್ನು ಶರೀರದ ಮೇಲೆ ಮುದ್ರೆ ಒತ್ತಿಕೊಳ್ಳುವುದು ಅಸಿಂಧುವೆಂದೂ ಸಾರಿದರು. ಅದರಿಂದ ಮೋಕ್ಷ ದೊರಕದೆಂದೂ ಸ್ಪಷ್ಟಪಡಿಸಿದರು.

ಗುರುದೇವರು ಗೋಕರ್ಣದಿಂದ ಹೊರಟು ಸಹ್ಯಾದ್ರಿ ಪರ್ವತ ಶ್ರೇಣಿಯ ತಪ್ಪಲಲ್ಲಿ ಸಂಚರಿಸುತ್ತಾ, ಹಲವಾರು ಗ್ರಾಮ ಅಗ್ರಹಾರಗಳ ಮೂಲಕ ಹರಿಶಂಕರ [ಶಂಕರ ನಾರಾಯಣ] ಕ್ಷೇತ್ರಕ್ಕೆ ದಯಮಾಡಿಸಿದರು.

ಆಚಾರ್ಯರು ಅಲ್ಲಿಗೆ ಆಗಮಿಸಿದಾಗ, ಅಲ್ಲಿದ್ದ ಜನಗಳು ಶಿವ ವಿಷ್ಣುಗಳಲ್ಲಿ ಭೇದವನ್ನು ಎಣಿಸಿ, ಕೆಲವರು ಶಿವನೇ ಹೆಚ್ಚೆಂದೂ, ಮತ್ತೆ ಕೆಲವರು ವಿಷ್ಣುವೇ ಹೆಚ್ಚೆಂದೂ ವಾದಿಸುತ್ತಿದ್ದುದನ್ನು ಕಂಡರು. ವಿದ್ವಾಂಸರಾದವರೇ ಹೀಗೆ ದೇವ ದೇವತೆಗಳಲ್ಲಿ ಭೇದವನ್ನು ತೋರಿಸಿ ಕಾದಾಡುತ್ತಿದ್ದಾಗ ಸಾಮಾನ್ಯ ಪ್ರಜೆಗಳ ಪಾಡೇನು? ಹರಿ ಸರ್ವೋತ್ತಮನೆಂದೂ, ಶಿವ ಸರ್ವೋತ್ತಮನೆಂದೂ ಕಾದಾಡುತ್ತಿದ್ದ ಪಂಡಿತರನ್ನು ಆಚಾರ್ಯರು ಸಮಾಧಾನಪಡಿಸಿ ಶಿವ, ವಿಷ್ಣು, ಹರ, ಹರಿ ಇತ್ಯಾದಿ ನಾಮಗಳು ಒಬ್ಬನೇ ಆದ ಪರಮಾತ್ಮನ ನಾಮಗಳೆಂದೂ ಇವುಗಳಲ್ಲಿ ಭೇದವೆಣಿಸಿದರೆ ಪರಮಾತ್ಮನಿಗೇ ಅಪಚಾರವೆಸಗಿದಂತೆಂದೂ ಸ್ಪಷ್ಟವಾಗಿ ಹೇಳಿದರು.

"ನಿಮ್ಮಲ್ಲಿ ಯಾರ್ಯಾರು ವಿಷ್ಣುವನ್ನು ದರ್ಶನ ಮಾಡಿದ್ದೀರಿ? ಯಾರ್ಯಾರು ಶಿವನನ್ನು ದರ್ಶಿಸಿದ್ದೀರಿ?" ಎಂದು ಆಚಾರ್ಯರು ಪಂಡಿತರನ್ನು ಪ್ರಶ್ನಿಸಿದರು. ಯಾರೂ ಉತ್ತರ ಕೊಡಲಿಲ್ಲ! ಎಲ್ಲಾ ತಲೆ ತಗ್ಗಿಸಿದರು.

"ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎನ್ನುತ್ತದೆ ವೇದ. ಇರುವುದು ಪರಬ್ರಹ್ಮ ವಸ್ತುವೊಂದೇ. ಅದೇ ಮಾಯೆಯ ಸಂಪರ್ಕದಿಂದ ಈಶ್ವರನೆನಿಸಿಕೊಂಡು ಲೋಕಾನುಗ್ರಹಕ್ಕಾಗಿ ನಾನಾ ರೂಪ ನಾಮಗಳಿಂದ ಗೋಚರಿಸುತ್ತದೆ. ಧರ್ಮಮಾರ್ಗವು ಅತ್ಯಂತ ವಿಶಾಲವಾದದು. ಆ ಮಾರ್ಗದಲ್ಲಿ ಸಾಗಲು ಎಲ್ಲ ಮಾನವ ಕೋಟಿಗೂ ಅವಕಾಶವಿದೆ. ಆ ಪರಮಾತ್ಮನು ನಾಮರೂಪಾದಿಗಳಿಂದಲೇ ಇದ್ದಾನೆ ಎಂದುಕೊಂಡರೂ, ನಾವು ಆತನ ದಿವ್ಯವಾದ ಪಾದಾರವಿಂದಗಳಿಂದ ನೂರಾರು ಸಾವಿರಾರು ಗಾವುದ ದೂರವಿದ್ದೇವೆ. ಈಗ ನಾವು ಮಾಡಬೇಕಾದುದು ಅವನ ಪಾದಪೀಠವಿರುವತ್ತಣ ದಿಕ್ಕಿಗೆ ಪಥಚಲನ; ಯಾತ್ರೆ ನಡೆಸಬೇಕು.

"ನಾವು ಎಲ್ಲರೂ ಆತನ ಪಾದ ಸನ್ನಿಧಿಯತ್ತ ಸಾಗಬೇಕಾದುದು ಈಗ ಮುಖ್ಯ. ಆ ದಾರಿ ವಿಶಾಲವಾಗಿದ್ದು. ಎಲ್ಲರಿಗೂ ತೆರೆದಿದೆ. ಪರಮಾತ್ಮನ ಪಾದಸನ್ನಿಧಿಯನ್ನು ಕುರಿತು ಸಾಗೋಣ. ನಮ್ಮ ನಮ್ಮಲ್ಲಿ ದ್ವೇಷ ವೈಷಮ್ಯ ಬೇಡ. ಭೇದ, ಅನುಮಾನ ಬೇಡ. ದಾರಿ ಎಲ್ಲರಿಗೂ ತೆರೆದಿದೆ. ಅವರವರ ದಾರಿ ಅವರವರಿಗೆ ಶ್ರೇಷ್ಠ. ನಾವು ಅನ್ಯೋನ್ಯರಾಗಿ ಸಾಗೋಣ. ಆತನ ಪಾದಸನ್ನಿಧಿಯನ್ನು ಸೇರೋಣ. ಆಗ ತಲೆಯೆತ್ತಿ ಆತನ ದಿವ್ಯ ಸುಂದರ ರೂಪದರ್ಶನ ಮಾಡೋಣ. ಆತನು ಶಂಖಚಕ್ರಧಾರಿಯಾಗಿದ್ದರೆ ಶ್ರೀಮನ್ನಾರಾಯಣ ಎನ್ನೋಣ, ಶೂಲ ಡಮರುಧಾರಿಯಾಗಿದ್ದರೆ ಶ್ರೀ ಪರಮೇಶ್ವರನೆನ್ನೋಣ. ಆತನ ಅನುಗ್ರಹಕ್ಕೆ ಪ್ರಾರ್ಥನೆ ಮಾಡೋಣ. ಈಗೇಕೆ ಕಾದಾಟ? ವೈಷಮ್ಯ?" ಎಂದು ಬೋಧಿಸಿದರು ಆಚಾರ್ಯರು. ಹರಿ ಶಂಕರದಲ್ಲಿ ಇದ್ದ ದೇವಮೂರ್ತಿಯನ್ನು ಸಂಬೋಧಿಸಿ ಸುಂದರವಾದ ಸ್ತೋತ್ರವೊಂದನ್ನು ರಚಿಸಿದರು. ಆ ಸ್ತೋತ್ರವು ಶಿವಪರವಾಗಿಯೂ, ವಿಷ್ಣುಪರವಾಗಿಯೂ ಇದ್ದು ಹರಹರಿ ಭಕ್ತರಿಬ್ಬರಿಗೂ ಪ್ರಿಯವಾಯಿತು.

ಆಚಾರ್ಯರು ಹರಿಶಂಕರದಿಂದ ಶ್ರೀ ಮೂಕಾಂಬಿಕಾ ಕ್ಷೇತ್ರಕ್ಕೆ ಆಗಮಿಸಿದರು. ಅಲ್ಲಿ ಜಗಜ್ಜನನಿಯ ಪೂಜೆಯು ತಾಮಸ ರೀತಿಯಲ್ಲಿ ನಡೆಯುತ್ತಿತ್ತು. ತಾಂತ್ರಿಕರ ಪ್ರಭಾವ ಅಲ್ಲೆಲ್ಲಾ ವ್ಯಾಪಿಸಿತ್ತು. ವೀರಮಾರ್ಗವಾದ ವಾಮ ಪೂಜಾ ಮಾರ್ಗವು, ಅಧಃಪತನವನ್ನು ಹೊಂದಿ ಮದ್ಯ, ಮಾಂಸ, ಮೀನು, ಮೈಥುನ, ಮುದ್ರೆಗಳು ತಮ್ಮ ತಾತ್ವಿಕ ಅರ್ಥವನ್ನು ಕಳೆದುಕೊಂಡಿದ್ದವು. ಪಶುಬಲಿ, ಮದ್ಯ ಮತ್ತು ಮಾಂಸಗಳ ಸೇವನೆ, ಸ್ವೇಚ್ಛಾಚಾರವೇ ಅದರಲ್ಲಿ ತುಂಬಿಹೋಗಿತ್ತು. ಆಚಾರ್ಯರು ಅಲ್ಲಿಗೆ ಬಂದಾಗ, ಈ ಅನೈತಿಕ ವಾತಾವರಣ ಅವರನ್ನು ಸ್ವಾಗತಿಸಿತು.

ಆಚಾರ್ಯರು ತಾಂತ್ರಿಕರನ್ನು ಯುಕ್ತಿ ಮತ್ತು ಶಾಸ್ತ್ರಗಳ ಆಧಾರದಿಂದ ಖಂಡನೆ ಮಾಡಿದರು. "ಪರಾತ್ಪರ ವಸ್ತುವಾದ ಪರಮಾತ್ಮನನ್ನು ತಾಯಿ, ಲೋಕ ಜನನಿ ಎಂದು ಭಾವಿಸಿ ಮಾಡುವ ಪೂಜೆಯಲ್ಲಿ ಪಶುಬಲಿಗೆ ಅವಕಾಶವೆಲ್ಲಿ? ಮದ್ಯಕ್ಕೆ ಸ್ಥಾನವೆಲ್ಲಿ? ಪಂಚಮಕಾರಗಳಿಗೆ ಆಧ್ಯಾತ್ಮಿಕವಾದ ಅರ್ಥವಿದೆ. ಅಂತರ್ಯಾಗದೊಡನೆ ಅವುಗಳ ಸಂಬಂಧವಿದೆಯೇ ಹೊರತು ಬಾಹ್ಯ ಪೂಜೆಯ ಜೊತೆಯಲ್ಲಲ್ಲ. ಪಂಚಮಕಾರಗಳು ನಮ್ಮ ಶರೀರದೊಳಗೆ ಇರುವ ತತ್ತ್ವಗಳ ಸಾಕ್ಷಾತ್ ಪ್ರತೀಕವಾಗಿವೆ. ಇವುಗಳ ಅಭ್ಯಾಸವೇ ತಂತ್ರ ಶಾಸ್ತ್ರದ ಗುರಿ" ಎಂದು ಅವರಿಗೆ ಬೋಧಿಸಿದರು.

"ಮಿತ್ರರೇ ಪಂಚಮಕಾರ ಪೂಜೆಯೆಂದರೆ ನೀವು ತಿಳಿದಿರುವಂತೆ ಮಧ್ಯ, ಮಾಂಸ, ಮೀನು, ಮುದ್ರಾ, ಮೈಥುನಗಳಲ್ಲ. ಇವು ಅಧಾರ್ಮಿಕ ಆಚಾರಗಳು. "ಈ ಸೃಷ್ಟಿಗೆ ಕಾರಣವಾದ ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಇರುವ ಒಂದು ಸಾಧನ ಮಾರ್ಗ ಪಂಚಮಕಾರ ಪೂಜೆ.

"ಈಗ ದುಷ್ಟ ರೂಪದಲ್ಲಿ ವ್ಯಕ್ತವಾಗುತ್ತಿರುವ ಪಂಚಭೂತಾತ್ಮಕವಾದ ಜಗತ್ತಿನಲ್ಲಿ ಪೃಥ್ವಿ ತತ್ತ್ವವೇ ಮುದ್ರಾ ಎನಿಸಿಕೊಳ್ಳುತ್ತದೆ. ಜಲ ತತ್ತ್ವವು ಮೀನಾಗುತ್ತದೆ. ವಾಯು ತತ್ತ್ವವೇ ಮಾಂಸ. ತೇಜೋ ತತ್ತ್ವವು ಮದ್ಯವೆನಿಸಿಕೊಳ್ಳುತ್ತದೆ. ಆಕಾಶತತ್ತ್ವವೇ ಮೈಥುನ, ಜಗತ್ಕಾರಣವಾದ ಬ್ರಹ್ಮತತ್ತ್ವವನ್ನು, ಶಕ್ತಿತತ್ತ್ವವನ್ನು ಈ ಸಗುಣಾರಾಧನೆಯಿಂದ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ದೇವೀ ಭಾವನೆಯ ಮೂಲಕ.

"ಈ ಪಂಚಮಕಾರಗಳಿಗೆ ಯೋಗ ಪರವಾದ ಅರ್ಥವೂ ಇದೆ. ಮದ್ಯವೆಂದರೆ ಮಸ್ತಕದಲ್ಲಿರುವ ಚಂದ್ರಮಂಡಲದಿಂದ ಸ್ರವಿಸುವ ಅಮೃತಧಾರೆ. ಇದರ ಪಾನದಿಂದ ಇಂದ್ರಿಯ ಪ್ರವೃತ್ತಿಯು ಅಂತರ್ಮುಖವಾಗುತ್ತದೆ. ಸಾಧಕರನ್ನು ಪುಣ್ಯ ಪಾಪಕಾರ್ಯಗಳಲ್ಲಿ ತೊಡಗಿಸುವ ವಿಷಯ ವಾಸನೆಗಳನ್ನು ಬಲಿಹಾಕುವುದೇ ಮಾಂಸ ನಿವೇದನೆ.  ಇದು ಇಂದ್ರಿಯ ಸಂಯಮಕ್ಕೆ ಸಹಕಾರಿಯಾಗಿ ಕುಂಡಲಿನೀ ಶಕ್ತಿ ಜಾಗ್ರತಗೊಳಿಸಲು ಕಾರಣವಾಗುತ್ತದೆ.

ಇಡೀ ಪಿಂಗಳಾನಾಡಿಗಳಲ್ಲಿ ಸಂಚಾರ ಮಾಡುತ್ತಿರುವ ವಾಯುವೇ ಮೀನು. ಅದನ್ನು ಸಂಕಲನಗೊಳಿಸಿ ಸುಷುಮ್ನಾನುಡಿಯಲ್ಲಿ ಪ್ರವೇಶಗೊಳಿಸುವುದೇ, ಮೀನಿನ ಸೇವನೆ.

ಸತ್ಸಂಗ, ಸಜ್ಜನ, ಸದ್ವಿಚಾರಗಳ ಸಂಗವೇ ಮುದ್ರಾ, ಇದರಿಂದ ಕುಸಂಗ ನಾಶ. ಬಂಧನದಿಂದ ಮುಕ್ತಿ, ಜ್ಞಾನದ ಉದಯ. ಮೈಥುನವೆಂದರೆ ಮೂಲಾಧಾರಚಕ್ರದಲ್ಲಿ ಉಪಸ್ಥಿತವಾಗಿರುವ ಕುಂಡಲಿನೀ ಶಕ್ತಿಯು ಜಾಗ್ರತಗೊಂಡು ಷಟ್ ಚಕ್ರಗಳನ್ನು ಮೂಲಾಧಾರ ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಭೇದಿಸಿಕೊಂಡು, ಸಹಸ್ರಾರದಲ್ಲಿರುವ ಶಿವತತ್ತ್ವದಲ್ಲಿ ಏಕವಾಗುವುದೇ ಮೈಥುನ. ಇದನ್ನು ಅರಿತು ನೀವು ಸಾತ್ವಿಕ ಮಾರ್ಗದಲ್ಲಿ ದೇವಿಯನ್ನು ಆರಾಧಿಸಬೇಕು.

"ಪರಮಾತ್ಮ ಸ್ವರೂಪಿಣಿಯೇ ಆದ ಜಗನ್ಮಾತೆಯನ್ನು ಪರಮತತ್ತ್ವವನ್ನು ಅರಿಯಬೇಕಾದರೆ, ಗುರುವಿನಿಂದ ಉಪದೇಶವನ್ನು ಪಡೆದು, ಸಮಾಧಿಯಲ್ಲಿ ಅದನ್ನು ಸಾಕ್ಷಾತ್ಕರಿಸಿಕೊಂಡು, ಅದ್ವೈತಾನುಭವವನ್ನು ಪಡೆಯಬೇಕು. ಆಕೆ ಪ್ರೇಯಸ್ಸು ಶ್ರೇಯಸ್ಸು ಎರಡನ್ನೂ ಅನುಗ್ರಹಿಸುತ್ತಾಳೆ. ಷಟ್ ಚಕ್ರಗಳಲ್ಲಿ ಆಕೆಯನ್ನು ಧ್ಯಾನಾವಾಹನೆ ಮಾಡಿ ಪೂಜಿಸಿ, ತಮ್ಮ ಇಷ್ಟ ಕಾಮನೆಗಳನ್ನು ಪಡೆದುಕೊಳ್ಳುತ್ತಾರೆ. ಮಣಿಪೂರ ಚಕ್ರದಲ್ಲಿ ತಾಯಿಯನ್ನು ಧ್ಯಾನಾವಾಹನೆ ಮಾಡಿ ಪೂಜಿಸುವರು, ಆಧ್ಯಾತ್ಮಿಕ ಲೋಕದ ದ್ವಾರದತ್ತ ಸಾಗುತ್ತಾರೆ. ಅನಾಹತ ಚಕ್ರದಲ್ಲಿ ಧ್ಯಾನಾವಾಹನೆ ಮಾಡಿ ಪೂಜಿಸುವರು, ಆಧ್ಯಾತ್ಮಿಕ ಲೋಕವನ್ನು ಸೇರುತ್ತಾರೆ. ವಿಶುದ್ಧಚಕ್ರದಲ್ಲಿ ಧ್ಯಾನಿಸುವರು, ಪರಮಾತ್ಮ ತತ್ತ್ವದ ಬಳಿ ಸೇರುತ್ತಾರೆ. ಆಜ್ಞಾಚಕ್ರದಲ್ಲಿ ಧ್ಯಾನಿಸುವರು, ಪರಮಾನಂದವನ್ನು ಪಡೆಯುತ್ತಾರೆ. ಸಹಸ್ರಾರ ಅಥವಾ ಧ್ರುವ ಮಂಡಲದಲ್ಲಿ ಧ್ಯಾನಿಸುವರು ಸಾಲೋಕ್ಯ, ಸಾಮೀಪ್ಯ ಸಾರೂಪ್ಯ ಸಾಯುಜ್ಯ ಸ್ಥಿತಿಯನ್ನೂ ದಾಟಿ, ಆತ್ಮ ತತ್ತ್ವದಲ್ಲಿ ನೆಲೆ ನಿಲ್ಲುತ್ತಾರೆ. ಸಾಧಕನು ತನ್ನ ಶರೀರದ ಷಟ್ ಚಕ್ರಗಳಲ್ಲಿ ಶ್ರೀ ಚಕ್ರದ ಏಕತೆ, ಶ್ರೀ ಚಕ್ರದಲ್ಲಿ ಮಂತ್ರಗಳ ಏಕತೆ, ಶ್ರೀ ಚಕ್ರ ಮತ್ತು ಶ್ರೀ ದೇವಿಯ ತಾದಾತ್ಮ್ಯ ಮಂತ್ರಗಳು, ಶ್ರೀ ಚಕ್ರ ಮತ್ತು ದೇವಿಯ ಏಕತೆ, ಇದನ್ನು ಕಂಡುಕೊಂಡು ಸಾಧನೆ ನಡೆಸಬೇಕು. ದೇವಿಯ ಉಪಾಸನೆಯು ಬಹಿರುಪಾಸನೆಯಿಂದ, ದೇವಿಯ ಮೂರ್ತಿ ಪೂಜೆಯಿಂದ ಆರಂಭವಾಗಿ ಶ್ರೀ ಯಂತ್ರ ಪೂಜೆಯ ದ್ವಾರಾ ಕ್ರಮವಾಗಿ ಅಂತರ್ಮುಖವಾಗಬೇಕು",ಎಂದು ಆಚಾರ್ಯರು ಸಾರಿದರು. ವಾಮ ಮಾರ್ಗ ಮತ್ತು ಮಿಶ್ರ ಮಾರ್ಗಗಳು ವೀರ ಮಾರ್ಗವಾಗಿದ್ದು, ಅದು ಎಲ್ಲರಿಗೂ ಸಾಧ್ಯವಿಲ್ಲವೆಂದೂ ಆಚಾರ್ಯರು ಸ್ಪಷ್ಟಪಡಿಸಿದರು. ತಾಂತ್ರಿಕರೆಲ್ಲರನ್ನೂ ಒಲಿಸಿ, ಶ್ರೀ ಮೂಕಾಂಬಿಕೆಯ ಪೂಜೆಯನ್ನು ತಾತ್ವಿಕ ವಿಧಾನಕ್ಕೆ ಪರಿವರ್ತಿಸಿದರು. ತಾವೇ ಸ್ವತಃ ಅಲ್ಲಿ ಶ್ರೀ ಚಕ್ರವನ್ನು ಸ್ಥಾಪಿಸಿ ದೇವಿಯ ದಿವ್ಯ ಸನ್ನಿಧಿಯಲ್ಲಿ ಪೂಜಿಸಿದರು. ಸ್ವಲ್ಪ ಕಾಲ ಆಚಾರ್ಯರು ಶ್ರೀ ಮೂಕಾಂಬಿಕೆಯ ಸನ್ನಿಧಿಯಲ್ಲಿಯೇ ಇದ್ದು ತಪೋಧ್ಯಾನ ನಿರತರೂ ಆಗಿದ್ದರು. ಹಲವಾರು ದೇವಿ ಸ್ತೋತ್ರಗಳನ್ನೂ ರಚಿಸಿ ಹಾಡಿದರು.

ಶ್ರೀ ಮೂಕಾಂಬಿಕಾ ಕ್ಷೇತ್ರದಿಂದ ಮುಂದೆ ಆಚಾರ್ಯರು ಶ್ರೀ ಬಲಿಗ್ರಾಮಕ್ಕೆ ದಯಮಾಡಿಸಿದರು. ಶ್ರೀ ಬಲಿ ಗ್ರಾಮವು ವಿದ್ವಾಂಸರಿಂದ ಕೂಡಿದ್ದ ಅಗ್ರಹಾರವಾಗಿದ್ದು, ಅಲ್ಲಿ ಗುರುದೇವರಿಗೆ ಭವ್ಯ ಸ್ವಾಗತವು ಸಿಕ್ಕಿತು. ಆಚಾರ್ಯರೊಡನೆ ವಾದ ಮಾಡಲು ಅಲ್ಲಿ ಹಲವಾರು ಜನ ಪಂಡಿತರೂ ಇದ್ದರು. ಅನೇಕ ಜನ ಅಗ್ನಿಹೋತ್ರಿಗಳೂ, ಯಜ್ಞಯಾಗಗಳಲ್ಲಿ ನಿರತರಾದವರೂ ಅಲ್ಲಿದ್ದರು.

ಅವರಲ್ಲಿ ಪ್ರಮುಖರಾದವರು ಆಚಾರ್ಯರ ಬಳಿ ಸಾರಿ "ಯತಿವರ್ಯ, ತಾವು ಯಜ್ಞಯಾಗಗಳ ವಿರೋಧಿಯೆಂದು ಕೇಳಿದ್ದೇವೆ" ಎಂದರು. ಮತ್ತೆ ಕೆಲವರು "ತಾವು ಕರ್ಮಕಾಂಡವನ್ನೇ ವಿರೋಧಿಸುತ್ತಿದ್ದೀರೆಂದೂ ಕೇಳಿದ್ದೇವೆ" ಎಂದರು. ಆಚಾರ್ಯರು "ಪಂಡಿತರೇ, ನಾನು ಕರ್ಮಕಾಂಡದ ವಿರೋಧಿಯೂ ಅಲ್ಲ. ಯಜ್ಞಯಾಗಾದಿಗಳ ವಿರೋಧಿಯೂ ಅಲ್ಲ. ಮೌಢ್ಯ ಆಚಾರಗಳ, ಅವಿಚಾರಗಳ ವಿರೋಧಿ" ಎಂದು ನುಡಿದರು.

"ವೇದವೇದಾಂತಗಳ ಮೂಲ ಧ್ಯೇಯ ಆತ್ಮದರ್ಶನ. ಆತ್ಮ ದರ್ಶನಕ್ಕೆ ವಿರೋಧವಾದುದನ್ನು ನಾನು ವಿರೋಧಿಸುತ್ತೇನೆ. ನೀವು ಮಾಡುವ ಅಗ್ನಿ ಹೋತ್ರದಿಂದ, ಯಜ್ಞ ಧೂಮದಿಂದ ವಾತಾವರಣವು, ಓಷಧಿ ವನಸ್ಪತಿಗಳೂ ಶುದ್ಧವಾಗುತ್ತವೆ, ವೇದ ಮಂತ್ರೋದ್ಘೋಷದಿಂದ ಚಿತ್ತ ಸಮಾಧಾನ, ಶಾಂತಿ ಸಂತೋಷಗಳು ಮೂಡುತ್ತದೆ. ನೀವು ನೀಡುವ ದಾನ ದಕ್ಷಿಣೆಗಳಿಂದ ವಿದ್ವಾಂಸರ ಮನ್ನಣೆಯಾಗುತ್ತದೆ. ಯಜ್ಞ ಯಾಗಗಳು, ದಾನ ತ್ಯಾಗಗಳ ಪ್ರತೀಕಗಳು. ಆತ್ಮ ಸಾಕ್ಷಾತ್ಕಾರಕ್ಕೆ ಅವು ದಾರಿಗಳು, ಆದರೆ ಈಗ ನಡೆಯುತ್ತಿರುವ ಯಜ್ಞಕರ್ಮಗಳು ಎಂಥವು? ನೂರಾರು ಆಸೆ ಪ್ರಲೋಭನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ನಡೆಸುತ್ತಿರುವ ಕಾಮ್ಯ ಕರ್ಮಗಳು ಇವು. ಇವನ್ನು ನಾನು ಮೆಚ್ಚುವುದಿಲ್ಲ, ವಿರೋಧಿಸುತ್ತೇನೆ. ಕರ್ಮ ಫಲ ತ್ಯಾಗದಿಂದ, ಭೋಗ ತ್ಯಾಗದಿಂದ ವಿರಾಗ ಮೂಡಿ ಅದು ಜ್ಞಾನದ ಮಾರ್ಗಕ್ಕೆ ಒಯ್ಯತ್ತದೆ. ಆತ್ಮ ಸಾಕ್ಷಾತ್ಕಾರದ ಹೆದ್ದಾರಿಯಾಗುತ್ತದೆ. ಯಜ್ಞ ಯಾಗಗಳು ತ್ಯಾಗ ಯೋಗಗಳು ಸಂಕೇತಗಳು.

"ಕರ್ಮ ಮಾಡದೆ ಒಂದು ಕ್ಷಣವೂ ಜೀವಿಸಲಾಗದು. ನ ಹಿ ಕಶ್ಚಿತ್ ಕ್ಷಣಮಪಿಜಾತುತಿಷ್ಠತ್ಯ ಕರ್ಮಕೃತ್ ಎಂಬಂತೆ, ಇಂದ್ರಿಯಗಳು ಸದಾ ಕರ್ಮದಲ್ಲಿ ಮಗ್ನವಾಗಿಯೇ ಇರುತ್ತವೆ. ಅವುಗಳನ್ನು ನಿಯಂತ್ರಿಸಿಕೊಂಡು, ಅವುಗಳ ದಾಸರಾಗದೆ, ಕರ್ಮಗಳ ಫಲಕ್ಕಾಗಿ ಹಾತೊರೆಯದೆ, ಯದೃಚ್ಛಾ ಲಾಭ ಸಂತುಷ್ಟರಾಗಿ, ಚಿತ್ತ ಶುದ್ಧಿಯನ್ನು ಗಳಿಸಿಕೊಂಡು, ಆತ್ಮ ಸಾಧನೆ ಮಾಡಬೇಕು" ಎಂದರು ಆಚಾರ್ಯರು.

ಗುರುದೇವರ ಮಾತು ಅವರಿಗೆಲ್ಲಾ ಒಪ್ಪಿತು. ಕಾಮ್ಯ ಕರ್ಮಗಳು ಫಲದ ಇಚ್ಛೆಯಿಂದ ನಡೆಸತಕ್ಕವು. ಫಲವನ್ನು ಭೋಗಿಸಬೇಕು, ಆ ಭೋಗಗಳ ಇಚ್ಛೆಯಿಂದ ಪುನಃ ಕರ್ಮವನ್ನು ಮಾಡುವುದು, ಪುನಃ ಫಲಭೋಗ ಹೀಗೆ ಈ ಕರ್ಮ ಫಲ ಚಕ್ರದಿಂದ ಬಿಡುಗಡೆ ಎಂದು? ಆಚಾರ್ಯರು ಉಪದೇಶಿಸಿದಂತೆ ಕರ್ಮ ಫಲ ತ್ಯಾಗದಿಂದ ಮಾತ್ರವೇ, ಕರ್ಮಫಲ ಚಕ್ರದಿಂದ ಹೊರಕ್ಕೆ, ಆಚೆಗೆ ದಾಟಬಹುದು ಎಂದು ಅವರು ಅರಿತರು. ಹೀಗೆ ಆಚಾರ್ಯರು ದಾನವನ್ನು, ತ್ಯಾಗವನ್ನು ಅವರಿಗೆಲ್ಲಾ ಉಪದೇಶಿಸಿದರು.

---

**ಕಗ್ಗದ ಬೆಳಕಿನಲ್ಲಿ.....**

# ಚೈತನ್ಯದ ಲೀಲೆ ಯಾವುದು?

– ಲೇ: ವಿ॥ ಜಿ. ಎಸ್. ನಟೇಶ್

**ನೇತ್ರಯುಗಳಂ ಪಿಡಿಗುಮೊಂದು ಲಕ್ಷ್ಯವ ಕೂಡಿ**
**ಹಸ್ತಯುಗ ಸಾಧಿಪುದು ಮನದರ್ಥವೊಂದನ್ ॥**
**ದ್ವೈತದಿಂದದ್ವೈತವದ್ವೈತದೊಳ್ ದ್ವೈತ**
**ಚೈತನ್ಯಲೀಲೆಯಿದು – ಮಂಕುತಿಮ್ಮ ॥**

**ಎರಡು ಕಣ್ಣುಗಳು ಸೇರಿ ಒಂದು ವಸ್ತುವನ್ನು ಗ್ರಹಿಸುತ್ತವೆ. ಎರಡು ಕೈಗಳು ಒಂದು ಮನೋರಥವನ್ನು ಪೂರೈಸುತ್ತವೆ. ದ್ವೈತದಿಂದ ಅದ್ವೈತ, ಅದ್ವೈತದಿಂದ ದ್ವೈತ ಹೀಗೆ ಇರುವುದು ಚೈತನ್ಯದ ಲೀಲೆಯಾಗಿದೆ.**

ಜಗತ್ತಿನ ಉಗ್ರಾಣದಲ್ಲಿ ನೂರಾರು ಮತಗಳಿವೆ. ಅವೆಲ್ಲವೂ ಅವರವರಿಗೆ ಸರಿಯಾದವುಗಳೇ. ಭಗವಂತನಿಗೆ ಅವೆಲ್ಲವೂ ಸಮಾನ. ದ್ವೈತಮತ ಜೀವಾತ್ಮ ಪರಮಾತ್ಮಗಳಿಗೆ ಭೇದವನ್ನು ಹೇಳಿದರೆ, ಅದ್ವೈತಮತ ಅವೆರಡಕ್ಕೆ ಅಭೇದವನ್ನು ಹೇಳುತ್ತದೆ. ಭಗವಂತನ ದೃಷ್ಟಿಯಿಂದ ಅವೆರಡೂ ಒಂದೇ. ಇದನ್ನು ಸುಂದರವಾದ ಎರಡು ಉದಾಹರಣೆಗಳಿಂದ ಗುಂಡಪ್ಪನವರು ಇಲ್ಲಿ ನಿರೂಪಿಸಿದ್ದಾರೆ. ನಮಗೆ ಕಣ್ಣುಗಳು ಎರಡು. ಅದು ದ್ವೈತ. ಎರಡೂ ಕಣ್ಣುಗಳು ಸೇರಿ ಒಂದು ವಸ್ತುವನ್ನು ತೋರಿಸಿಕೊಡುತ್ತವೆ. ಈ 'ಒಂದು' ಎಂಬುದು ಅದ್ವೈತ. ಹಾಗೆಯೇ ನಮಗೆ ಎರಡು ಕೈಗಳು ಸೇರಿ ಒಂದು ಕೆಲಸವನ್ನು ಮಾಡಿಕೊಡುತ್ತವೆ. ದ್ವೈತದಲ್ಲಿ ಅದ್ವೈತವನ್ನು ಅದ್ವೈತದಲ್ಲಿ ದ್ವೈತವನ್ನು ನಾವಿಲ್ಲಿ ಕಾಣಬಹುದಾಗಿದೆ. ಅವೆರಡೂ ಬದುಕಿನಲ್ಲಿ ಒಂದಕ್ಕೊಂದು ಪೂರಕ, ಒಂದಕ್ಕೊಂದು ಪ್ರೇರಕ. ಚೈತನ್ಯದ ಲೀಲೆಯೇ ಇದು. ಹಾಗಿದ್ದ ಮೇಲೆ ಮತಗಳ ಶ್ರೇಷ್ಠತೆಯ ವಿಚಾರದಲ್ಲಿ ಧರ್ಮಗಳಿಗಾಗಿ ಪರಸ್ಪರ ಕಾದಾಡುವುದು

ಎಷ್ಟು ಮಾತ್ರಕ್ಕೂ ಉಚಿತವಲ್ಲ. ಅದು ಭಗವಂತನಿಗೆ ಎಂದೂ ಪ್ರಿಯವಾಗುವುದಿಲ್ಲ. 'ಅವರವರ ಭಾವಕ್ಕೆ ಅವರವರ ಭಕುತಿ' ಈ ಎಚ್ಚರ ಸದಾ ನಮಗಿರಬೇಕು.

**ಮೂರು ಮತಗಳು ಎಂಥವು?**

**ನಿರಧಿ ಬ್ರಹ್ಮ, ನೀರ್ಗಲ್ ಜೀವವೆನುತೊಂದು**
**ಕ್ಷೀರವದು, ಘೃತವಿದದರೊಳಗೆನ್ನುತೊಂದು ।**
**ಕೀರು ಪರಮಾನ್ನವದು, ದ್ರಾಕ್ಷಿಯಿದೆನುತ್ತೊಂದು**
**ಮೂರಿಂತು ಮತವರ – ಮಂಕುತಿಮ್ಮ ॥**

**ಸಮುದ್ರ 'ಬ್ರಹ್ಮ'ವಾದರೆ ಅದರ ಮೇಲೆ ತೇಲುವ ಮಂಜುಗಡ್ಡೆ 'ಜೀವ' ಎಂಬುದು ಒಂದು ಮತ. ಇನ್ನೊಂದು ಮತದ ಪ್ರಕಾರ 'ಬ್ರಹ್ಮ' ಹಾಲಾದರೆ ಅದರಲ್ಲಿರುವ ತುಪ್ಪ 'ಜೀವ'. 'ಬ್ರಹ್ಮ' ಕೀರು ಪರಮಾನ್ನವಾದರೆ ಅದರಲ್ಲಿರುವ ದ್ರಾಕ್ಷಿ 'ಜೀವ' ಎಂದು ಇನ್ನೊಂದು ಮತ ವಿವರಿಸುತ್ತದೆ. ಹೀಗೆ ಮತಗಳ ವಿವರ ಮೂರು ರೀತಿಯಲ್ಲಿರುತ್ತದೆ.**

ಮಾನ್ಯ ಡಿ.ವಿ.ಜಿ. ಯವರು ಲೋಕದಲ್ಲಿರುವ ಪ್ರಧಾನ ಮತಗಳನ್ನು ತಮ್ಮದೇ ಆದ ಶೈಲಿಯಲ್ಲಿ ವಿವರಿಸುತ್ತಾರೆ. ಒಂದು ಮತ ಬ್ರಹ್ಮನನ್ನು ಸಮುದ್ರ ಎಂದು ಭಾವಿಸಿದರೆ ಜೀವ ಅದರ ಮೇಲೆ ತೇಲುತ್ತಿರುವ ಮಂಜುಗಡ್ಡೆ. ಅಂದರೆ ಮಂಜುಗಡ್ಡೆಯೂ ನೀರಿನ ಮತ್ತೊಂದು ರೂಪ. ಕರಗಿದಾಗ ಅದೂ ನೀರಾಗಿಬಿಡುತ್ತದೆ. ಮೇಲ್ನೋಟಕ್ಕೆ ಮಾತ್ರ ಬೇರೆಯಾಗಿ ಕಾಣುತ್ತವೆಯಾದರೂ ಅವೆರಡೂ ಒಂದೇ. ಇನ್ನೊಂದು ಮತದಲ್ಲಿ ಬ್ರಹ್ಮ ಹಾಲಾದರೆ ಜೀವ ಅದರಲ್ಲಿರುವ ತುಪ್ಪ. ಮೂಲತಃ ಅವೆರಡೂ ಒಂದೇ ಆದರೂ ಬೇರೆ ಬೇರೆಯಾಗಿಯೇ ಕಾಣುತ್ತವೆ. ಸ್ವಲ್ಪ ಮಟ್ಟಿಗೆ ಭೇದ ಕಾಣುತ್ತದೆ. ಘೃತವನ್ನು ಕರಗಿಸಿದರೂ ಹಾಲಿನ ರೂಪವನ್ನು ಪಡೆಯದು. ಆದರೆ ಘೃತದಲ್ಲಿ ಹಾಲಿನ ಅಂಶ ಇದ್ದೇ ಇರುತ್ತದೆ. ಇನ್ನೊಂದು ಮತದ ಪ್ರಕಾರ ಬ್ರಹ್ಮ ಕೀರು ಪಾಯಸವಾದರೆ ಜೀವ ಅದರಲ್ಲಿ ಬೆರೆಸಿದ ದ್ರಾಕ್ಷಿ. ಇಲ್ಲಿ ಸಂಪೂರ್ಣ ಭೇದ ಎದ್ದು ಕಾಣುತ್ತದೆ. ಆದರೂ ಅವೆರಡೂ ಸೇರಿದರೆ ಮಾತ್ರ ಪಾಯಸ ಸೊಗಸು, ರುಚಿಕರ. ಹೀಗೆ, ಜೀವ ಬ್ರಹ್ಮರ ಸ್ವರೂಪಗಳಲ್ಲಿ ಅಭೇದ, ಸ್ವಲ್ಪ ಭೇದ ಮತ್ತು ಪೂರ್ಣಭೇದವನ್ನು ಅನ್ಯಾನ್ಯ ಮತಗಳು ಪ್ರತಿಪಾದಿಸುತ್ತವೆ. ಈ ಮತಗಳು ಏನೇ ಪ್ರತಿಪಾದಿಸಲಿ ಜೀವ ಬ್ರಹ್ಮರ ಅಸ್ತಿತ್ವದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿಲ್ಲ. ಜೀವ, ಬ್ರಹ್ಮನ ಸಾರೂಪ್ಯದಲ್ಲಿಯೋ ಸಾಯುಜ್ಯದಲ್ಲಿಯೋ ಅಥವಾ ಸಾನ್ನಿಧ್ಯದಲ್ಲಿಯೋ ಇರಬೇಕಾದುದು ಅದರ ಪಾರಮ್ಯ ಗುರಿಯಾಗಬೇಕು.

**ಎಂಥ ವ್ಯವಹಾರ ಜಗತ್ತಿನಲ್ಲಿ ಭಾರವಾಗುವುದಿಲ್ಲ?**

**ಮೂರಿರಲಿ ವಾದ ಮುನ್ನೂರಿರಲಿ ಸಕಲರುಂ**
**ಸಾರವಸ್ತುವನೊಂದನೊಪ್ಪಿಕೊಳುವವರೇ ।**
**ಪಾರಮಾರ್ಥಿಕವನಂತೆಣಿಸಿದ ವ್ಯವಹಾರ**
**ಭಾರವಾಗದು ಜಗಕೆ – ಮಂಕುತಿಮ್ಮ ॥**

**ವಾದಗಳು ಮೂರಿರಲಿ ಅಥವಾ ಮುನ್ನೂರಿರಲಿ. ಎಲ್ಲರೂ ಸಾರಭೂತವಾದ ವಸ್ತುವೊಂದನ್ನು ಅಂಗೀಕರಿಸುವವರೇ. ಪರಮಾರ್ಥವನ್ನು ಸ್ವೀಕರಿಸಿ ಮಾಡಿದ ವ್ಯವಹಾರ ಜಗತ್ತಿಗೆ ಭಾರವಾಗುವುದಿಲ್ಲ.**

ಮತಗಳನ್ನು ಮೂರೆಂದು ವಾದಿಸಲಿ ಅಥವಾ ಮುನ್ನೂರೆಂದು ವಾದಿಸಲಿ. ಎಲ್ಲಾ ಮತದವರೂ ಸಾರಭೂತವಾದ ಒಂದು ವಸ್ತು ಜಗತ್ತಿನಲ್ಲಿ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅರ್ಥಾತ್ ಎಲ್ಲಾ ಮತಗಳೂ ಭಗವಂತನ ಅಸ್ತಿತ್ವವನ್ನು ಅಂಗೀಕರಿಸುತ್ತವೆ. ಆ ಶಕ್ತಿಯ ಅಸ್ತಿತ್ವದ ನೆನಪಿನಲ್ಲಿಯೇ ಈ ಜಗತ್ತಿನ ಎಲ್ಲಾ ವ್ಯವಹಾರಗಳೂ ನಡೆಯುವಂತಾದರೆ ಜೀವನದಲ್ಲಿಯ ಭಾರ ಕಡಿಮೆಯಾಗುತ್ತದೆ. ಆ ಶಕ್ತಿಯನ್ನು ಮರೆತು ಮಾಡಿದ ಸಾಹಸಗಳು ಶ್ರಮವನ್ನುಂಟು ಮಾಡುತ್ತವೆಯೇ ಹೊರತು ಯೋಗ್ಯ ಫಲವನ್ನು ತಂದುಕೊಡಲಾರವು. ಎಂಥ ನಾಸ್ತಿಕನಾದರೂ ಭಗವಂತನ ಅಸ್ತಿತ್ವದ ನಂಬಿಕೆಯಿಂದ ತುಂಬಬಹುದಾದ ಸಾಮಾಜಿಕ ಮೌಲ್ಯಗಳನ್ನು ತುಂಬಲಾರ. ಹಾಸ್ಯ ಸಾಹಿತಿ ಬಿ. ಚಿ. ಯವರು ಹೇಳುತ್ತಿದ್ದರಂತೆ 'ದೇವರು ಇದ್ದಾನೆ ಎಂದು ನಂಬುವುದರಿಂದ ಏನೊಂದು ಮೌಲ್ಯಗಳು ಈ ಸಮಾಜದಲ್ಲಿ ತುಂಬಿಕೊಳ್ಳುತ್ತವೆಯೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಮೌಲ್ಯಗಳನ್ನು ತುಂಬುವಂತಿದ್ದರೆ ಮಾತ್ರ ದೇವರಿಲ್ಲ ಎಂದು ಪ್ರತಿಪಾದಿಸಲು ತೊಡಗು' ಭಗವಂತನಲ್ಲಿಯ ನಂಬಿಕೆ ಶ್ರದ್ಧೆಗಳು ಅದೆಷ್ಟೋ ಮೌಲ್ಯಗಳನ್ನು ಸಮಾಜದಲ್ಲಿ ತುಂಬಿಕೊಡುತ್ತವೆ. ಉದಾಹರಣೆಗೆ ಸುಳ್ಳು ಹೇಳದಿರುವುದು, ಮಾತಿಗೆ ತಪ್ಪದಿರುವುದು, ಪ್ರಾಮಾಣಿಕ ಸೇವೆ ಮಾಡುವುದು, ಪರರಿಗೆ ಸಹಕರಿಸುವುದು ಇವೆಲ್ಲ ದೈವಿಕ ಶ್ರದ್ಧೆಯಿಂದಾಗಿ ಬಹಳ ಸುಲಭವಾಗಿ ಸಮಾಜದಲ್ಲಿ ಅಳವಡಿಕೆಯಾಗುತ್ತದೆ. ದುರಂತವೆಂದರೆ ಇಂದಿನ ಅತಿಯಾದ ವೈಚಾರಿಕತೆಗಳು ಜನರನ್ನು ದಿಕ್ಕುತಪ್ಪಿಸುತ್ತವೆ. ದಿಕ್ಕುತಪ್ಪಿದ ಸಮಾಜವನ್ನು ಮತ್ತೆ ಒಳ್ಳೆಯ ದಾರಿಗೆ ತರುವಲ್ಲಿ ಸೋತುಹೋಗುತ್ತವೆ.

**ಲೋಕ ತಳಮಳಿಸಲು ಕಾರಣವೇನು?**

**ಹಳೆಯ ಭಕ್ತಿ ಶ್ರದ್ಧೆಯಳಿಸಿ ಹೋಗಿವೆ ಮಾಸಿ**
**ಸುಳಿದಿಲ್ಲವಾವ ಹೊಸದರುಶನದ ಹೊಳಪುಂ ।**
**ಪಳಗಿದ್ದಮನೆಬಿದ್ದ ಕುಂಟ ಕುರುಡನ ತೆರದಿ**
**ತಳಮಳಿಸುತಿದೆ ಲೋಕ – ಮಂಕುತಿಮ್ಮ ॥**

**ಹಳೆಯ ಭಕ್ತಿ, ಶ್ರದ್ಧೆಗಳು ಅಳಿಸಿ ಹೋಗಿವೆ. ಹೊಸ ದರ್ಶನದ ಬೆಳಕಿನ ಯಾವುದೇ ಸುಳಿವು ಇಲ್ಲ. ಕುಂಟ, ಕುರುಡರು ಪಳಗಿದ್ದ ಮನೆ ಬಿದ್ದು ಹೋದಾಗ ಅವರು ಗಾಬರಿಯಾಗುವಂತೆ, ಇಂದು ಲೋಕ ತಳಮಳಿಸುತ್ತಿದೆ.**

ನಾಗರಿಕತೆಯ ಪ್ರವಾಹದಲ್ಲಿಂದು ಪುರಾತನ ಸಂಸ್ಕೃತಿ ಕೊಚ್ಚಿಕೊಂಡು ಹೋಗುತಿದೆ. ಹಣದ ದಾಹ ಮಾನವೀಯತೆಯನ್ನೇ ಮುಳುಗಿಸಿಬಿಟ್ಟಿದೆ. ಪರಿಣಾಮ ಇಂದು ಹಳೆಯ ಕಾಲದ ಭಕ್ತಿ ಶ್ರದ್ಧೆಗಳು ಮಾಸಿವೆ. ಹಳೆಯದನ್ನೇನೋ ಕಳೆದುಕೊಂಡು ಬಿಡುತ್ತೇವೆ. ಆದರೆ ಅದರ ಸ್ಥಾನದಲ್ಲಿ ಹೊಸದು ಬರುವುದಿಲ್ಲ. ಬಂದಿದ್ದರೂ ಅದು ಹೊಂದುವಂತಿರುವುದಿಲ್ಲ. ಹೊಸದು ಹಳತಕ್ಕಿಂತ ಪರಿಣಾಮಕಾರಿಯಾಗಿದ್ದರೆ ಮಾತ್ರ ಅದನ್ನು ಸ್ವೀಕರಿಸಬಹುದಾಗಿರುತ್ತದೆ. ಇಂದಿನ ಸ್ಥಿತಿ ಹಳತನ್ನು ಕಳೆದುಕೊಂಡು ಅದರ ಸ್ಥಾನದಲ್ಲಿ ಹೊಸತನ್ನು ಪಡೆಯದೆ ತಳಮಳಪಡುವಂತಾಗಿದೆ. ಒಂದು ಮನೆಯಲ್ಲಿ ಕುಂಟ ಕುರುಡರು ಪರಸ್ಪರ ಹೊಂದಾಣಿಕೆಯಿಂದ ಬದುಕನ್ನು ನಡೆಸುತ್ತಿರುವಾಗ ಆ ಮನೆ ಬಿದ್ದು ಹೋಗಿಬಿಟ್ಟರೆ ಅವರ ಪರಿಸ್ಥಿತಿ ಹೇಗೆ ಕಳವಳಕಾರಿಯಾಗುತ್ತದೆಯೋ ಹಾಗಾಗಿದೆ ನಮ್ಮ ಇಂದಿನ ಸ್ಥಿತಿ. ಒಳ್ಳೆಯ ಹೊಸ ಆಸರೆ ಸಿಕ್ಕರೆ ಮಾತ್ರ ಹಳೆಯದನ್ನು ಬಿಡುವ ಮನಸ್ಸು ಮಾಡಬೇಕು. ಇಲ್ಲವಾದರೆ ಅತಂತ್ರ ಗತಿ ನಮ್ಮದಾಗುತ್ತದೆ.

**ಜನಜೀವನಕ್ಕೆ ಯಶಸ್ಸು ಸಿಗುವುದೆಂದು?**

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು**
**ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ।**
**ಋಷಿವಾಕ್ಯದೊಡನೆ ವಿಜ್ಞಾನಕಲೆ ಮೇಳವಿಸೆ**
**ಜಸವು ಜನನೀವನಕೆ – ಮಂಕುತಿಮ್ಮ ॥**

**ಹಳೆಯ ಬೇರು ಹಾಗೂ ಹೊಸ ಚಿಗುರಿನಿಂದ ಕೂಡಿದ್ದಾಗ ಮರ ಸೊಗಸಾಗಿರುತ್ತದೆ. ಹಾಗೆಯೇ ಹಳೆಯ ತತ್ವದೊಡನೆ ಹೊಸಯುಕ್ತಿ ಕೂಡಿದರೆ ಅದೇ ಧರ್ಮ. ಋಷಿಗಳ ವಾಕ್ಯದೊಡನೆ ವಿಜ್ಞಾನದ ಕಲೆ ಸೇರಿಕೊಂಡರೆ ಜನಜೀವನಕ್ಕೆ ಯಶ ಸಿಗುತ್ತದೆ.**

ಡಿ.ವಿ.ಗುಂಡಪ್ಪನವರು ಜೀವನಕ್ಕೆ ಯಶ ಸಿಗಬೇಕಾದರೆ ಹಳತು ಹೊಸತರ ಹಿತಮಿತವಾದ ಮಿಶ್ರಣವಿರಬೇಕು ಎಂದು ಅಭಿಪ್ರಾಯಪಡುತ್ತಾರೆ. 'ಪುರಾಣಮಿತ್ಯೇವ ನ ಸಾಧು ಸರ್ವಂ ನ ಚಾಪಿ ಕಾವ್ಯಂ ನವಮಿತ್ಯವದ್ಯಂ' ಎಂದು ಸಂಸ್ಕೃತ ಕವಿಯೊಬ್ಬ ಹೇಳುತ್ತಾನೆ. ಅಂದರೆ ಹಳೆಯದು ಅಂದ ಮಾತ್ರಕ್ಕೆ ದೋಷವುಳ್ಳದ್ದು ಎಂದು ಹೇಳಲು ಬರುವುದಿಲ್ಲ. ಸಜ್ಜನರು ಎಲ್ಲವನ್ನೂ ಪರೀಕ್ಷೆ ಮಾಡಿ ಒಳ್ಳೆಯದನ್ನು ಮಾತ್ರ ಸ್ವೀಕರಿಸುತ್ತಾರೆ. ಅಜ್ಞಾನಿಗಳು ಮಾತ್ರ ಬೇರೆಯವರ ಬುದ್ಧಿಯನ್ನು ಅವಲಂಭಿಸಿಕೊಂಡು ಬದುಕುತ್ತಾರೆ. ಈ ಪದ್ಯದಲ್ಲಿ ಡಿ.ವಿ.ಜಿ. ಒಂದು ಮರದ ಉದಾಹರಣೆಯೊಂದಿಗೆ ಎರಡರ ಮಿಶ್ರಣ ಹೇಗಿರಬೇಕು ಎಂದು ತಿಳಿಸಿದ್ದಾರೆ. ಮರದ ಸೌಂದರ್ಯ ವೃದ್ಧಿಸಬೇಕಾದರೆ ಭದ್ರವಾದ ಹಳೆಯ ಬೇರಿರಬೇಕು, ಜೊತೆಗೆ ಹೊಸ ಚಿಗುರು ತಳಮಳಿಸುತ್ತಿರಬೇಕು. ಹಾಗೆಯೇ ಧರ್ಮವೂ ಕೂಡ ಹಳೆಯ ತತ್ವದ ಜೊತೆಗೆ ಹೊಸ ಯುಕ್ತಿ ಸೇರಿಕೊಂಡಾಗ ಸುಂದರವಾಗುತ್ತದೆ. ಋಷಿ ವಾಕ್ಯವೂ ಬೇಕು, ವಿಜ್ಞಾನ ಕಲೆಯೂ ಬೇಕು. ಆಗಲೇ ಜನರ ಬದುಕು ಸುಂದರವಾಗುತ್ತದೆ. ಬದುಕಿಗೊಂದು ಯಶಸ್ಸು ಲಭಿಸುತ್ತದೆ. 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ' ಎಂಬ ವೇದವಾಕ್ಯದಂತೆ ಒಳ್ಳೆಯದು ವಿಶ್ವದ ಎಲ್ಲೆಡೆಯಿಂದಲೂ ನಮ್ಮೆಡೆಗೆ ಬರಲಿ.

# ಹಸಿರ ಸಿರಿ

ಪುಟ್ಟ ಮಗುವಿನ ಕರದಿ ಇರಿಸಿ
ದೊಡ್ಡ ಕರವದು ಅರುಹಿ ಕಲಿಸಿ
ಹಸಿರ ಚಿಗುರ ಬೆಳೆಸಿ ಉಳಿಸಿ
ಪರಿಸರದ ಪರಿತಾಪ ಪರಿಹರಿಸಿ ।1।

ಮರವೆಲ್ಲ ಕಡಿದು ದಟ್ಟಡವಿಯ ಬಯಲಾಗಿಸಿ
ತನ್ನ ಸ್ವಾರ್ಥಕೆ ಪರಿಸರವ ಬಲಿಯಾಗಿಸಿ
ಇಂದದರ ಫಲವ ಉಣ್ಣು ತಲಿಹ ಮನುಜನ ತೋರಿಸಿ
ಕಾಡು ಬೆಳೆಸಿ ನಾಡು ಉಳಿಸೋ ಸಂಕಲ್ಪ ಮಾಡಿಸಿ ।2।

ಮುಗ್ಧ ಮನದಲಿ ಹಸಿರ ಸಿರಿ ಇರಿಸಿ
ಇಂದು ಮುಂದೆಂದೂ ಹಸಿರೆ ಉಸಿರೆಂದು ತಿಳಿಸಿ
ಚಿಗುರೊ ಮನಸಿನ ತುಂಬ ಪರಿಸರ ಪ್ರೇಮ ಬೆಳೆಸಿ
ಮುಂದಾಗೊ ಹಾನಿಯ ತಡೆದು ನಿಲ್ಲಿಸಿ ।3।

ಪರಿಸರವದು ಎಲ್ಲರ ಬಾಳ ಹಸನಾಗಿಸಿ
ಇಂದು ನೊಂದು ಬೆಂದು ನರಳಿ ನಶಿಸಿ
ಜೀವ ಉಳಿಸೋ ಬದಲು ಶಾಪವಿರಿಸಿ
ಮರೆಯಾಗುತಿಹುದು ಅತಿ ಆಸೆಗೆ ಪ್ರತಿಫಲವ ಕರುಣಿಸಿ ।4।

ನಮ್ಮಿಂದಾದ ತಪ್ಪನೆಲ್ಲವ ಸರಿಪಡಿಸಿ
ಪರಿತಪಿಸಿಹ ಪರಿಸರದ ಪರಿತಾಪ ನೀಗಿಸಿ
ಹಸಿರ ಜನನಕೆ ಮೊದಲ ಹೆಜ್ಜೆ ಮುಂದಿರಿಸಿ
ಅಣಿಯಾಗಿಹುದು ಹಿರಿಯ ಕಿರಿಯ ಜೀವವ ಜೊತೆಯಾಗಿಸಿ ।5।

**ಲೇ:– ಪ್ರತಿಭಾ ಭಟ್, ಶಿರಳಗಿ.**

# ಔಷಧೀಯ ಸಸ್ಯ ಸಂಪತ್ತು

–ಲೇ: ಶ್ರೀ ಪಿ. ಎಸ್. ವೆಂಕಟರಾಮ್ ದೈತೋಟ

**ಅರಿಶಿನ ಗೆಂಟಿಗೆ**

ಅಂಗಾಂಗ ಬಾವುಗಳಿಗೆ

**ಹೆಸರುಗಳು**



ಕನ್ನಡ : ಅರಿಶಿಣ ಗೆಂಟಿಗೆ, ಅರಶಿನ ಗೋರಂಟೆ, ಗೊರಟೆ ಹೂವಿನ ಗಿಡ, ಕುರಕಂಟಿ ಹೂ;

ತುಳು ; ಗೆಂಟಿಗೆ ಪೂತ್ತ ದೈ;

ಮಲಯಾಳ : ಕನಕಾಂಬರಂ;

ತಮಿಳು : ಮುಳುಗೋವಿಂದ;

ಮರಾಠಿ : ಪೀವಳಿ ಕೋರಂಟಿ;

ಹಿಂದಿ : ಕಟ್‌ಸರೈೇಯ;

ಇಂಗ್ಲೀಷ್ : Prickly Deccan nail dye plant;

ಸಸ್ಯಶಾಸ್ತ್ರೀಯ : Barleria prionitis L.

ಸಂಸ್ಕೃತ : ಕುರಂಟಕ;

ಕುಟುಂಬ : Acanthaceae;

ಉಪಯೋಗ: ಸಮೂಲ ಸಸ್ಯ, ಬೇರು, ಎಲೆ, ಹೂ.

**ಮೂಲಿಕಾ ಪರಿಚಯ:**

ಕೈ ತೋಟಗಳಲ್ಲಿ ಪೊದರು ಸ್ವಭಾವದ ಗಿಡ. ಎಲ್ಲಾ ತರದ ಹವೆ, ಮಣ್ಣುಗಳಿಗೊಗ್ಗುವ ಜಾತಿ, ಎಲ್ಲಾ ಕಾಲಗಳಲ್ಲೂ ಹೂ ಬಿಡುತ್ತದೆ. ಕಂದು ಛಾಯೆಯ ದಪ್ಪ ಗಿಣ್ಣುಗಳುಳ್ಳ ಕಾಂಡ ರೆಂಬೆಗಳು. ಒಂದು ಪಕ್ಕ ಚಿಗುರಾದರೆ ಇನ್ನೊಂದು ಪಕ್ಕ ದೊಡ್ಡವೆರಡು ಸಣ್ಣವೆರಡು ಚೂಪು ಮುಳ್ಳುಗಳು. ಬೆಳವಣಿಗೆ ಹೊಂದಿ ಕೆಲವೊಮ್ಮೆ 2–3 ಮುಳ್ಳುಗಳಿರುವುದೂ ಇದೆ. 1 ಬೆರಳುದ್ದ, 2 ಬೆರಳಗಲದ ಎಲೆಗಳು, 4–5 ಜೊತೆ ನರಗಳು, ಬುಡ–ತುದಿ–ಚೂಪು ಬೇಸಿಗೆಯಲ್ಲಿ ಎಲೆಗಳು ಸಂಖ್ಯೆಯಲ್ಲೂ ಗಾತ್ರದಲ್ಲೂ ಕಡಿಮೆಯಾಗುತ್ತವೆ. ರೆಂಬೆ ತುದಿಗಳಲ್ಲಿ ಎಲೆಗಳೆಡೆಯಿಂದ ಹೂಗೊಂಚಲು, ತೊಟ್ಟಿನ ಪಕ್ಕ ಹೊರಡುವ ಸುಂಕುಗಳುಳ್ಳ ಸಂಪುಟದಿಂದ ಮೊಗ್ಗುಗಳು ಹೊರಡುತ್ತವೆ. ಸಾಯಂಕಾಲ ಬಣ್ಣ ತಳೆದ ಮೊಗ್ಗು ಬೆಳಗಿನಲ್ಲಿ ಅರಳುತ್ತದೆ. ಸಂಜೆಯಲ್ಲೇ ಬೆಳೆದ ಮೊಗ್ಗು ಕೊಯ್ದು ತೊಟ್ಟುಗಳಿಂದಲೇ ನೆಯ್ದು ಮಾಡಿದ ಹಾರ ರಾತ್ರಿ ತಂಪಿನಲ್ಲಿಟ್ಟರೆ ಬೆಳಗ್ಗೆ ಹದವಾಗಿ ಅರಳಿರುತ್ತದೆ. ಹೂವು ಎಲ್ಲಾ ದೇವರುಗಳಿಗೂ ಪ್ರಿಯ. ಮುಡಿಯುವವರಿಗೂ ಅಚ್ಚುಮೆಚ್ಚು. ಸಂಪುಟದೊಳಗೆ ಆಚೀಚೆ ಚಪ್ಪಟೆಯಾದ ಎರಡು ಬೀಜಗಳು, ಕಾಯಿ ಒಣಗಿದಾಗ ಸಿಡಿದು ಬೀಳುತ್ತವೆ. ಪುರಾತನ ಕಾಲದಿಂದಲೇ ಪೂಜೆಗಾಗಿ, ಅಂದಕ್ಕಾಗಿ, ಮದ್ದಾಗಿ ಮನೆಯ ಸುತ್ತ ನಟ್ಟು ಸಾಕುವ ಸಸ್ಯ. ಸಾಕಣೆ ಬೇಡ. ಆಯುರ್ವೇದದಲ್ಲಿ ಹಲವು ರೋಗಗಳ ಸರಮಾಲೆಗೆ ವಿಧಿಸಿದ ಔಷಧಿ, ಕಫ ವಾತಜನ್ಯ ರೋಗಗಳಿಗೆ ವಿಹಿತ, ಕೆಮ್ಮು, ಕಫ, ಶ್ವಾಸ, ಜ್ವರ, ಹಲ್ಲುಗಳ ಸಿಡಿತ, ರಕ್ತಗಳಿಗೆ, ಕಿವಿನೋವು, ಗ್ರಂಥಿ ಬಾವುಗಳಿಗೆ, ಬೆರಳುಹುಣ್ಣು, ಒಡಕುಗಳಿಗೆ ವ್ರಣ ಮೂತ್ರ ರೋಗಗಳಿಗೆ ಹೇಳಿದೆ. ಊದುಹರವಾಗಿ, ರಕ್ತಶೋಧಕವಾಗಿ, ಮೂತ್ರ ತಡೆ, ಕಲ್ಲುಗಳಿಗೆ, ಗಂಡಮಾಲೆ ಚರ್ಮರೋಗಕ್ಕೆ ವಿಶೇಷ. ಇದರ ತೈಲವು ಎಲುಬು, ನರಜಾಲಗಳ ರೋಗಗಳಲ್ಲಿ ತಲೆಗೂ ಯುಕ್ತ. ಗಿಡ ಒಮ್ಮೆ ನೆಟ್ಟರೆ ಥಕ್ಕನೆ ನಾಶವಾಗದು. ಪ್ರಮುಖವಾಗಿ ನೇರಳೆ, ಹಳದಿ, ನಸುಗೆಂಪು, ಬಿಳಿ ವರ್ಣದ ಹೂಗಳ ಭೇದಗಳು ಔಷಧೀಯ. ಹೂಬಣ್ಣ ಹೊಂದಿ ಪ್ರತ್ಯೇಕ ಉಪಯೋಗ ಹೇಳಿದೆ. ಇತರ ಮಿಶ್ರ ಜಾತಿಯವೂ ಇದೆ. ಅರಶಿನ ಹೂವಿನದು, ಮದ್ದಾಗಿ ವಿಶಿಷ್ಟ.

**ಉಪಯೋಗಗಳು:**

**ಸರ್ವಾಂಗ ದೋಷಕ್ಕೆ :** (ಶರೀರದ ಒಂದೊಂದು ಭಾಗ ಯಾ ಇಡಿ ಮೈ ಊದು) ಅರಶಿನ ಗೆಂಟಿಗೆ ಗಿಡದ ಬೇರು ಹಾಗೂ ಎಲೆ 20+20 ಗ್ರಾಂ ಸೇರಿಸಿ 6 ಲೋಟ 1 ಲೋಟ ಕಷಾಯ ತಯಾರಿಸಿ ಸೋಸಿ ಯಾಲಕ್ಕಿ ಪುಡಿ 1/4 ಚಿಟಿಕೆ ಹಾಕಿ ಕದಡಿ ದಿನಾ ಎರಡು ಬಾರಿ ಸೇವನೆ. ಅಗತ್ಯದಂತೆ 3–6 ದಿನ. (ಜೊತೆಗೆ ಎಲೆಗಳನ್ನು ನೀರಲ್ಲಿ ಅರೆದು ಲೇಪವೂ ಸಹಾಯಕ.)

**ಗ್ರಂಥಿಗಳ ಬಾವು :** ಅರಿಶಿನ ಗೆಂಟಿಗೆ ಬೇರನ್ನು ಅಕ್ಕಿ ತೊಳೆದ ನೀರಲ್ಲಿ ಅರೆದು ಆರಿದಂತೆ ಲೇಪ. ದಿನಕ್ಕೆ 3 ಗಂಟೆ ಹೊತ್ತಿನಂತೆ – 3 ದಿನ.

ಸುಂದರ ಕಾಂಡದ ಸೌಂದರ್ಯ

# ಶ್ರೀ ವೀರಾಂಜನೇಯ

ಲೇ॥ ರಾಮಕೃಷ್ಣ ಎನ್. ಹೆಗಡೆ

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಹನುಮಂತನು ಕೇವಲ ಸಂದೇಶವನ್ನಷ್ಟೇ ತಲುಪಿಸಿ ಬಂದಿದ್ದರೆ ಅದು ಸಾಮಾನ್ಯ ದೂತನ ಕಾರ್ಯವಾಗುತ್ತಿತ್ತು. ಆದರೆ ಇಲ್ಲಿ ರಾಕ್ಷಸ–ರಾಕ್ಷಸಿಯರ ಕಟುವಾಕ್ಯಗಳಿಂದ ನೊಂದಿದ್ದ ಸೀತೆಗೆ ತನ್ನ ಮಾತುಗಳ ಮೂಲಕವಾಗಿ ನಂಬಿಕೆ ಬರುವಂತೆ ಮಾಡುತ್ತಾನೆ. ಹಾಗೆಯೇ ಅವಳಿಗೆ ಸಮಾಧಾನವನ್ನು ಮಾಡಿ ಶ್ರೀರಾಮನು ಲಂಕೆಗೆ ಬಂದು ನಿನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುತ್ತಾನೆನ್ನುವ ಅಭಯವನ್ನು ನೀಡಿ ಅವಳು ಪ್ರಾಣ ತ್ಯಜಿಸದೆ ಪ್ರಾಣಧಾರಣೆ ಮಾಡಿಕೊಂಡು ಇರುವಂತೆ ಮಾಡುತ್ತಾನೆ. ಹಾಗೆಯೇ ಬರುವಾಗ ಸುಮ್ಮನೆ ಬರುವುದಿಲ್ಲ. ಬದಲಾಗಿ ಅಶೋಕ ವನವನ್ನು ಹಾಳು ಮಾಡಿ ಲಂಕೆಯ ರಾಕ್ಷಸರ ಕೋಪಕ್ಕೆ ಗುರಿಯಾಗುತ್ತಾನೆ. ಅವರೆಲ್ಲಾ ಯುದ್ಧಕ್ಕೆ ಬಂದಾಗ ಅವರನ್ನೆಲ್ಲಾ ಸೋಲಿಸಿ ತನ್ನ ಶಕ್ತಿಯ ಪರಿಚಯವನ್ನು ಅವರಿಗೆ ಮಾಡಿಕೊಡುತ್ತಾನೆ. ನಮ್ಮ ನಗರಕ್ಕೆ ಬಂದಿರುವ ಶ್ರೀರಾಮನ ದೂತನೇ ಇಷ್ಟೊಂದು ಬಲಶಾಲಿಯಾಗಿದ್ದಾನೆಂದರೆ ಇನ್ನು ಶ್ರೀರಾಮನು ಅದೆಷ್ಟು ಬಲಶಾಲಿಯಾಗಿರಬೇಕು? ಎಂದು ವೈರಿಗಳು ಚಿಂತಿಸುವಂತೆ ಮಾಡುತ್ತಾನೆ. ಶ್ರೀರಾಮನು ತನ್ನ ಮೇಲಿಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುತ್ತಾನೆ. ಹಾಗೆಯೇ ತನ್ನ ಸಾಹಸಮಯ ಕಾರ್ಯಗಳ ಮೂಲಕ ತನಗೆ ಸರಿಸಾಟಿಯಾಗಿರುವ ಇನ್ನೊಬ್ಬರು ತಮ್ಮ ಸೇನೆಯಲ್ಲಿ ಯಾರೂ ಇಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿಸುತ್ತಾನೆ.

ಶ್ರೀರಾಮನಿಗೆ ಲಂಕೆಯಲ್ಲಿ ನಡೆದಿರುವ ಎಲ್ಲಾ ವೃತ್ತಾಂತವನ್ನೂ ನಿವೇದನೆ ಮಾಡುತ್ತಿರುವ ಹನುಮಂತನು ಕೆಲವು ಗುರುತಿಸುವ ಸಂದರ್ಭವನ್ನೂ ಕೂಡ ವಿವರಿಸುತ್ತಾನೆ.

ಅಭಿಜ್ಞಾನಂ ಚ ಮೇ ದತ್ತಂ ಯಥಾವೃತ್ತಂ ತವಾಂತಿಕೇ।

ಚಿತ್ರಾಕೂಟೇ ಮಹಾಪ್ರಾಜ್ಞ ವಾಯಸಂ ಪ್ರತಿ ರಾಘವ॥

ಅಂದರೆ ಚಿತ್ರಕೂಟದಲ್ಲಿ ಶ್ರೀರಾಮನೊಟ್ಟಿಗೆ ಸೀತಾಮಾತೆಯು ಇರುವಾಗ ನಡೆದಿರುವ ಕಾಕವೃತ್ತಾಂತವೊಂದನ್ನು ನೆನಪಿಗಾಗಿ ಅವಳು ಹೇಳಿರುವುದನ್ನು ಆಂಜನೇಯನು ಹೇಳುತ್ತಾನೆ. ಯಾಕೆಂದರೆ ದೂರದ ಲಂಕೆಯಲ್ಲಿರುವ ಆ ಪ್ರದೇಶದಲ್ಲಿ ಆಂಜನೇಯನು ನೋಡಿ ಬಂದಿರುವವಳು ಸೀತಾಮಾತೆಯೇ ಆಗಿರುವಳೆಂದು ಶ್ರೀರಾಮನಿಗೆ ನಂಬಿಕೆ ಬರಬೇಕಲ್ಲವೇ? ಹಾಗಾಗಿ ಕವಿಯು ಇಲ್ಲಿ ನೆನಪಿನ ವಿಚಾರವನ್ನು ಚಿತ್ರಿಸಿರುತ್ತಾನೆ. ಹಾಗೆಯೇ ಅದನ್ನು ಯಥಾವತ್ತಾಗಿ ಆಂಜನೇಯನು ಶ್ರೀರಾಮನಿಗೆ ನಿವೇದಿಸಿರುವ ಸಂದರ್ಭವನ್ನು ಕೂಡ ಅಷ್ಟೇ ಸ್ವಾರಸ್ಯಕರವಾಗಿ ಚಿತ್ರಿಸುತ್ತಾನೆ. ಇಲ್ಲಿ ಸೀತಾ–ರಾಮಚಂದ್ರರು ದೂರ ದೂರ ಇದ್ದರೂ ಆ ಸಂದೇಶದ ವಾಕ್ಯಗಳು ಅವರನ್ನು ಭಾವನೆಗಳಿಂದ ಒಟ್ಟಿಗೆ ಸೇರುವಂತಹ ಚಿತ್ರಣವೂ ಇಲ್ಲಿದೆ.

ಹಾಗೆಯೇ ಇನ್ನೊಂದು ಪ್ರಮುಖವಾದ ನೆನಪಿನ ವಸ್ತುವೆಂದರೆ ಅದು ಚೂಡಮಣಿ ಅದನ್ನು ಅತ್ಯಂತ ಸುರಕ್ಷಿತವಾಗಿ ಆಂಜನೇಯನು ರಕ್ಷಿಸಿಕೊಂಡು ಬಂದಿದ್ದಾನೆ ಅಂತಹ ಚೂಡಾಮಣಿಯನ್ನು ತನ್ನ ಈ ಮಾತುಗಳ ಮೂಲಕವಾಗಿ ಶ್ರೀರಾಮನಿಗೆ ಅರ್ಪಣೆ ಮಾಡುತ್ತಾನೆ.

ಏಷ ಚೂಡಾಮಣಿ: ಶ್ರೀಮಾನ್ ಮಯಾ ಸುಪರಿರಕ್ಷಿತಃ।

ಮನಃ ಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ॥

ಸೀತೆಯು ಎಷ್ಟೇ ಕಷ್ಟದ ಪರಿಸ್ಥಿತಿಯನ್ನು ಎದುರಿಸಿದ್ದರೂ ಕೂಡ ಆ ದಿವ್ಯವಾಗಿರುವ ಚೂಡಮಣಿಯನ್ನು ರಕ್ಷಣೆ ಮಾಡಿಕೊಂಡು ಬಂದಿರುತ್ತಾಳೆ ಆದರೆ ಇಗ ತನ್ನೆದುರಿಗೆ ಬಂದಿರುವ ಹನುಮಂತನಿಗೆ ಅದನ್ನು ನೀಡಿ ತನ್ನ ಪತಿದೇವರಿಗೆ ಕೊಡು ಎಂದು ಕೊಟ್ಟಿರುತ್ತಾಳೆ. ಅಂತಹ ಚೂಡಾಮಣಿಯನ್ನು ಸೀತಾ ವಚನಾನುಸಾರವಾಗಿ ಶ್ರೀರಾಮನಿಗೆ ನೀಡುವ ಹನುಮಂತನು ಧನ್ಯನಾಗುತ್ತಿದ್ದಾನೆ.

(ಮುಂದುವರಿಯುವುದು)

# ಯಕ್ಷಪೂರ್ಣಿಮೆ–2018

**ಉದ್ಘಾಟನಾ ಸಮಾರಂಭ :**

ಶ್ರೀ ವೀರಾಂಜನೇಯ ದೇವರು, ಶ್ರೀಕ್ಷೇತ್ರ ಬಂಗಾರಮಕ್ಕಿ, ಕನ್ನಡ ಸಂಸ್ಕೃತಿ ಇಲಾಖೆ, ಉತ್ತರಕನ್ನಡ, ಸಿಲೆಕ್ಟ್ ಫೌಂಡೇಶನ್ (ರಿ.), ಬಂಗಾರಮಕ್ಕಿ ಹಾಗೂ ಶ್ರೀ ವೀರಾಂಜನೇಯ ಯಕ್ಷಮಿತ್ರ ಮಂಡಳಿ (ರಿ.) ಶ್ರೀಕ್ಷೇತ್ರ ಬಂಗಾರಮಕ್ಕಿ ಸಹಯೋಗದಲ್ಲಿ ನಡೆದ "ಯಕ್ಷಪೂರ್ಣಿಮೆ–2018" ಕಾರ್ಯಕ್ರಮವನ್ನು ಜಲವಳ್ಳಿ ಶ್ರೀ ವೆಂಕಟೇಶ ರಾವ್ ಅವರು ಉದ್ಘಾಟಿಸಿ, 'ಸೂರ್ಯ ಚಂದ್ರ ಇರುವವರೆಗೂ ಬಂಗಾರಮಕ್ಕಿಯ ಯಕ್ಷಗಾನ ಮುಂದುವರೆಯಲಿ' ಎಂದು ಆಶಿಸಿ ಮಾತನಾಡಿದರು.

ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಂ. ವಿ. ಹೆಗಡೆಯವರು– "ಐತಿಹಾಸಿಕವಾಗಿ ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಪ್ರದೇಶ ಗೇರುಸೊಪ್ಪ. ಅಂದಿನಂತೆ ಇಂದಿಗೂ ಕೂಡ ಶ್ರೀ ಕ್ಷೇತ್ರದಿಂದ ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಹೆಮ್ಮೆಯ ವಿಷಯ" ಎಂದರು. "ಭಕ್ತಿ ಮತ್ತು ಶಕ್ತಿಯಿಂದ ಯಕ್ಷಗಾನ ಕಲೆಯು ಮುಂದುವರಿಯುತ್ತದೆ" ಎಂದು ವಿ॥ ದತ್ತಮೂರ್ತಿ ಭಟ್ಟರು ಹೇಳಿದರು. "ನಶಿಸುತ್ತಿರುವ ಕಲಾ ಪ್ರಕಾರಗಳ ಪ್ರೋತ್ಸಾಹ ಹಾಗೂ ಬೆಳೆಸುವ ಉದ್ದೇಶದಿಂದ ಕಲಾವಿದರಿಗೆ ವೇದಿಕೆ ನೀಡುತ್ತಿರುವ ಕ್ಷೇತ್ರ ಬಂಗಾರಮಕ್ಕಿಯು ನಮ್ಮ ನಾಡಿನ ಹೆಮ್ಮೆಯ ಕ್ಷೇತ್ರವಾಗಿ ಬೆಳೆಯಲಿ ಎಂದು ಆಶಿಸುತ್ತೇನೆ" ಎಂದು ಶ್ರೀ ನಾಗರಾಜ ಜೋಷಿ, ಸೋಂದಾ ಆಶಿಸಿದರು. "ಕನ್ನಡ ಭಾಷೆ ಪರಿಶುದ್ಧವಾಗಿ ಬೆಳೆಯಲು ಯಕ್ಷಗಾನ ಸಹಾಯಕ" ಎಂದು ಶ್ರೀ ಮಾದೇವ ಸ್ವಾಮಿಯವರು ಅಭಿಪ್ರಾಯ ಪಟ್ಟರು.

ನಮ್ಮ ಸಂಸ್ಕೃತಿಯ ಜೀವನಾಡಿ ಯಕ್ಷಗಾನ ಕಲೆಯು ತನ್ನ ಮೂಲ ತತ್ವವನ್ನು ಉಳಿಸಿಕೊಳ್ಳುವ ತನಕ ಕಲೆ ಸಮಾಜಕ್ಕೆ ಮಾದರಿಯಾಗಿ ಬೆಳೆಯುತ್ತದೆ. ಆಧ್ಯಾತ್ಮಿಕ ನೆಮ್ಮದಿ ಕಲೆಯಿಂದ ಸಿಗುವುದು. ಮಾಧ್ಯಮ ಜಗತ್ತಿನ ಕಾರ್ಟೂನ್‌ಗಳಿಂದ ಮೂಲ ಯಕ್ಷಗಾನ ಕಲೆಗೆ ಧಕ್ಕೆ ಉಂಟಾಗುತ್ತಿದೆ. ಮಾಧ್ಯಮಗಳಲ್ಲಿ ಯಕ್ಷಗಾನದ ಪೌರಾಣಿಕ ಕಥೆಗಳನ್ನು ಬಿತ್ತರಿಸುವಂತಾಗಬೇಕು ಎಂದು ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು ತಮ್ಮ ಆಶೀರ್ವಚನದಲ್ಲಿ ನುಡಿದರು.

ನಗರಬಸ್ತಿಕೇರಿ ಗ್ರಾಮ ಪಂಚಾಯತದ ಅಧ್ಯಕ್ಷರಾದ ಶ್ರೀಮತಿ ಅನ್ನಪೂರ್ಣಾ ಶಾಸ್ತ್ರೀಯವರು ಉಪಸ್ಥಿತರಿದ್ದರು. ಶ್ರೀ ಸುಬ್ರಹ್ಮಣ್ಯ ಹೆಗಡೆ, ಚಿಟ್ಟಾಣಿಯವರು ಪ್ರಾಸ್ತಾವಿಕ ನುಡಿ ಹೇಳಿದರು. ಶ್ರೀ ಗಣಪತಿ ಹೆಗಡೆ ವಂದನಾರ್ಪಣೆ ಮಾಡಿದರು. ಶ್ರೀ ಪ್ರಶಾಂತ ಹೆಗಡೆ ಕಾರ್ಯಕ್ರಮವನ್ನು ನಿರೂಪಿಸಿದರು.

**ಯಕ್ಷಾಂಜನೇಯ ಪ್ರಶಸ್ತಿ ಪ್ರಧಾನ ಹಾಗೂ ಯಕ್ಷಪೂರ್ಣಿಮೆ 2018ರ ಸಮಾರೋಪ**

"ಸಂಪೂರ್ಣ ಕಲೆ ಎಂದರೆ, ಯಕ್ಷಗಾನ" ಪೌರಾಣಿಕ ಯಕ್ಷಗಾನಗಳಿಂದ ಧರ್ಮ ಶಾಸ್ತ್ರದ ಚಿಂತನೆ ಹಾಗೂ ಅರಿವು ಉಂಟಾಗುತ್ತದೆ. ಶಾಸ್ತ್ರದ ಕಠಿಣವಾದ ವಿಷಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಯಕ್ಷಗಾನದಿಂದ ಮಾತ್ರ ಸಾಧ್ಯ. ಎಂದು 'ಯಕ್ಷ ಪೂರ್ಣಿಮೆ 2018'ರ ಸಮಾರೋಪದಲ್ಲಿ – ಪರಮಪೂಜ್ಯ ಶ್ರೀ ಮಾರುತಿ ಗುರೂಜಿಯವರು ತಮ್ಮ ಆಶೀರ್ವಚನದಲ್ಲಿ ನುಡಿದರು.

ಕಾರ್ಯಕ್ರಮದಲ್ಲಿ ದಿ॥ ವೇದಮೂರ್ತಿ ಗಣೇಶ ಭಟ್ಟರ ಸ್ಮರಣಾರ್ಥ ನೀಡುವ ಯಕ್ಷಾಂಜನೇಯ ಪ್ರಶಸ್ತಿಯನ್ನು ಖ್ಯಾತ ಭಾಗವತರಾದ ಕಪ್ಪೆಕೇರಿ ಶ್ರೀ ಸುಬ್ರಾಯ ಭಾಗವತರಿಗೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಎನ್. ವಿ. ಯಾಜಿ, ವಕೀಲರು, ಧಾರವಾಡ, ಶ್ರೀ ಸತೀಶ್ ಭಟ್ಟ, ವಕೀಲರು, ಹೊನ್ನಾವರ, ಒಡ್ಡೋಲಗ ಸಂಸ್ಥೆಯ ಸ್ಥಾಪಕರಾದ ಶ್ರೀ ಗಣಪತಿ ಹೆಗಡೆ, ಹಿತ್ತಲಕೈ ಉಪಸ್ಥಿತರಿದ್ದರು.

ಶ್ರೀ ನಾಗರಾಜ ಹೆಗಡೆ, ಖಾಸ್ಕಂಡ ಕಾರ್ಯಕ್ರಮ ನಿರೂಪಿಸಿದರು. ಶ್ರೀ ರಾಮಚಂದ್ರ ಭಟ್ಟರು ಬಂಗಾರಮಕ್ಕಿ ಇವರ ನೇತೃತ್ವದಲ್ಲಿ ಹಾಗೂ ಸಂಯೋಜನೆಯಲ್ಲಿ ಹದಿನೈದು ದಿನಗಳ ಯಕ್ಷಪೂರ್ಣಿಮೆ ಕಾರ್ಯಕ್ರಮ ಜರುಗಿತು.

"ಆನೋ ಭದ್ರಾಃ ಕೃತವೋಯಂತು ವಿಶ್ವತಃ" ವಾಟ್ಸಾಪ್‌ನಿಂದ ಪಡೆದದ್ದು

## ಚಿಂತನಾಲೋಕ

ನಮಗೆ ಅನ್ನ ಮಾಡುವುದು ಹೇಗೆಂದು ಗೊತ್ತೇ ಇದೆ. ಒಂದು ಹಿಡಿಯಷ್ಟು ಅಕ್ಕಿ, ಅದಕ್ಕೆ ಬೇಕಾದಷ್ಟು ನೀರು, ಚಿಟಿಕೆ ಉಪ್ಪನ್ನು ಪಾತ್ರೆಗೆ ಹಾಕಿ ಒಲೆ ಮೇಲೆ ಇಟ್ಟರೆ ಅನ್ನ ಸಿದ್ಧವಲ್ಲವೇ? ಇಲ್ಲಿ ಅಕ್ಕಿ ಹಾಕಿದಷ್ಟೇ ಉಪ್ಪನ್ನೂ ಎಂದಾದರೂ ಹಾಕುತ್ತೇವಾ? ಇಲ್ಲ ಅಲ್ಲವೇ? ನಮ್ಮ ಮೇಲಿರುವ ಸೀಲಿಂಗ್ ಫ್ಯಾನ್‌ನ್ನು ಒಮ್ಮೆ ನೋಡಿ ರೂಮಿನ ಗಾತ್ರಕ್ಕೂ ಫ್ಯಾನಿನ ಅಳತೆಗೂ ಸಂಬಂಧವಿದೆಯೇ? ಅನ್ನಕ್ಕೆ ಹಾಕುವ ಉಪ್ಪು, ಸಿಲಿಂಗ್ ಫ್ಯಾನ್, ರೂಮಿನ ಬಲ್ಬು ಎಲ್ಲವೂ ಗಾತ್ರದಲ್ಲಿ ಚಿಕ್ಕವೇ. ಆದರೆ ಎಂದಾದರೂ ಅವುಗಳ ಸಾಮರ್ಥ್ಯದ ಬಗ್ಗೆ ನಮಗೆ ಕೊಂಕು ಬಂದಿದೆಯೇ.

ವಸ್ತುಗಳ ಸಾಮರ್ಥ್ಯವನ್ನೇ ನಾವು ಅರ್ಥಮಾಡಿಕೊಳುತ್ತೇವೆ ಎಂದಾದರೆ, ನಮ್ಮ ಸಾಮರ್ಥ್ಯದ ಮೇಲೇಕೆ ನಮಗೆ ನಂಬಿಕೆ ಇಲ್ಲ? ನಮ್ಮ ಗಾತ್ರ ಎಷ್ಟೇ ಇರಲಿ ಪ್ರಯತ್ನವನ್ನೇಕೆ ಕೈಚೆಲ್ಲಬೇಕು? ಸಾಧಿಸುವ ಹಠವನ್ನೇಕೆ ಮರೆಯಬೇಕು? ನಮ್ಮನ್ನು ನಾವು ಉಪ್ಪು ಎಂದೇ ಭಾವಿಸಿಕೊಂಡರೂ ತಪ್ಪಲ್ಲ. ಏಕೆಂದರೆ ಉಪ್ಪಿಲ್ಲದೇ ಊಟ ರುಚಿಯೇ ಅಲ್ಲ. ಬಲ್ಬ ಚಿಕ್ಕದಾದರೂ ಒಂದು ರೂಮಿಗೆ ಬೆಳಕು ನೀಡುವುದು ಅದೇ ತಾನೇ? ಅವುಗಳಿಗೆಂದೂ ಇರದ ಸಾಮರ್ಥ್ಯದ ಸಂಶಯ ನಮಗೇಕೆ? ಮೂಲಂಗಿಗಿಂತ ಗುಲಾಬಿಯ ಪರಿಮಳವೇ ಚೆನ್ನ, ಮಾತ್ರಕ್ಕೆ ಮೂಲಂಗಿ ಚಟ್ನಿಯ ರುಚಿಯನ್ನು ಗುಲಾಬಿ ನೀಡುವುದೇನು? ಮೂಲಂಗಿಗೆ ಗುಲಾಬಿಯಂತಹ ಪರಿಮಳವಿಲ್ಲ ಎಂದು ನಾವು ಯೋಚಿಸಿದರೆ ಅದಕ್ಕಿಂತ ಮೂರ್ಖತನ ಇನ್ನೇನಿದೆ?

ಗುಲಾಬಿಗೆ ಪರಿಮಳ, ಅಂದವಿದ್ದರೆ ಗೌರವಿಸಿ ಹಾಗೆಯೇ ಮೂಲಂಗಿಯಲ್ಲಿ ಇರುವ ಔಷಧೀಯ ಗುಣವನ್ನು ಆಸ್ವಾದಿಸಿ. ಗುಲಾಬಿಯಂತೆ ಮೂಲಂಗಿಯಿಲ್ಲ, ಮೂಲಂಗಿಯಂತೆ ಗುಲಾಬಿಯಿಲ್ಲವಲ್ಲ ಎಂದು ಹಲುಬುತ್ತಾ ಕೂತರೆ ನಷ್ಟ ಯಾರಿಗೆ ಹೇಳಿ?



ಷಟ್ಪದಿ ಬ್ರಹ್ಮ – ರಾಘವಾಂಕ

# ನಮಸ್ಕಾರ ಒಂದು ಒಳ್ಳೇ ಸಂಸ್ಕೃತಿ

(ಸಂಗ್ರಹ) ಎಮ್. ಚನ್ನಕೇಶವಪ್ಪ.

"ಸರಸ್ವತಿ ನಮಸ್ತುಭ್ಯಂ" ಎನ್ನುತ್ತಾ ಅಕ್ಷರಾಭ್ಯಾಸ ಶುರುಮಾಡುವುದಕ್ಕಿಂತ ಮೊದಲು ಸರಸ್ವತಿ ಜ್ಞಾನ ದೇವಿಗೆ ವಿಜ್ಞಾನದೀಪ ಕಾಂತಿಯುತವಾಗಿ ಬೆಳಗಿಸೆಂದು ಮೊದಲು ನಮಸ್ಕರಿಸುತ್ತೇವೆ. ತದನಂತರ "ಮಾತೃದೇವೋಭವ" "ಪಿತೃದೇವೋಭವ" ಎನ್ನುತ್ತಾ ಜೀವನ ಪ್ರದಾತರಾದ ತಾಯಿ ತಂದೆಗೆ ನಂತರ ವಿದ್ಯಾಜ್ಞಾನ ಪ್ರಧಾನ ಮಾಡುವ ಗುರುಗಳಿಗೆ ನಮಸ್ಕರಿಸುತ್ತೇವೆ. ವಂದೇಮಾತರಂ ಎಂದು ಜನ್ಮಭೂಮಿಗೆ, 'ವಂದೇಶಂಭು ಉಮಾಪತಿಂ, ಕೃಷ್ಣಂ ವಂದೇ ಜಗದ್ಗುರುಂ' ಎಂದು ದೇವರುಗಳಿಗೆ ನಮಸ್ಕರಿಸುತ್ತೇವೆ. ಜೀವನದಲ್ಲಿ ಈ ರೀತಿ ಪ್ರಾರಂಭವಾಗುವ ನಮಸ್ಕಾರಗಳು ನಮ್ಮ ಸಂಸ್ಕೃತಿಗೆ, ನಮ್ಮ ಸಂಪ್ರದಾಯಕ್ಕೆ ಸಂಸ್ಕಾರವಾಗುತ್ತೆ, ಎರಡು ಕೈ ಜೋಡಿಸಿ ಹೃದಯ ಪೂರಕವಾಗಿ ನಾವು ನಮಸ್ಕಾರ ಮಾಡುವ ನಮ್ಮ ದೇಶದ ರೀತಿ ವಿಧಾನ ಪಾಶ್ಚಾತ್ಯ ದೇಶದವರಿಗೂ ಸನ್ಮೋಹಿತರನ್ನಾಗಿ ಮಾಡುತ್ತದೆ.

'ಶಿವಪಂಚಾಕ್ಷರಿ', 'ನಾರಾಯಣ ಅಷ್ಟಾಕ್ಷರಿ' ಮಹಾಮಂತ್ರಗಳು ನಮಃ ಶಬ್ದದಿಂದಲೇ ಶುರುವಾಗುತ್ತವೆ, ಆದ್ದರಿಂದಲೇ ಪರಮೇಶ್ವರರನ್ನು ನಮಸ್ಕಾರ ಪ್ರಿಯ ಎಂದು ಹೇಳುತ್ತಾರೆ. "ತೈತ್ತಿರೀಯ ಉಪನಿಷತ್‌ನಲ್ಲಿ" ಪರಮಾತ್ಮನಿಗೆ ನಮಸ್ಕರಿಸು ಆಗ ಕೋರಿಕೆಗಳೇ ನಿನಗೆ ನಮಸ್ಕರಿಸುತ್ತವೆ ಎಂದು ಹೇಳಲಾಗಿದೆ. ತಮ್ಮಷ್ಟಕ್ಕೆ ತಾವೇ ಸರ್ವಶುಭಗಳು ಲಭ್ಯವಾಗುವ ಹಾಗೆ ಈ ನಮಸ್ಕಾರಗಳಿಂದಾಗುತ್ತವೆ.

ನಮಸ್ಕಾರ ಮಾಡುವುದರಿಂದ ಲಾಭವೇನು ಎಂದು ಸಂದೇಹ ಬಂದರೆ ಭಗವಂತನಿಗೆ ನಮಸ್ಕರಿಸುವ ಒಂದು ನಮಸ್ಕಾರ ಎಷ್ಟೋ ಬೆಲೆ ಉಳ್ಳದ್ದು ಎಂದು ಮಹಾಭಾರತದಲ್ಲಿ ಹೇಳಿದೆ.

"ಏಕೋಪಿ ಕೃಷ್ಣಸ್ಯಕೃತ:ಪ್ರಣಾಮೋ-ದಶಾಶ್ವಮೇಧಾವಭೃದೇನತುಲ್ಯ:" ಹತ್ತು ಅಶ್ವಮೇಧಯಾಗಗಳನ್ನು ಮಾಡಿದ ಅವಭೃದ ಸ್ನಾನಗಳಿಂದ ಒಂದು ನಮಸ್ಕಾರ ಸಮಾನವೆಂದರೇ? ಅದು ಎಷ್ಟು ಉನ್ನತವಾದುದೋ ಎಷ್ಟು ಬೆಲೆ ಉಳ್ಳದ್ದೊ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಕೃಷ್ಣನೆಂದರೆ ಜೀವನಕ್ಕೆ ಬೆಳಕು ಕೊಟ್ಟವನು, ಉದ್ಯೋಗ ಕೊಟ್ಟವನೂ, ಒಳ್ಳೆಯದಾಗಿ ನಡೆದುಕೊಳ್ಳಲು ಹೇಳಿದವನೂ, ದೈವಾಂಶ ಸಂಭೂತನೇ ಆದ್ದರಿಂದಲೇ ಅರ್ಹರಾದವರ ಮುಂದೆ, ಆ ಪರಮಾತ್ಮನ ಮುಂದೇ ಅಂಜಲಿ ಬದ್ಧರಾಗಿ ನಮಸ್ಕಾರ ಮಾಡಿ ಆಶೀರ್ವಾದ ಪಡೆಯೋಣ.

ಸುಭಾಷಿತ ರತ್ನಾವಳಿಯಲ್ಲಿ

"ಜನನಿ ಜನ್ಮ ಭೂಮಿಶ್ಚ ಜಾಹ್ನವೀಚ ಜನಾರ್ಧನ:।

ಜನಕಃ ಪಂಚಮಶ್ಚೈವ ಜಕಾರಾಃ ಪಂಚ ದುರ್ಲಭಾಃ॥

"ಜ" ಎಂಬ ಅಕ್ಷರದಿಂದಾಗುವ ಜನನಿ(ಹೆತ್ತತಾಯಿ) ಜನ್ಮ ಭೂಮಿ, ಜಾಹ್ನವಿ(ಗಂಗಾ), ಜನಾರ್ಧನ(ಪರಮಾತ್ಮ), ಜನಕ(ತಂದೆ), ಈ ಐದಕ್ಕೆ ಬೆಲೆ ಕಟ್ಟಲಾಗದಷ್ಟು ಅಮೂಲ್ಯವಾಗಿವೆ.

ನಮಸ್ಕಾರ ಒಂದು ಒಳ್ಳೇ ಸಂಸ್ಕಾರ

ಇವೇ ನಮ್ಮೆಲ್ಲರ ಜ್ಞಾನ ಜ್ಯೋತಿಗಳಾಗಿವೆ ನಮ್ಮ ಜನ್ಮ ಉದ್ಧಾರ ಮಾಡುವ ಆಶೀರ್ವಾದಗಳು ಜನ್ಮ ಜನ್ಮಾಂತರಕ್ಕೂ ಇರಬೇಕಾಗಿವೆ. ಇಂಥಹವರಿಗೆ ನಾವು ತ್ರಿಕರಣಶುದ್ಧಿಯಾಗಿ, ಮನೋವಾಕ್ಕಾ ಕರ್ಮಗಳ ಸಾಕ್ಷಿಯಾಗಿ ಹೃದಯಾಂಜಲಿ ನಮಸ್ಕಾರಗಳನ್ನು ಸಮರ್ಪಿಸಿ ಧನ್ಯರಾಗೋಣ.

ವಚನ ಭಾಗವತ....

# ಶ್ರೀಹರಿಯು ಮೀನಾದನೇಕೆ?

ಲೇ:-ತ. ಸು. ಶಾಮರಾಯ

ಬಲೀಂದ್ರನ ಕಥೆಯನ್ನು ಕೇಳಿ ಸಂತೋಷಗೊಂಡು ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು 'ಸ್ವಾಮಿ, ಶ್ರೀ ಹರಿಯು ಹಲವು ಅವತಾರಗಳನ್ನು ಎತ್ತಿದನೆಂದು ಹೇಳುತ್ತಾರೆ. ಆ ಅವತಾರಗಳ ಸಾಲಿನಲ್ಲಿ ಆತನು ಮೀನಾಗಿ ಹುಟ್ಟಿದುದೂ ಒಂದಂತೆ! ಪ್ರಾಣಿಗಳಲ್ಲೆಲ್ಲ ಅತ್ಯಂತ ಕೀಳಾದ ಮೀನಿನ ಅವತಾರವನ್ನು ಆತ ಏಕೆ ಎತ್ತಿದ?' ಎಂದು ಪ್ರಶ್ನಿಸಿದನು. ಆಗ ಶುಕಮುನಿಯು ಗಹಗಹಿಸಿ ನಗುತ್ತಾ 'ಅಯ್ಯಾ, ನಿನಗೆ ಕೀಳಾಗಿದ್ದ ಮಾತ್ರಕ್ಕೆ ಭಗವಂತನಿಗೂ ಅದು ಕೀಳೆಂದು ಹೇಳಬಹುದೇ? ಜ್ಞಾನಿಗಳ ದೃಷ್ಟಿಯಲ್ಲಿ ನೀನೂ ಒಂದೇ, ಮೀನು ಒಂದೇ. ಸಾಧು ಸಜ್ಜನರಿಗೆ ಸಂಕಟವೊದಗಿದಾಗ ಧರ್ಮಕ್ಕೆ ಲೋಪ ಬಂದಾಗ ಭಗವಂತನು ಆಯಾ ಸಂದರ್ಭಕ್ಕೆ ಅಗತ್ಯವಾದಂತಹ ರೂಪವನ್ನು ಧರಿಸಿ ಅವತರಿಸುತ್ತಾನೆ. ಅದರಂತೆ, ಆತನು ಅಗತ್ಯವೆಂದು ತೋರಿಬಂದಾಗ ಮತ್ಸ್ಯಾವತಾರವನ್ನೂ ತಾಳಿದನು. ಅದರ ಕಥೆಯನ್ನು ಹೇಳುತ್ತೇನೆ ಕೇಳು.

ಹಿಂದೆ, ಬಹು ಹಿಂದೆ, ಈ ಕಲ್ಪಕ್ಕೂ ಹಿಂದೆ, ಹಿಂದಿನ ಕಲ್ಪ ಕೊನೆಯಾಗುವ ಮುನ್ನ, ಬ್ರಹ್ಮನ ಒಂದು ಹಗಲು ಮುಗಿದು ರಾತ್ರಿಯಾದಾಗ, ಮಹಾಪ್ರಳಯವೊಂದು ಸಂಭವಿಸಿತು. ಬ್ರಹ್ಮನು ಗಾಢನಿದ್ರೆಯಲ್ಲಿ ಮುಳುಗಿಹೊದನು. ಮಲಗಿದ್ದ ಬ್ರಹ್ಮನು ಉಸಿರಾಡುತ್ತಿರುವಾಗ ಆತನ ಉಸಿರಿನಿಂದ ಹೊರಬಂದ ವೇದಗಳನ್ನು ಹಯಗ್ರೀವನೆಂಬ ರಾಕ್ಷಸನು ಹೊತ್ತುಕೊಂಡು ಹೋದನು. ಆ ರಕ್ಕಸನನ್ನು ಕೊಂದು ವೇದಗಳನ್ನು ಉದ್ಧರಿಸುವುದಕ್ಕಾಗಿ ಶ್ರೀಹರಿಯು ಮೀನಿನ ಅವತಾರವನ್ನು ಎತ್ತಬೇಕಾಯಿತು. ಆ ವೇಳೆಗೆ ಸರಿಯಾಗಿ ಸತ್ಯವ್ರತನೆಂಬ ರಾಜಋಷಿಯೊಬ್ಬನು ಶ್ರೀಹರಿಯ ಕುರಿತು ತಪಸ್ಸು ಮಾಡುತ್ತಿದ್ದನು. ಆತನು ನೀರಿನಿಂದ ತರ್ಪಣ ಕೊಡುತ್ತಿದ್ದಾಗ ಆತನ ಬೊಗಸೆಯಲ್ಲಿದ್ದ ನೀರಿನಲ್ಲಿ ಸಣ್ಣದೊಂದು ಮೀನು ಕಾಣಿಸಿತು. ಆತನು ಅದನ್ನು ನೀರೊಳಕ್ಕೆಸೆದನು. ಅದು ರಾಜನನ್ನು ಕುರಿತು 'ಅಯ್ಯಾ, ಸಣ್ಣ ಮೀನನ್ನು ಕಂಡರೆ ದೊಡ್ಡ ಮೀನು ನುಂಗಿಹಾಕುತ್ತದೆ. ಇದು ನಿನಗೆ ಗೊತ್ತಿಲ್ಲದ ವಿಷಯವೇನೂ ಅಲ್ಲ. ಆದ್ದರಿಂದ ನನ್ನ ಜೀವಭಯ ನೀಗುವಂತೆ ನನ್ನನ್ನು ಈ ಜಲರಾಶಿಯಿಂದ ಹೊರಕ್ಕೊಯ್ದು ಕಾಪಾಡು' ಎಂದು ಬೇಡಿಕೊಂಡಿತು. ಕರುಣಾಳುವಾದ ಆ ರಾಜಋಷಿ ಅದನ್ನು ತನ್ನ ಕಲಶದಲ್ಲಿ ಇಟ್ಟುಕೊಂಡು ತನ್ನ ಆಶ್ರಮಕ್ಕೆ ಕೊಂಡೊಯ್ದನು.

ಸತ್ಯವ್ರತನು ಕೊಂಡೊಯ್ದ ಮೀನು ಸಾಮಾನ್ಯವಾದ ಮೀನಲ್ಲ. ಮರುದಿನ ಬೆಳಗಾಗುವ ಹೊತ್ತಿಗೆ ಅದು ರಾಜನ ಕಲಶದ ತುಂಬ ಬೆಳೆದಿತ್ತು. ಇನ್ನು ಅದರೊಳಗಿರುವುದು ಅದಕ್ಕೆ ಸಾಧ್ಯವಿರಲಿಲ್ಲ. ಆದ್ದರಿಂದ 'ಪುಣ್ಯಾತ್ಮ, ನಾನು ಸುಖವಾಗಿ ವಾಸಮಾಡಲು ಸಾಧ್ಯವಾಗುವಂತಹ ವಿಸ್ತಾರವಾದ ಒಂದು ನೀರಿನ ಸ್ಥಳದಲ್ಲಿ ನನ್ನನ್ನು ಇಡು' ಎಂದು ಸತ್ಯವ್ರತನನ್ನು ಬೇಡಿಕೊಂಡಿತು. ಆತನು ಅದನ್ನು ಎತ್ತಿ ದೊಡ್ಡದೊಂದು ನೀರಿನ ಹಂಡೆಯಲ್ಲಿ ಇಟ್ಟ. ಅದು ಕ್ಷಣಮಾತ್ರದಲ್ಲಿ ಹಂಡೆಯ ತುಂಬ ಬೆಳೆಯಿತು. ಅದರ ಅಪೇಕ್ಷೆಯಂತೆ ಅದನ್ನು ಒಂದು ಬಾವಿಯಲ್ಲಿ ಇಟ್ಟುದಾಯಿತು. ಮರುನಿಮಿಷ ಅದು ಸಾಲದೆ, ಆ ಮೀನನ್ನು ನದಿಯಲ್ಲಿ, ಅನಂತರ ಒಂದು ಸರೋವರದಲ್ಲಿ ಇಟ್ಟು, ಅದರ ಗಾತ್ರಕ್ಕೆ ಆ ನದಿ, ಸರೋವರಗಳೂ ಸಾಲದೆ ಹೋದುದರಿಂದ ಅದನ್ನು ಸಮುದ್ರಕ್ಕೆ ಒಯ್ದು ಮುಟ್ಟಿಸಿದುದಾಯಿತು. ಅದು ಅಲ್ಲಿಯೂ ಕೊನೆಮೊದಲಿಲ್ಲದೆ ಬೆಳೆಯುತ್ತಾ ಇತ್ತು. ಅದನ್ನು ಕಂಡ ಸತ್ಯವ್ರತನು ಅತ್ಯಂತ ಆಶ್ಚರ್ಯದಿಂದ 'ಹೇ ಮೀನಿನ ರೂಪದಲ್ಲಿರುವ ಮಹಾನುಭಾವ ನೀನು ಯಾರು? ಹಿಂದೆ ಎಂದೂ ಕಂಡು ಕೇಳದ ನಿನ್ನ ಪವಾಡವನ್ನು ನೋಡಿ ನಾನು ಮರುಳಾಗಿದ್ದೇನೆ. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಭಗವಂತನೇ ನೀನೆಂದು ನನಗನಿಸುತ್ತಿದೆ. ಮೀನಿನ ರೂಪದಿಂದ ಕಾಣಿಸಿಕೊಂಡು ನನ್ನನ್ನು ಉದ್ಧರಿಸಹೊರಟಿರುವೆಯೋ ಏನೋ!' ಎಂದನು.

ಸತ್ಯವ್ರತನ ನುಡಿಗಳಿಂದ ಸಂತಸಗೊಂಡ ಆ ಮೀನು 'ಅಯ್ಯಾ, ಭಕ್ತ, ಇಂದಿಗೆ ಏಳುದಿನಕ್ಕೆ ಮೂರು ಲೋಕಗಳೂ ಪ್ರಳಯದ ನೀರಿನಲ್ಲಿ ಮುಳುಗಿಹೋಗುತ್ತವೆ. ಆಗ ಒಂದು ದೊಡ್ಡ ಹಡಗು ನಿನ್ನ ಬಳಿ ಬರುತ್ತದೆ. ನೀನು ಜಗತ್ತಿನಲ್ಲಿರುವ ಎಲ್ಲ ಪ್ರಾಣಿವರ್ಗಗಳನ್ನೂ ಸಸ್ಯಗಳ ಬೀಜಗಳನ್ನೂ ಸಿದ್ಧವಾಗಿ ಇಟ್ಟುಕೊಂಡಿದ್ದು, ಆ ಹಡಗು ನಿನ್ನ ಸಮೀಪಕ್ಕೆ ಬರುತ್ತಲೆ ಅವನ್ನೆಲ್ಲ ಅದರಲ್ಲಿ ತುಂಬಿ, ಸಪ್ತಋಷಿಗಳೊಡನೆ ನೀನೂ ಅದರಲ್ಲಿ ಕುಳಿತು ಪ್ರಯಾಣಮಾಡು. ಆಗ ಕಗ್ಗತ್ತಲೆ ಕವಿದಿದ್ದರೂ ಸಪ್ತಋಷಿಗಳ ದೇಹಕಾಂತಿಯಿಂದ ನೀನು ನಿರಾತಂಕವಾಗಿ ಸಂಚರಿಸಬಹುದು. ಪ್ರಳಯದ ಬಿರುಗಾಳಿಗೆ ಸಿಕ್ಕಿ ಹಡಗು ತಲೆಕೆಳಗಾಗುವಂತಾಗುತ್ತದೆ. ಆದರೂ ನೀನು ಭಯಪಡಬೇಡ. ಆ ವೇಳೆಗೆ ಸರಿಯಾಗಿ ನಾನು ಅಲ್ಲಿ ಕಾಣಿಸಿಕೊಳ್ಳುತ್ತೇನೆ. ಆಗ ನೀನು ಹಡಗನ್ನು ಒಂದು ಹೆಬ್ಬಾವಿನಿಂದ ನನ್ನ ಮುಖದ ಮೇಲಿನ ಕೊಂಬಿಗೆ ಕಟ್ಟಿಹಾಕು. ಹಾಗೆ ಮಾಡಿದರೆ ಹಡಗು ಅಲುಗಾಡದೆ ನಿಲ್ಲುತ್ತದೆ. ನಾನು ಅದನ್ನು ಬ್ರಹ್ಮನು ನಿದ್ದೆಯಿಂದ ಮೇಲಕ್ಕೇಳುವವರೆಗೆ ಸಮುದ್ರದಲ್ಲಿ ಸುತ್ತಿಸುತ್ತಿರುತ್ತೇನೆ. ಆ ಸಮಯದಲ್ಲಿ ನಾನು ನನ್ನ ಸ್ವರೂಪವನ್ನೂ ಮಹಿಮೆಯನ್ನೂ ನಿನಗೆ ವಿಶದವಾಗಿ ಉಪದೇಶಿಸುತ್ತೇನೆ' ಎಂದು ಹೇಳಿ, ಆ ಮೀನು ಮಾಯವಾಗಿ ಹೋಯಿತು.

ಮೀನುರೂಪಿಯಾದ ಭಗವಂತನು ಹೇಳಿದ ಕಾಲವನ್ನು ನಿರೀಕ್ಷಿಸುತ್ತಾ ಸತ್ಯವ್ರತನು ಆ ಭಗವಂತನ ಧ್ಯಾನದಲ್ಲಿಯೇ ಮಗ್ನನಾಗಿ ಕುಳಿತಿರಲು, ಏಳು ದಿನಗಳಿಗೆ ಸರಿಯಾಗಿ ಭಯಂಕರವಾದ ಮಳೆ ಬಂದು, ಜಗತ್ತೆಲ್ಲವೂ ಒಂದು ದೊಡ್ಡ ಸಮುದ್ರವಾಗಿ ಹೋಯಿತು. ಅಷ್ಟರಲ್ಲಿ ದೊಡ್ಡದೊಂದು ಹಡಗು ಸತ್ಯವ್ರತನ ಬಳಿಗೆ ಬಂದಿತು. ಆತನು ತಾನು ಸಂಗ್ರಹಿಸಿಟ್ಟುಕೊಂಡಿದ್ದ ಸಸ್ಯ ಬೀಜಗಳನ್ನು ಹಡಗಿಗೆ ತುಂಬಿ, ಸಪ್ತರ್ಷಿಗಳೊಡನೆ ತಾನೂ ಹಡಗನ್ನೇರಿದನು. ಆ ವೇಳೆಗೆ ಸರಿಯಾಗಿ ಮೀನಿನಾಕಾರದ ಜಗದೀಶ್ವರನು ಅಲ್ಲಿ ಕಾಣಿಸಿಕೊಂಡನು. ಆ ಮಹಾಮೀನಿಗೆ ಖಡ್ಗಮೃಗದಂತೆ ಮೂತಿಯಮೇಲೆ ದೊಡ್ಡದೊಂದು ಕೊಂಬಿತ್ತು. ಸತ್ಯವ್ರತನು ಅದಕ್ಕೆ ಹಡಗನ್ನು ಭದ್ರವಾಗಿ ಕಟ್ಟಿ, ನಿರಾತಂಕವಾದ ಮನಸ್ಸಿನಿಂದ ಭಗವಂತನನ್ನು ಪರಿಪರಿಯಾಗಿ ಸ್ತೋತ್ರಮಾಡಿದನು. ಸುಪ್ರೀತನಾದ ಭಗವಂತನು ಆತನಿಗೆ ಆತ್ಮ ತತ್ವವನ್ನು ವಿವರಿಸಿ ಹೇಳಿದನು. ಬ್ರಹ್ಮನು ನಿದ್ರೆ ತಿಳಿದು ಮೇಲಕ್ಕೆ ಏಳುವವರೆಗೂ ಸತ್ಯವ್ರತನು ಮಹಾಮತ್ಸ್ಯದ ಸಹಾಯದಿಂದ ಸಮುದ್ರದಲ್ಲಿ ವಿಹರಿಸುತ್ತಲೇ ಇದ್ದನು. ಪ್ರಳಯದ ಕೊನೆಯಲ್ಲಿ ಬ್ರಹ್ಮನು ನಿದ್ರೆಯಿಂದ ಮೇಲಕ್ಕೆದ್ದನು. ಒಡನೆಯೆ ಮತ್ಸ್ಯಮೂರ್ತಿಯು ಹಯಗ್ರೀವ ರಾಕ್ಷಸನನ್ನು ಕೊಂದು ವೇದಗಳನ್ನು ಬ್ರಹ್ಮನಿಗೆ ಕೊಟ್ಟನು. ಆ ದೇವದೇವನ ಅನುಗ್ರಹದಿಂದ ಸತ್ಯವ್ರತನು ಆ ಕಲ್ಪದ ಮನುವಾದನು.

"ನಾನು" ದೇಹವಲ್ಲ, ಭಾವೋದ್ವೇಗದ ರಾಶಿಯಲ್ಲ, ಸ್ತ್ರೀ-ಪುರುಷನಲ್ಲ. ಭೌತಿಕ ಜಗತ್ತಿಗಿಂತ ಹೆಚ್ಚಿನದಾದ ಸತ್ಯವೂ, ಮೌಲ್ಯವುಳ್ಳದ್ದೂ ಆದ ವಿಶಾಲ ಆಧ್ಯಾತ್ಮಿಕ ತತ್ವದ ಅಂಶವು "ನಾನು" ಎಂದು ತಿಳಿಯುವುದೇ ಆಧ್ಯಾತ್ಮಿಕ ಜೀವನ ತಳಹದಿಯು.

–ಪರಮಪೂಜ್ಯ ಶ್ರೀ ಶ್ರೀ ಶ್ರೀ ಮಾರುತಿ ಗುರೂಜಿ.

# ನೇಸರ



ಭೂವಿಗೆ ಸುಂದರ
ಸೊಬಗನೀಯುತ
ಬಂದ ನೇಸರ
ದಿವ್ಯ ಕಳೆಯಲಿ ।1।

ಹಕ್ಕಿಗಳ ಕಲರವವು
ದುಂಬಿಗಳ ಝೇಂಕಾರ
ತೆಂಗು ಕಂಗುಗಳು
ತಲೆಬಾಗಿ ನಮಿಸುತಲಿ ।2।

ಮೊಗ್ಗು ತಾವರೆ
ತಾನರಳಿ ಹೂವಾಗಿ
ತಳಿರು ತೋರಣದ
ಸಿಂಗಾರ ಶೃಂಗಾರ ।3।

ಪ್ರಕೃತಿ ಸೊಬಗನು
ಸವಿಯುತಲಿ
ಅಲ್ಲಲ್ಲಿ ರಂಗು
ರಂಗಿನ ರಂಗೋಲಿ ।4।

ಕೋಟಿ ಪ್ರಭೆಯ
ಆಭರಣತೊಟ್ಟು
ನಕ್ಕು ನಲಿಸುತ ಬಂದ
ದಿನವೂ ನಿತ್ಯ ಸತ್ಯ ಆದಿತ್ಯ! ।5।

–ಲೆ॥ ಶ್ರೀಮತಿ ಸಾವಿತ್ರಿ ಹೆಗಡೆ.

# ಪದಬಂಧ–38

–ಶ್ರೀ ಗುರು ದಾಸ.

**ಎಡದಿಂದ ಬಲಕ್ಕೆ :–**

1. ಕನ್ನಡಿಗರು ಕನ್ನಡಿಗರಾಗಿ ಆಚರಿಸುವ ಹಬ್ಬ –4
3. ಇದು ತಿನ್ನುವ ಆಹಾರವು ಹೌದು, ಐತಿಹಾಸಿಕ ಸ್ಥಳವು ಹೌದು –3
5. ಅತಿಯಾಸೆಯ ದುರ್ಬುದ್ಧಿ ಇಲ್ಲಿ ತಿರುಗಿದೆ–3



6. ನೋಡಬೇಕೆನ್ನುವ ಬಯಕೆ –4
8. ನೀರನ್ನು ಸಂಗ್ರಹಿಸಿಡಬಹುದಾದ ಒಂದು ಸಾಧನ –3
10. ವಿಚಾರಗಳ ವಿಮರ್ಶಕ –4
12. ಕೈಯಿಂದ ಉಪಯೋಗಿಸುವ ಉಪಕರಣ –4
14. ಇದು ಎಣ್ಣೆಯಲ್ಲಿ ಕರಿದದ್ದಲ್ಲ, ಔಷಧ ಗುಣವಿರುವ ಗಿಡಮೂಲಿಕೆ –2
16. ಕಂಬನಿಯ ಮಿಡಿವ ನೇತ್ರ –2
17. ಬೇರೆ ಬೇರೆ ಊರುಗಳ ನಡುವೆ ಸಂಬಂಧ ಕಲ್ಪಿಸಿದೆ –3
18. ಯುದ್ಧದ ಸೂಚನೆ ನೀಡುವ ಊದುವಾದ್ಯವಿದು –3

**ಮೇಲಿಂದ ಕೆಳಕ್ಕೆ :–**

1. ಶುಭಕಾರ್ಯಕ್ಕೆ ಯೋಗ್ಯವಲ್ಲದ ಸಮಯ –4
2. ಜೀವನದ ಅವಶ್ಯಕತೆಗಳಿಗೋಸ್ಕರ ವಾಸಸ್ಥಳದ ತಾತ್ಕಾಲಿಕ ಬದಲಾವಣೆ –3
3. ತಲೆಯ ಕೂದಲನ್ನು ಶಿಸ್ತಾಗಿರಿಸಲು ಇದು ಬೇಕು –4
4. ಪ್ರಕಾಶಮಾನವಾಗಿ ಕಾಣುತ್ತಿದೆ –3
7. ಕ್ಷುದ್ರಶಕ್ತಿಗಳ ಆಹ್ವಾನಿಸಿ ಇಷ್ಟಾರ್ಥ ಪೂರೈಸಿಕೊಳ್ಳುವ ವಿದ್ಯೆ –4
8. ಮಹಾರಾಕ್ಷಸನ ಹೆಸರಿನೊಂದಿಗಿರುವ ಪಕ್ಷಿ –4
9. ಸುಟ್ಟ ಎಣ್ಣೆಯ ಅಸಹ್ಯ ವಾಸನೆ ತಿರುಗಿದೆ –3
11. ಅಹಂಕಾರ ತುಂಬಿದ ಆತ್ಮಾಭಿಮಾನ –2
13. ಕಿರಿಕಿರಿಯೇ ಆದರೂ ಸಹ ಛಂದಸ್ಸಿನಲ್ಲಿಯೂ ಬಂದಿದೆ–3
15. ತಿರುಗು–ಮುರುಗಾದ ಸಂಧ್ಯಾಕಾಲದ ಸಮಯವಿದು –2
16. ವಕ್ರವಾಗಿ ಕಂಡಾಗ ಕಾಣಿಸಿದ ನೇಸರ –2

**(ಉತ್ತರ ಮುಂದಿನ ಸಂಚಿಕೆಯಲ್ಲಿ)**

**ಪದಬಂಧ–37ರ ಉತ್ತರ**

**ಎಡದಿಂದ ಬಲಕ್ಕೆ:–** 1.ದೀಪಾವಳಿ, 3.ಪಾಮರ, 5.ಮಠ, 6.ಮತಿಹೀನ, 8.ಸಸ್ಯ, 9.ಕಜ್ಜಿ, 10.ಕಡಿ, 11.ಗೆಳೆಯರು, 14.ಲಯ, 17.ಜುಲೈ, 18.ಸಮಾಜಸೇವಾ, 19.ಸೇರು, 20.ತುರುಬು. ***** **ಮೇಲಿಂದ ಕೆಳಕ್ಕೆ:–** 1.ದೀನ, 2.ವದಂತಿ, 3.ಪಾಠ, 4.ರಹಸ್ಯ, 5.ಮನ, 6.ಮಜ್ಜಿಗೆ, 7.ಹೀನಾಯ, 8.ಸಡಿಲ, 12.ಳೆಬಾಜರಾ(ರಾಜಬಾಳೆ), 13.ರುಜುವಾತು, 15.ಯಕ್ಷರು, 16.ಆಸರೆ, 19.ಸೇಬು.



ಸಣ್ಣ ಕಥೆಗಳ ಜನಕ – ಮಾಸ್ತಿ ವೆಂಕಟೇಶ ಅಯ್ಯಂಗಾರ